ನ ಕಾರ್ಯಾಲಯ
ಬಸವನಗುಡಿ
ಬೆಂಗಳೂರು

ಕರ್ಣಾಟಕದ ಜನತೆಯ ಸಂಸ್ಕೃತಿ

ಮಾಸ್ತಿ ವೆಂಕಟೇಶ ಅಯ್ಯಂಗಾರ್

ಜೀವನ ಕಾರ್ಯಾಲಯ
ಬೆಂಗಳೂರು

ಮೊದಲನೆಯ ಮುದ್ರಣ : ೧೯೩೧
ಎರಡನೆಯ ಮುದ್ರಣ : ೧೯೪೪
ಮೂರನೆಯ ಮುದ್ರಣ : ೧೯೫೨
ನಾಲ್ಕನೆಯ ಮುದ್ರಣ : ೧೯೫೭
ಐದನೆಯ ಮುದ್ರಣ : ೧೯೬೯

ಬೆಲೆ: ರೂ ೧-೦೦

ಬೃಂದಾವನ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ (ಪ್ರೈ.) ಲಿಮಿಟೆಡ್
ಬೆಂಗಳೂರು–೪

ಮೊದಲನೆಯ ಮುದ್ರಣದ ಮುನ್ನುಡಿ

ಸರ್ ಆರ್. ವೆಂಕಟರತ್ನಂ ನಾಯಡು ಅವರು ಮದ್ರಾಸಿನ ವಿಶ್ವ ವಿದ್ಯಾಲಯದ ವೈಸ್-ಛಾನ್‌ಸಲರ್ ಪದವಿಯಲ್ಲಿದ್ದಾಗ್ಯೆ ಆ ವಿಶ್ವ ವಿದ್ಯಾಲಯದ ಆಶ್ರಯದಲ್ಲಿ ದ್ರಾವಿಡ ದೇಶದ ಸಂಸ್ಕೃತಿಯನ್ನು ಕುರಿತು ಕೆಲವು ಉಪನ್ಯಾಸಗಳು ನಡೆಯುವಂತೆ ಏರ್ಪಾಡು ಮಾಡಿದರು. ಆ ಸಂದರ್ಭದಲ್ಲಿ ಕರ್ಣಾಟಕ ಶಾಖೆಯಲ್ಲಿ ಉಪನ್ಯಾಸ ಮಾಡುವ ಪುಣ್ಯ ನನ್ನ ಪಾಲಿಗೆ ಬಂದಿತು. ಕರ್ಣಾಟಕದ ಜನತೆಯ ಸಂಸ್ಕೃತಿಯನ್ನು ಕುರಿತ ಈ ಉಪನ್ಯಾಸವು ಆಗ ನಾನು ಮದ್ರಾಸಿನಲ್ಲಿ ಮಾಡಿದ ನಾಲ್ಕು ಭಾಷಣಗಳ ಸಾರಾಂಶ. ಅವಶ್ಯಕವೆಂದು ತೋರಿದ ಎರಡು ಕಡೆ ಈಚೆಗೆ ಕಂಡ ವಿಷಯದ ಪ್ರಸ್ತಾಪ ಮಾಡಿದೇನೆ. ಈ ಉಪನ್ಯಾಸದಲ್ಲಿ ಬೇರೆ ಬೇರೆ ಮತಗಳ ಮೇಲ್ಮೆ ಕೀಳ್ಮೆಗಳನ್ನು ತೋರಿಸಲು ಉದ್ದೇಶಿಸಿದೇನೆಂದು ಯಾರೂ ಭಾವಿಸಬಾರದು. ಕುಂದು ಕೊರತೆಗಳ ಮಾತನ್ನಾಡುವಾಗ ನನ್ನ ದೃಷ್ಟಿ ವಿಷಯದ ಮೇಲೆ ಇದ್ದಿದೆಯೇ ಹೊರತು ವ್ಯಕ್ತಿ ಅಥವಾ ಜಾತಿಗಳ ಮೇಲೆ ಹೋಗಿಲ್ಲ. ಮುಖ್ಯವಾಗಿ ನಮ್ಮ ಜನ ಮುಂದುವರಿಯ ಬೇಕಾದರೆ ನಮ್ಮ ಈಗಣ ಸ್ಥಿತಿಯನ್ನು ಕುರಿತ ವಿಚಾರ ಅವಶ್ಯಕ. ಈ ವಿಚಾರದ ವಿಷಯವನ್ನು ಸಂಕ್ಷೇಪವಾಗಿ ಸೂಚಿಸುವುದು ಇಲ್ಲಿಯ ಉದ್ದೇಶ. ಈ ಉಪನ್ಯಾಸಗಳನ್ನು ಏರ್ಪಡಿಸಿದ್ದಕ್ಕಾಗಿ ಸರ್ ಆರ್. ವೆಂಕಟ ರತ್ನಂ ನಾಯಡು ಅವರಿಗೂ, ಉಪನ್ಯಾಸಮಾಡುವ ಮರ್ಯಾದೆಯನ್ನು ನನಗೆ ತೋರಿದ್ದಕ್ಕಾಗಿ ಮದ್ರಾಸು ವಿಶ್ವವಿದ್ಯಾಲಯದ ನನ್ನ ಮಿತ್ರರಿಗೂ ಭಾಷಣಗಳ ಕಾಲದಲ್ಲಿ ವ್ಯಕ್ತಪಡಿಸಿದ ವಂದನೆಯನ್ನು ನಾನು ಈಗ ಮರಳಿ ಸೂಚಿಸುತ್ತೇನೆ. ಈ ಉಪನ್ಯಾಸವು ಪ್ರಬುದ್ಧ ಕರ್ಣಾಟಕದಲ್ಲಿ ಅಚ್ಚಾಗುತ್ತಿದೆ. ಇದಕ್ಕೆ ಅದರಲ್ಲಿ ಅವಕಾಶವನ್ನು ಕೊಟ್ಟದ್ದಕ್ಕಾಗಿ ನಾನು ಆ ಪತ್ರಿಕೆಯ ಕರ್ತರಿಗೆ ಕೃತಜ್ಞನಾಗಿದೇನೆ.

ಬೆಂಗಳೂರು
ಪ್ರಜೋತ್ಪತ್ತಿ ಸಂವತ್ಸರ
ಆಶ್ವಯುಜ ಶುದ್ಧ ಪಂಚಮಿ

ಮಾಸ್ತಿ ವೆಂಕಟೇಶ ಅಯ್ಯಂಗಾರ್

ಕರ್ಣಾಟಕದ

ಜನತೆಯ ಸಂಸ್ಕೃತಿ

ವಿಷಯದ ಸ್ವರೂಪ : ವಿಚಾರದ ಆವಶ್ಯಕತೆ

ಭರತಖಂಡದ ಪ್ರಕೃತ ಸ್ಥಿತಿಯಲ್ಲಿ ಸಮಾಜ ನೇತೃಗಳು ಜನಸಾಮಾನ್ಯದ ಸಂಸ್ಕೃತಿಯನ್ನು ಕುರಿತು ವಿಚಾರ ಮಾಡುವುದು ಹಲವು ಕಾರಣಗಳಿಂದ ಆವಶ್ಯಕವಾಗಿದೆ. ನಮ್ಮ ಜನದ ಜೀವನ ಈಗ ಹೊಸದೊಂದು ರೀತಿಯಲ್ಲಿ ಬಹುಮುಖವಾಗಿ ಹಬ್ಬುತ್ತಿದೆ. ಈ ಹಬ್ಬುಗೆ ಶುಭಪ್ರದವಾಗಬೇಕಾದರೆ ನಾವು ಅದನ್ನು ಸರಿಯಾದ ದಾರಿಗಳಿಗೆ ತಿದ್ದಿಕೊಳ್ಳಬೇಕು. ಹಳೆಯದನ್ನು ತೀರಾ ಬಿಡದೆ ಅದಕ್ಕೆ ಅತಿಯಾಗಿ ಕಟ್ಟು ಬೀಳದೆ ವಿವೇಚನೆಯಿಂದ ನಡೆದುಕೊಳ್ಳಬೇಕು. ಅಲ್ಲದೆ ಹೊರಗಿನಿಂದ ಬರುವ ಅನೇಕರೂ, ಅವರ ಅನುಕರಣದಲ್ಲಿ ಕ್ಷೇಮವನ್ನು ಕಾಣುವ ನಮ್ಮವರು ಕೆಲವರೂ, ನಮ್ಮ ಸಂಸ್ಕೃತಿಯಲ್ಲಿ ದೋಷಗಳನ್ನು ನಿರ್ದೇಶಿಸುವರು. ಇಂಥವರು ನಿಂದಿಸುವ ಸಂಸ್ಕೃತಿ ನಮ್ಮದು ಎಂಬ ಕಾರಣದಿಂದ ನಾವು ಕೋಪಮಾಡಿದರೆ ಉಪಯೋಗವಿಲ್ಲ, ಅಥವಾ ಇವರು ತಿಳಿದವರು, ಹೇಳಿದರು, ಎಂದು ಅವರು ಹೇಳಿದ್ದನ್ನೆಲ್ಲ ಒಪ್ಪಿಕೊಂಡರೂ ಒಳ್ಳೆಯದಲ್ಲ. ಇಂಥವರು ಹೇಳಿದ್ದನ್ನು ಸಾವಧಾನವಾಗಿ ಪರಿಶೀಲಿಸಿ ಅವರ ಅಭಿಪ್ರಾಯಗಳ ಸಾಧುತೆಯನ್ನು ನಮ್ಮ ಮನಸ್ಸಿಗೆ ತೃಪ್ತಿಯಾಗುವಂತೆ ನಾವು ಕಂಡುಕೊಳ್ಳಬೇಕು. ಪಾಶ್ಚಾತ್ಯ ಸಂಸ್ಕೃತಿಯ ಹೊಗಳಿಕೆಯನ್ನು ಕೇಳಿ ಕೇಳಿ ಆ ಜನದ ಏಳಿಗೆಯನ್ನು ನೋಡಿ ನೋಡಿ ನಮ್ಮಲ್ಲಿ ಅನೇಕರು ನಮ್ಮ ಸಂಸ್ಕೃತಿಯ ವಿಷಯದಲ್ಲಿ ಬಹಳ ಅತೃಪ್ತರಾಗಿರುತ್ತಾರೆ. ಇಂಥವರಿಗೆ, ನಮ್ಮ ಜನಾಂಗದ ಜೀವನದಲ್ಲಿ ದೋಷಗಳಿರುವಂತೆಯೇ ಗುಣಗಳೂ ಇವೆ, ದೋಷಗಳಿಂದ ನಾವು ಕುಗ್ಗಬೇಕಾಗಿರುವಂತೆ ಗುಣಗಳಿಂದ ನಾವು ಧೈರ್ಯಗೊಳ್ಳಬೇಕಾಗಿದೆ, ಎಂಬುದನ್ನು ನಾವು ತೋರಿಸಬೇಕು ; ನಮ್ಮ ಜನರು ಎಷ್ಟೇ ವಿನಯದಿಂದಲಾದರೂ ತಲೆಯೆತ್ತಿ

ಕೊಂಡು ನಡೆಯುವಂತೆ ಮಾಡಬೇಕು. ಇದೆಲ್ಲ ಕಾರಣಗಳಿಂದ ನಾಡ ಸಂಸ್ಕೃತಿಯನ್ನು ಕುರಿತ ವಿಚಾರ ಆವಶ್ಯಕವಾಗಿದೆ.

ರಾಜ್ಯದ ಆಡಳಿತದಲ್ಲಿ ಜನಾಂಗದ ದಿನ ದಿನದ ಕಾರ್ಯದಲ್ಲಿ ಜನದ ಸಂಸ್ಕೃತಿಯ ಜ್ಞಾನವು ಕೇವಲ ಆವಶ್ಯಕ. ಇದಕ್ಕೆ ಕೆಲವು ಉದಾಹರಣೆ ಗಳನ್ನು ಹೇಳಬಹುದು. ಯಾವುದಾದರೊಂದು ನಗರದ ಅಧಿಕಾರಿಗಳು ಬೀದಿಯ ನಾಯಿಗಳನ್ನು ಕೊಲ್ಲುವುದಕ್ಕೆ ಒಂದು ಏರ್ಪಾಡನ್ನು ಯೋಚಿಸ ಬಹುದು. ಅದಕ್ಕೆ ಒಪ್ಪುವರು ಎಷ್ಟು ಜನ ? ಊರು ಚೊಕ್ಕಟವಾಗ ಬೇಕು. ನಿಜ. ಆದರೆ ಅದಕ್ಕೆ ನಾಯನ್ನು ಕೊಲ್ಲುವುದೆಂದರೆ ನಮ್ಮ ಜನಕ್ಕೆ ಮನಸ್ಸು ಬರುವುದಿಲ್ಲ. ಆಂಗ್ಲೇಯರು ಮುನ್ನೂರು ವರುಷಗಳ ಹಿಂದೆ ಬಡವರನ್ನು ಕುರಿತು ಒಂದು ಕಾನೂನನ್ನು ಮಾಡಿ ನಾಡಿನಲ್ಲಿ ಭಿಕ್ಷುಕರಿರ ಕೂಡದೆಂದು ಏರ್ಪಾಡನ್ನು ಹೂಡಿದರು. ಈಗ ಇಂಗ್ಲೆಂಡಿನಲ್ಲಿ ಯಾವ ನಾದರೂ ಭಿಕ್ಷೆ ಬೇಡಿದರೆ ಅವನಿಗೆ ಶಿಕ್ಷೆಯಾಗುವುದು. ಭಿಕ್ಷೆಯನ್ನು ಬೇಡುವವನೇ ಆದರೂ ನೆಪಮಾತ್ರಕ್ಕೆ ಒಂದು ಸಿಗರೇಟನ್ನೋ ಒಂದು ಬೆಂಕಿಯ ಕಡ್ಡಿಯನ್ನೋ ಮಾರಿ ನಾಲ್ಕು ಆಣೆ ದಾನವನ್ನು ತೆಗೆದುಕೊಳ್ಳ ಬೇಕು. ದಾನಿ ದಾನವನ್ನು ವ್ಯಾಪಾರದ ಹೆಸರಿನಲ್ಲಿ ಮಾಡಬೇಕು; ಬೇಡುವವನು ಭಿಕ್ಷೆಯನ್ನು ಬೆಲೆಯ ಹೆಸರಿನಲ್ಲಿ ತೆಗೆದುಕೊಳ್ಳಬೇಕು. ಭಿಕ್ಷುಕನು ಕೆಡುವನಲ್ಲಾ ಎಂದು ಈ ಜನಾಂಗ ನೀಡುವ ಸ್ವಾತಂತ್ರ್ಯ ವನ್ನು ಕಳೆದುಕೊಂಡಿತು. ನಮ್ಮಲ್ಲಿ ಭಿಕ್ಷುಕರ ಹಾವಳಿಯನ್ನು ತಪ್ಪಿಸುವ ಕಾನೂನು ಆಗಬೇಕೆಂದು ಆಗಾಗ ಮಾತು ಬರುತ್ತದೆ. ಅಂಥ ಕಾನೂನನ್ನು ಮಾಡುವುದೇ ಬಿಡುವುದೇ ? ಹೊಲದಲ್ಲಿ ದೊಡ್ಡದೊಂದು ಮರ ಬೆಳೆದು ಬೆಳೆಯಿಲ್ಲದಂತೆ ಮಾಡಿದೆ. ಅದನ್ನು ಕಡಿಯುವುದಕೆ ನಮ್ಮವರು ಹಿಂಜರಿಯುತ್ತಾರೆ. ಅದಕ್ಕೆ ಕಾರಣ ಅದರಲ್ಲಿ ಭೂತವಿದೆ ಯೆಂಬುದು. ಊರಿನಲ್ಲಿ ಹೊಸ ಮನೆಗಳನ್ನು ಕಟ್ಟುವುದಕ್ಕೆ ಒಳ್ಳೆಯ ಸ್ಥಳವನ್ನು ಸರಕಾರದವರು ಹುಡುಕಬಹುದು. ಜನ ಅಲ್ಲಿ ಮನೆ ಕಟ್ಟುವು ದಕ್ಕೆ ಒಪ್ಪುವುದಿಲ್ಲ. ಅಲ್ಲಿ ಸಾಲಾವಳಿಯಿಲ್ಲ ಎಂದು, ಅಥವಾ ನಿಮಿತ್ತ ಹೇಳುವವನು ಅದು ಕೆಟ್ಟದು ಎಂದ ಎಂದು. ಹೀಗೆ ದಿನ ದಿನದ ಬಾಳಿ ನಲ್ಲೂ ಜನದ ಸಂಸ್ಕೃತಿ ಜನದ ಪುರೋಭಿವೃದ್ಧಿಗೆ ಅಡ್ಡಿಯಾಗಿಯೋ

ಸಹಾಯವಾಗಿಯೋ ಬರುತ್ತದೆ. ಆ ಪುರೋಭಿವೃದ್ಧಿಯನ್ನು ಸಾಧಿಸ ಲಪೇಕ್ಷಿಸುವವರು ಈ ವಿವರಗಳನ್ನು ತಿಳಿದು ಆಯಾ ಸಂದರ್ಭಗಳಲ್ಲಿ ಏನು ಮಾಡಬೇಕೆಂದು ಯೋಚಿಸಬೇಕಾಗಿದೆ.

ಭರತಖಂಡದ ಒಟ್ಟಿನ ಸಂಸ್ಕೃತಿಯನ್ನು ದೇಶದ ಮುಖಂಡರು ಕುರಿತು ವಿಚಾರ ಮಾಡಬೇಕಾದ ಹಾಗೆ ಕರ್ಣಾಟಕದ ಜನರು ತಮ್ಮ ನಾಡಿನ ಸಂಸ್ಕೃತಿಯನ್ನು ಕುರಿತು ಯೋಚನೆ ಮಾಡುವುದು ಆವಶ್ಯಕ. ಭರತಖಂಡದ ಬೇರೆ ಬೇರೆ ನಾಡುಗಳ ಸಂಸ್ಕೃತಿಯನ್ನು ನೋಡಿದರೆ ಅದರಲ್ಲಿ ಬಹುಭಾಗ ಸಾಮಾನ್ಯವಾಗಿ ಇರಬಹುದು; ಸಾಮಾನ್ಯವಾಗಿರುವುದೇ ನಿಜ. ಆದರೆ ಆಯಾ ನಾಡಿನ ಲಕ್ಷಣ ಸೌಕರ್ಯ ಇತಿಹಾಸಗಳಿಗೆ ಅನುಗುಣವಾಗಿ ವಿಶೇಷ ಗುಣಗಳೂ ಕೆಲವು ಕಾಣುವುದರಲ್ಲಿ ಸಂದೇಹ ವಿಲ್ಲ. ಸಂಸ್ಕೃತಿಯೆನ್ನುವುದು ಜನದ ಒಟ್ಟು ಎಲ್ಲಾ ಅನುಭವದಿಂದ ಆದರ ಮನಸ್ಸಿನಲ್ಲಿ ಉಂಟಾಗಿರುವ ಪರಿಣಾಮ. ಇದು ಒಟ್ಟು ದೇಶ ದಲ್ಲೆಲ್ಲಾ ಒಂದೇ ಆಗಲಾರದು; ಭಾಗ ಭಾಗದಲ್ಲೂ ಬೇರೆ ಬೇರೆ ಯಾಗಿಯೇ ಇದ್ದೀತು. ಅಥವಾ ಅಂಥ ವ್ಯತ್ಯಾಸಗಳೇ ಇಲ್ಲವೆಂದು ಹೇಳುವುದಕ್ಕೇ ಆದರೂ ಬೇರೆ ಬೇರೆ ಭಾಗಗಳ ಸಂಸ್ಕೃತಿಯ ಮುಖ್ಯಾಂಶ ಗಳೇನೆಂದು ವಿಚಾರಮಾಡುವುದು ಆವಶ್ಯಕವಾಗುತ್ತದೆ. ಈ ಉಪನ್ಯಾಸ ದಲ್ಲಿ ಕರ್ಣಾಟಕದ ಜನತೆಯ ಸಂಸ್ಕೃತಿಯನ್ನು ಈ ದೃಷ್ಟಿಯಿಂದ ಸಂಕ್ಷೇಪವಾಗಿ ಪರೀಕ್ಷಿಸಲು ಯತ್ನಮಾಡಿದೆ.

ಕರ್ಣಾಟಕದ ಜನತೆ: ಇದರ ಸಂಸ್ಕೃತಿ

ಕಾವೇರಿಯಿಂದ ಗೋದಾವರಿಯ ವರೆಗಿನ ನಾಡು ಕನ್ನಡನಾಡೆಂದು ಪೂರ್ವದ ರಾಜಕವಿಯೊಬ್ಬನು ಹೇಳಿದನು. ಈಗ ಕನ್ನಡವು ವಿಶೇಷವಾಗಿ ಮೈಸೂರು, ಧಾರವಾಡ, ಬಿಜಾಪುರ, ಬೆಳಗಾಂ, ಉತ್ತರ ಮತ್ತು ದಕ್ಷಿಣ ಕನ್ನಡ, ಹೈದರಾಬಾದು, ಬಳ್ಳಾರಿ, ಕೊಯಿಮುತ್ತೂರು, ಮಧುರೆ ಈ ಪ್ರಾಂತಗಳಲ್ಲಿ ಪ್ರಚಾರದಲ್ಲಿದೆ. ಉತ್ತರದ ಕಡೆ ಸಂಕೋಚವಾಗಿ ದಕ್ಷಿಣದ ಕಡೆ ಕಾವೇರಿಯಿಂದಾಚೆ ಸ್ವಲ್ಪ ದೂರ ಹೋಗಿದೆ. ಈ ಭಾಷೆ ಯನ್ನಾಡುವ ಪ್ರಜೆ ಒಟ್ಟು ಒಂದು ಕೋಟಿ ಇಪ್ಪತ್ತು ಲಕ್ಷದಷ್ಟು ಇದೆ.

ಇದು ಕನ್ನಡವನ್ನು ಮಾತೃಭಾಷೆಯೆಂದು ಹೇಳುವವರ ಸಂಖ್ಯೆ. ಕನ್ನಡದಲ್ಲಿ ಬಳಕೆಯುಳ್ಳ ಜನರೆಲ್ಲಾ ಇದರಲ್ಲಿ ಸೇರಿಲ್ಲ. ಮೈಸೂರಿನ ಸೀಮೆಯಲ್ಲಿ ಕನ್ನಡವನ್ನರಿಯದ ಜನವೇ ಇಲ್ಲವೆನ್ನಬಹುದು. ತಮಿಳು ತೆಲುಗು ಮಾತೃಭಾಷೆಯೆಂದು ಹೇಳುವ ಅನೇಕರಿಗೆ ಆ ಮಾತೃಭಾಷೆಗಳಿಗಿಂತ ಕನ್ನಡದಲ್ಲೇ ಬಳಕೆ ಹೆಚ್ಚು. ಅದಕ್ಕೆ ಪ್ರತಿಯಾಗಿ ಮಾತೃಭಾಷೆ ಕನ್ನಡವೆಂದರೂ ಮರಾಠಿ, ತೆಲುಗು ಅಥವಾ ತಮಿಳು ಸೀಮೆಯಲ್ಲಿರುವುದರಿಂದ ಆಯಾ ಭಾಷೆಗಳ ಪರಿಚಯವಿದ್ದು ಕನ್ನಡವನ್ನರಿಯದವರ ಸಂಖ್ಯೆಯನ್ನು ನಾವು ಎಣಿಸಬೇಕು. ಕನ್ನಡನಾಡಿನಲ್ಲಿ ಸೇರಿ ಬೇರೆ ಮಾತೃಭಾಷೆಯನ್ನು ಮರೆತಿರುವವರನ್ನೂ ಬೇರೆ ಸೀಮೆಯಲ್ಲಿ ಸೇರಿ ಕನ್ನಡವನ್ನು ಕಲಿಯಲು ಅವಕಾಶವಿಲ್ಲದೆ ಇರುವವರನ್ನೂ ಸುಮಾರು ಸಂಖ್ಯೆಯಲ್ಲಿ ಸರಿಸಮನೆಂದು ಎಣಿಸಿದರೆ ಒಟ್ಟಿನಲ್ಲಿ ಕನ್ನಡವನ್ನಾಡುವ ಅಥವಾ ಅದರಲ್ಲಿ ಮಮತೆಯುಳ್ಳ ಪ್ರಜೆ ಸುಮಾರು ೧೫೦ ಲಕ್ಷ ಆಗುತ್ತದೆ.

ಕರ್ಣಾಟಕದ ಜನರಲ್ಲಿ ಈ ನಾಡಿನ ಇತಿಹಾಸದಿಂದೆಲ್ಲ ವಾಸಿತವಾಗಿರುವ ಸಂಸ್ಕೃತಿಯೊಂದು ಉಂಟಾಗಿದೆ. ದ್ರಾವಿಡ ದೇಶದಲ್ಲಿ ಕರ್ಣಾಟಕವೇ ಮಧ್ಯದೇಶ. ತಮಿಳಿನ ಸಂಸ್ಕೃತಿ ಸಂಸ್ಕೃತ ಭಾಷೆಯಿಂದ ಅಷ್ಟಾಗಿ ಬಣ್ಣವನ್ನು ಪಡೆಯಲಿಲ್ಲ; ತೆಲುಗಿನ ಸಂಸ್ಕೃತಿ ಸಂಸ್ಕೃತಕ್ಕೆ ಮಾರುಹೋಯಿತು. ಕರ್ಣಾಟಕದ ಸಂಸ್ಕೃತಿ ಈ ಎರಡು ಪಕ್ಷವನ್ನೂ ಬಿಟ್ಟು ಮಧ್ಯವರ್ತಿಯಾಗಿ ನಡೆಯಿತು. ಈ ಭಾಷೆಗಳು ಸಂಸ್ಕೃತದ ಮಾತನ್ನು ಉಪಯೋಗಿಸುವ ರೀತಿಯಿಂದಲೇ ಇದನ್ನು ಊಹಿಸಬಹುದು. ತಮಿಳಿನ ಕಾವ್ಯದಲ್ಲಿ ಸಂಸ್ಕೃತದ ಮಾತು ರೂಪು ಮಾರ್ಪಡದೆ ಸಿಕ್ಕುವುದೇ ಇಲ್ಲ. ತೆಲುಗಿನಲ್ಲಿ ರೂಪು ಮಾರ್ಪಟ್ಟು ಇರುವುದು ಕಡಮೆ; ಹುಟ್ಟು ಸಂಸ್ಕೃತ ತುಂಬಿರುತ್ತದೆ. ಕನ್ನಡದಲ್ಲಿ ಅರ್ಧ ಹಾಗೆ ಅರ್ಧ ಹೀಗೆ. ಪ್ರಾಯಶಃ ಅನೇಕ ಕವಿಗಳು ಸ್ವಲ್ಪ ಸಂಸ್ಕೃತವನ್ನಿಟ್ಟುಕೊಂಡು ವಿಶೇಷ ಕನ್ನಡ ಪದಗಳನ್ನೇ ಉಪಯೋಗಿಸಿ ಬರೆದಿದ್ದಾರೆ. ಈ ರೀತಿಯ ಮಧ್ಯಮಾರ್ಗಾವಲಂಬನವು ಈ ನಾಡಿನ ಸ್ಥಾನದ ಫಲ. ಅಲ್ಲದೆ ಕರ್ಣಾಟಕದ ಬೇರೆ ಬೇರೆ ಭಾಗಗಳು ಆಗಾಗ ಕೆಲವು ತಮಿಳು ರಾಜರುಗಳ ಕೈಯಲ್ಲೂ ಕೆಲವು ಮಹಾರಾಷ್ಟ್ರ ರಾಜರುಗಳ ಕೈಯಲ್ಲೂ ಇದ್ದುವು.

ಕರ್ಣಾಟಕದ ಸಂಸ್ಕೃತಿ ಇದರಿಂದ ಇತರ ರಾಷ್ಟ್ರಗಳ ಸಂಸ್ಕೃತಿಯನ್ನು ಒಳಗೊಂಡಿತು. ಈ ನಾಡು ದಕ್ಷಿಣ ದೇಶದ ಮೂವರು ಮತಾಚಾರ್ಯ ರಿಗೂ ಜನ್ಮಭೂಮಿ ಅಥವಾ ಆಶ್ರಯಸ್ಥಾನ, ಅಲ್ಲದೆ ವೀರಶೈವ ಮತ ಪ್ರತಿಷ್ಠಾಪನೆಯ ಕಾರ್ಯರಂಗ. ಇಲ್ಲಿಯದೇ ಒಂದು ಶಿಲ್ಪರೀತಿಯಿದೆ. ಇದನ್ನು ಹೊಯ್ಸಳ ಶಿಲ್ಪ, ಚಾಲುಕ್ಯರ ಶಿಲ್ಪ, ಎಂದು ವಿದೇಶೀಯರು ವರ್ಣಿಸಿದಾರೆ. ಮುಖ್ಯ ಇದು ಕರ್ಣಾಟಕದ ಶಿಲ್ಪ, ಗಾನ ಪದ್ಧತಿ ಯಲ್ಲಿ ಕರ್ಣಾಟಕದ್ದು ಎಂಬ ಹೆಸರಿನದೊಂದು ಪದ್ಧತಿಯಿದೆ. ಅದು ಈಚೆಗೆ ಬೆಳೆದದ್ದು ಕರ್ಣಾಟಕದವರಿಂದಲ್ಲ. ಆದರೂ ನಮ್ಮ ಹೆಸರುಗಳ ಮುಂದೆ ಹಾಕುವ ಊರ ಹೆಸರುಗಳಂತೆ ಕರ್ಣಾಟಕದ ಸಂಗೀತವೆಂಬ ಈ ಸಂಗೀತ ಪದ್ಧತಿ ಈಗ ತಮಿಳರಲ್ಲೇ ಪ್ರಬಲವಾಗಿದ್ದರೂ ಮೂಲದಲ್ಲಿ ಅದು ಕರ್ಣಾಟಕದ್ದು ಎಂದು ಆ ಹೆಸರು ತೋರಿಸುತ್ತದೆ.

ಈ ಸಂಸ್ಕೃತಿ ಬೆಳೆದ ರೀತಿ

ಉತ್ತಮವಾದ ಸಂಸ್ಕೃತಿಯುಳ್ಳ ನಾಡಿನಲ್ಲಿ ಸಂಸ್ಕೃತರಾದವರ ತಿಳಿವು ಅಸಂಸ್ಕೃತರ ಬಾಳಿನಲ್ಲಿ ಅನೇಕ ರೀತಿಯಲ್ಲಿ ಸೇರುತ್ತದೆ. ಸಹಜ ವಾದ ಬೆಳವಣಿಗೆಯುಳ್ಳ ಜನದಲ್ಲೆಲ್ಲ ಈ ರೀತಿಯ ಜ್ಞಾನ ಪ್ರಸರಣದ ವಿನ್ಯಾಸ ನಡೆಯುತ್ತಲೇ ಇರುತ್ತದೆ. ಊರಿಗೆ ತಿಳಿದವನು ಒಬ್ಬನೇ ಆದರೂ ಅವನ ನಡೆ ನುಡಿಯನ್ನು ನೋಡಿ ಕೇಳಿ ಸಭ್ಯರಾಗುವವರು ಅನೇಕರು. ಇದು ತಿಳಿವಿನಲ್ಲಿರುವ ಮಹಿಮೆ. ತಿಳಿದವನಿಗೆ ಇಷ್ಟವಿಲ್ಲದೆ ಇದ್ದರೂ ಅವನ ತಿಳಿವು ಲೋಭಿ ತನ್ನ ಮನೆಗೆಂದೇ ಬಾಗಿಲಲ್ಲಿಟ್ಟ ದೀಪದ ಬೆಳಕಿನಂತೆ ಅವನಿಂದ ಇನ್ನೊಬ್ಬನ ಕಡೆಗೆ ಹರಿಯುತ್ತದೆ. ತಿಳಿದವರು ತಿಳಿಯದವರಿಗೆ ಸಹಾಯವಾಗುವಂತೆ ಏರ್ಪಾಡುಗಳನ್ನು ಮಾಡಿದರೆ ಅದು ಹರಡುವುದೆಂದು ಹೇಳಬೇಕಾದದ್ದಿಲ್ಲ. ಹಿಂದೆ ನಮ್ಮ ಜನರು ಇಂತಹ ಅನೇಕ ಏರ್ಪಾಡುಗಳನ್ನು ಮಾಡಿದ್ದರು. ಈ ಕಾರಣದಿಂದ ಜನಾಂಗದ ಜ್ಞಾನದ ಸಾರ ಜನರಲ್ಲಿ ಊರಿತ್ತು. ನವನಾಗರಿಕತೆಯ ಅನೇಕ ಸಲಕರಣೆಗಳನ್ನು ಕಂಡಿರುವ ನಾವು ನಮ್ಮ ಪೂರ್ವಿಕರು ಜನರ ತಿಳಿವನ್ನು ವೃದ್ಧಿ ಮಾಡುವುದಕ್ಕೆ ಎಷ್ಟು ಪ್ರಯತ್ನ ಮಾಡಿದ್ದರೆಂಬುದನ್ನೂ

ಜನಾಂಗದ ಸಂಸ್ಕೃತಿಯನ್ನು ಕುರಿತು ಅವರು ಎಷ್ಟು ವಿಚಾರವನ್ನೂ ಊಹೆಯನ್ನೂ ಉಪಯೋಗಿಸಿದ್ದರೆಂಬುದನ್ನೂ ತಿಳಿಯಲಾರದೆ ಇದೇವೆ. ನಾವು ಈಗ ಜನಕ್ಕೆ ಅಕ್ಷರವನ್ನು ಹೇಳಿಕೊಡುತ್ತೇವೆ; ಅವರು ಏನನ್ನು ಓದುತ್ತಾರೋ ನೋಡುವುದಿಲ್ಲ. ಹಿಂದಿನವರು ಅಕ್ಷರ ಹೇಳಿಕೊಡದೆ ಇದ್ದರೂ ಊರಲ್ಲಿ ಸಂಜೆಯಲ್ಲಿ ಜೈಮಿನಿ ಭಾರತವನ್ನು ಓದಿಸುತ್ತಿದ್ದರು. ಶ್ರೀ ವಧುವಿನಂಬಕ ಚಕೋರಕಂ ಪೊರೆಯೆ ಎಂಬ ಮಾತು ಈಗ ಇಪ್ಪತ್ತು ವರುಷಗಳ ಕೆಳಗೆ ಹಳ್ಳಿ ಹಳ್ಳಿಯಲ್ಲಿಯೂ ಜನಕ್ಕೆ ತಿಳಿದಿತ್ತು. ಇದರಿಂದ ಓದುಬರಹವನ್ನು ಕಲಿಸುವುದು ಅನಾವಶ್ಯಕವೆಂದು ನನ್ನ ಅಭಿಪ್ರಾಯವಲ್ಲ, ಅದನ್ನು ಕಲಿಸಬೇಕು; ಆದರೆ ಅದನ್ನು ಕಲಿಸುವುದಷ್ಟೇ ಸಾಲದು. ಜನಕ್ಕೆ ಬೇಕಾದುದು ಮುಖ್ಯವಾಗಿ ತಿಳಿವು; ತಿಳಿವಿನ ಸಾಧನ ಸಾಧ್ಯವಾದರೆ ಅದರ ಜೊತೆಗೆ ಬರಬಹುದು. ಬಾಳನ್ನು ಬೆಳಗಿಸುವ ಮೂಲತತ್ತ್ವಗಳು ಮೊದಲು ತಿಳಿಯಬೇಕು; ಅವುಗಳನ್ನು ಹುಡುಕಿ ತಿಳಿಯುವ ದಾರಿ ಸಾಧ್ಯವಾದರೆ ಆ ಮೇಲೆ ಬರಬಹುದು. ರಸದ ಅನುಭವ ಮೊದಲು ಆಗಬೇಕು; ಅದರ ವಿಮರ್ಶೆ ಸಾಧ್ಯವಾದರೆ ಆ ಮೇಲೆ ಬರಬಹುದು. ಕಾವ್ಯವು ಮನಮುಟ್ಟುವುದು ಮುಖ್ಯ: ಅದನ್ನು ನಾನೇ ಓದಿ ತಿಳಿಯುತ್ತೇನೆಯೋ ಓದುವವರಿಂದ ಕೇಳಿ ತಿಳಿಯುತ್ತೇನೆಯೋ ಎನ್ನುವುದರಲ್ಲಿ ಏನಿದೆ? ಸಾಮಾನ್ಯನು ತಾನೇ ಓದಿ ತಿಳಿಯುವುದಕ್ಕಿಂತ ಬುದ್ಧಿವಂತನಾದ ಒಬ್ಬನು ಓದಿದ್ದನ್ನು ಕೇಳಿದರೆ ಹೆಚ್ಚು ಸುಖವನ್ನು ಅನುಭವಿಸುವನು. ಇಂಥ ಏರ್ಪಾಡಿನ ಪ್ರಯೋಜನವೆಷ್ಟೆಂದು ತಿಳಿಯಬೇಕಾದರೆ ಈಗ ಸಂಸ್ಕೃತರಾದ ನಾವು ಓದುತ್ತಿರುವ ಗ್ರಂಥಗಳು ಯಾವುವು ಎಂದು ಯೋಚಿಸಿದರೆ ಸಾಕು. ಓದು ಕಲಿತ ನಾವು ಅದರ ಸರಿಯಾದ ಫಲವನ್ನು ಪಡೆಯುತ್ತಿಲ್ಲ; ಓದು ಕಲಿಯದೆ ಇದ್ದರೂ ಹಿಂದೆ ನಮ್ಮ ಜನರಿಗೆ ಓದಿನ ಮುಖ್ಯ ಫಲ ತಕ್ಕಮಟ್ಟಿಗೆ ದೊರೆಯುತಿತ್ತು.

ಇದರಂತೆ ಇತರ ವಿಷಯಗಳನ್ನೂ ಬೇರೆ ಬೇರೆ ಏರ್ಪಾಡುಗಳಿಂದ ಜನರು ಸುಲಭವಾಗಿ ಕಲಿಯುತ್ತಿದ್ದರು. ಪುರಾಣ ಶ್ರವಣವೆನ್ನುವುದು ಇಂತಹದೊಂದು ಏರ್ಪಾಡು. ನಮ್ಮ ಪುರಾಣಗಳು, ಚರಿತ್ರೆ,

ಭೂವಿವರಣೆ, ಶಾಸ್ತ್ರ, ಸಾಹಿತ್ಯ, ತತ್ತ್ವ, ಭೂಲೋಕ, ದೇವಲೋಕ, ಸ್ವರ್ಗ, ನರಕ ಮುಂತಾದ ಎಲ್ಲ ವಿಷಯಗಳನ್ನು ಮೊದಲಿಂದ ಕೊನೆಗೆ ವರ್ಣಿಸುತ್ತವೆ. ಇವು ಜನರಿಗೆ ಚೆನ್ನಾಗಿ ತಿಳಿದಿದ್ದುವು. ಇವುಗಳಿಗೆ ಒಂದೊಂದು ಸಂದರ್ಭ ಬೇರೆ. ಹರಿಕಥೆ ಇಂಥ ಇನ್ನೊಂದು ಏರ್ಪಾಡು. ಸಂಪ್ರದಾಯದ ಪ್ರಕಾರ ಮಾಡುವ ಕಥೆಯಲ್ಲಿ ಒಳ್ಳೆಯ ಉಪನ್ಯಾಸ ದಲ್ಲಿರುವಂತೆ ಸ್ಪಷ್ಟವಾದ ವಿಷಯ ನಿರೂಪಣೆಯೂ ವಿಚಾರದ ಸೋಪಾನವೂ ಇರುತ್ತವೆ. ಅದರ ಜೊತೆಗೆ ಕತೆ; ಅದರಲ್ಲಿ ವರ್ಣನೆ; ಅಲ್ಲಲ್ಲಿ ಉಪಕತೆಗಳು; ಅಲ್ಲಲ್ಲಿ ಹಾಸ್ಯ, ಸಂಗೀತ ಬೇರೆ. ಸರಿಯಾದ ಹರಿಕಥೆಯಿಂದ ಜನರಿಗೆ ಉತ್ತಮ ಸಾಹಿತ್ಯ, ಮತದ ಮುಖ್ಯ ತತ್ತ್ವ, ಉದ್ಧಾರವಾಗುವ ಮಾರ್ಗ, ಇವೆಲ್ಲ ಒಟ್ಟಿಗೆ ದೊರಕುತ್ತಿದ್ದುವು. ಇನ್ನು ದೇವಸ್ಥಾನ, ಭಜನೆಯ ಮನೆ, ಮುಂತಾದ ಇತರ ಸಂಸ್ಕಾರಕ ಸಂಸ್ಥೆ ಗಳು. ಮನೆಗಳಲ್ಲಿ ವ್ರತಗಳು. ಆಗಾಗ ಹಬ್ಬ ಹುಣ್ಣಿಮೆ. ಎಲ್ಲದರಲ್ಲೂ ದೇವರು ಎಂಬ ಭಾವನೆ ಮನಸ್ಸಿಗೆ ನೆನಪಿಗೆ ಬರುವುದಕ್ಕೆ ಏರ್ಪಾಡು. ಇದರಲ್ಲಿ ಒಂದು ವಿಚಾರವನ್ನು ನಾವು ಗಮನಿಸಿ ನೋಡಬೇಕು. ಮನುಷ್ಯನಿಗೆ ದೇವರು ಒಬ್ಬನು ಇದ್ದಾನೆ ಎಂಬ ಭಾವನೆ ಬರುವುದು ಬಹು ಹಿರಿಯ ವಿಷಯ. ಅವನು ನಮ್ಮ ಸೇವೆಯನ್ನು ಅಪೇಕ್ಷಿಸುತ್ತಾನೆ, ಅವನನ್ನು ನಮ್ಮ ಸೇವೆಯಿಂದ ಮೆಚ್ಚಿಸಬಹುದು, ಮೆಚ್ಚಿಸಬೇಕು, ಎನ್ನು ವುದು ಅದಕ್ಕಿಂತ ಹಿರಿಯದು. ಇದಕ್ಕಾಗಿ ಎಲ್ಲಾ ನಾಡುಗಳಲ್ಲೂ ದೇವಾಲಯವೆನ್ನುವ ಕಟ್ಟಡವೊಂದು ಏರ್ಪಾಡಾಗಿದೆ. ಆದರೆ ನಮ್ಮ ಸೀಮೆಯ ದೇವಾಲಯದಲ್ಲಿ ಒಂದು ವಿಶೇಷ ಗುಣ. ಇಲ್ಲಿ ದೇವಾಲಯ ಗಳನ್ನು ರಾಜನೊಬ್ಬನ ಮನೆಯಂತೆ ನಡೆಯಿಸಿ ಅಲ್ಲಿ ಹೋದವನಿಗೆ ಕಣ್ಣು, ನಾಲಗೆ, ಕಿವಿ, ಮನಸ್ಸು ಎಲ್ಲ ತಣಿಯುವಂತೆ ಮಾಡುವ ಏರ್ಪಾಡು ಇದೆ. ಇದು ದಕ್ಷಿಣದೇಶದಲ್ಲಿ ವಿಶೇಷ. ಈ ವಿಶೇಷಗುಣವು ಕರ್ಣಾಟಕದ ದೇವಸ್ಥಾನಗಳಲ್ಲಿಯೂ ತುಂಬ ಇದೆ. ದೇವಸ್ಥಾನಕ್ಕೆ ಹೋದವರು ಒಳ್ಳೆಯ ಕಟ್ಟಡವನ್ನೇ ನೋಡುವರು; ದೇವರ ಕತೆಯನ್ನು ಚಿತ್ರಿಸಿರುವ ಕಲ್ಲುಗಳನ್ನು ನೋಡುವರು; ಪ್ರಸಾದಕ್ಕೆಂದಾದರೂ ಅಲ್ಲಿ ಸ್ವಲ್ಪ ಹೊತ್ತು ಇರುವರು. ಇದಿಷ್ಟನ್ನು ಮಾಡಿದ್ದರಿಂದಲೇ ಎಂತಹವ

ರಲ್ಲಿಯೂ ಸ್ವಲ್ಪ ಸಂಸ್ಕಾರ ಉಂಟಾಗುವುದು; ಬರಿಯ ಮಾತಿಗಾದರೂ ನಾರಾಯಣ ಎನ್ನುವುದು ಜನರಲ್ಲಿ ವಾಡಿಕೆಯಾಗುವುದು. ಇದರಿಂದ ಏನು ಪ್ರಯೋಜನ ಎಂದು ಯಾರಾದರೂ ಕೇಳಬಹುದು. ಪಾಠಶಾಲೆಗೆ ಹೋದವನಿಗೆ ಹೆಸರನ್ನು ಬರೆಯುವಷ್ಟು ಮಾತ್ರ ಕಲಿವು ಬಂದರೂ ಅದು ವಿದ್ಯಾಭ್ಯಾಸ: ಪಾಠಶಾಲೆಗೆ ಹೋಗುವುದೇ ಒಬ್ಬನಿಗೆ ಒಂದು ವಿಧ ವಾದ ಶಿಕ್ಷೆಯನ್ನು ಕೊಡುತ್ತದೆ. ಇದರಂತೆಯೇ ದೇವಸ್ಥಾನಕ್ಕೆ ಹೋಗುವುದೆನ್ನುವುದು ಒಂದು ಶಿಕ್ಷಣ. ಭಕ್ತಿಯೆನ್ನುವುದು ಸಾವಕಾಶ ವಾಗಿ ಬೆಳೆಯುವ ಪೈರು. ಅದರ ಮೊದಲು ಹೀಗೆಯೇ ಎಂದು ಹೇಳು ವುದಕ್ಕೆ ಆಗುವುದಿಲ್ಲ. ದೇವರೆಂಬ ಭಾವ ಮನುಷ್ಯನ ಮನಸ್ಸಿನ ಬಾಗಿಲಲ್ಲಿ ಬಹುಕಾಲ ಕಾದು ಕಾದು ಅವನು ಏನಾದರೊಂದು ನಷ್ಟ ಅನುಭವಿಸಿ ದಾಗಲೋ ಕಷ್ಟಕ್ಕೆ ಸಿಕ್ಕಿರುವಾಗಲೋ ಭಗವಂತನ ಸಹಾಯ ಬೇಕೆಂದರೆ ಒಳಹೋಗುತ್ತದೆ. ಆ ವರೆಗೆ ಅವನು ಅದಕ್ಕೆ ಹೃದಯದ ಬಾಗಿಲನ್ನು ತೆರೆಯುವುದಿಲ್ಲ.' ಆದರೆ ಅವನಿಗೆ ಒಳ್ಳೆಯದನ್ನು ಮಾಡಬೇಕೆನ್ನುವವರು ಆ ಭಾವವನ್ನು ಅವನ ಮನಸ್ಸಿನ ಬಾಗಿಲಲ್ಲಿ ಇರಿಸುವುದಕ್ಕೆ ಯತ್ನಮಾಡ ಬೇಕು. ನಮ್ಮವರು ಹಿಂದೆ ಇದನ್ನು ಮಾಡಿದ್ದರು. ಇದರಂತೆಯೇ ಭಜನೆಯ ಮನೆಗಳಲ್ಲಿ ಭಕ್ತಿಪಂಥದ ಗೀತೆಗಳನ್ನು ಹಾಡುವುದರಲ್ಲಿ ಜನರಿಗೆ ಇದೇ ರೀತಿಯ ಪರಿಪಾಕ ಉಂಟಾಗುತ್ತಿತ್ತು. ಮುಖ್ಯವಾಗಿ ಇವೆಲ್ಲ ಜನಸಾಮಾನ್ಯಕ್ಕೆಂದು ಮಾಡಿದ್ದ ಏರ್ಪಾಡುಗಳೆಂಬುದನ್ನು ನಾವು ಮರೆಯಬಾರದು.

ಈ ಸಂಸ್ಕೃತಿಯಿಂದುಂಟಾದ ಜನತಾ ಶೀಲ

ಇದರಿಂದುಂಟಾದ ಸಂಸ್ಕೃತಿಯನ್ನು ವಿವರಿಸಿ ವರ್ಣಿಸುವುದು ಕಷ್ಟ. ಆದರೆ ಅದರ ಸ್ವರೂಪವನ್ನು ಜನದ ಜೀವದಿಂದ ತಿಳಿಯ ಬಹುದು. ನಾನು ಚಿಕ್ಕಂದಿನಲ್ಲಿ ಬೆಳೆದ ಊರಿನಲ್ಲಿ ಒಬ್ಬ ಶಾನು ಭೋಗರು ಇದ್ದರು. ಅವರ ಮನೆಯಲ್ಲಿ ಒಂದು ಹೊತ್ತಿಗೆ ಅರವತ್ತು ಎಲೆ ಹಾಕುತ್ತಿದ್ದರು. ತಮ್ಮಂದಿರು, ತಮ್ಮಂದಿಯರ ಹೆಂಡತಿಯರು, ಮಕ್ಕಳು; ತನ್ನ ಮಕ್ಕಳು, ಅವರ ಹೆಂಡತಿಯರು, ಗಂಡಂದಿರು;

ತಮ್ಮಂದಿರ ಅಳಿಯಂದಿರು; ಅಳಿಯಂದಿರ ತಮ್ಮಂದಿರು, ಇತ್ಯಾದಿ, ಇತ್ಯಾದಿ. ಇದರಮೇಲೆ ಊರಿಗೆ ಬರುವವರು ಹೋಗುವವರು. ಇಷ್ಟು ಸಂಸಾರವನ್ನು ಒಂದು ದಿನ ಗೊಣಗುಟ್ಟದೆ ಒಂದು ದಿನ ಬೇಸರಪಡದೆ ಆತ ಹತ್ತಾರು ವರುಷ ಸಾಕಿದರು. ವೆಚ್ಚವಾಗುತ್ತಿದೆಯೇ? ಆಯ ವಾದದ್ದು ಹೇಗೆ? ದೇವರು ಕೊಡುತ್ತಾ ಇದಾನೆ; ಖರ್ಚಾಗುತ್ತಾ ಇದೆ; ನಮಗೇಕೆ ಚಿಂತೆ? ಇವರಂತಹವರು ಅಪೂರ್ವರಲ್ಲ. ಇವರಿಗೆ ತಕ್ಕಂತೆ ಇವರ ತಮ್ಮಂದಿರು; ಇವರಂತೆಯೇ ನಮ್ಮ ಹಳ್ಳಿಯ ಗೌಡರು; ಅವರಂತೆ ನಮ್ಮೂರ ಬಳಿ ಇನ್ನೊಂದು ಹಳ್ಳಿಯಲ್ಲಿ ಇದ್ದ ಗೌಡರು. ನಾನು ಈಗ ಕೆಲವು ವರ್ಷಗಳ ಹಿಂದೆ ಮೈಸೂರ ಬಳಿ ಒಂದು ಕಡೆ ಒಬ್ಬ ಗೌಡ ನನ್ನು ನೋಡಿದೆ. ಮಾರ್ಗಶಿರ ಮಾಸದ ಕೊನೆ ಕೊನೆಯಲ್ಲಿ ಅವನು ಹಳ್ಳಿಯಿಂದ ಒಂದು ಮೈಲಿ ದೂರದಲ್ಲಿ ಹೊಲದಲ್ಲಿ ಅವರೇಗಿಡಕ್ಕೆ ನೀರು ಹಾಕುವುದಕ್ಕೆ ಒಂದು ಬಿಂದಿಗೆಯನ್ನು ಹೊತ್ತುಕೊಂಡು ಹೋಗು ತ್ತಿದ್ದನು. ಅವನ ಮಗ ಮನೆಯಲ್ಲಿದ್ದನು. ಸೊಸೆಯು ಇದ್ದಳು. ಅವ ರನ್ನು ಕಳುಹಿಸಿದೆ ನೀನೇಕೆ ಹೋಗುತ್ತೀಯೇ ಎಂದು ನಾನು ಕೇಳಿದೆನು. "ಅವರಿಗೆ ಇಷ್ಟು ದೂರ ಹೋಗಿ ನೀರು ಹೊಯ್ದು ಸಾಕಿ ಅವರೇಕಾಯಿ ತಿಂದು ಆಗುವುದೇನು, ಅಂತ ಅಲಕ್ಷ್ಯ". "ನಿನಗೆ ಬಹಳ ಆಸೆಯೇ?" "ಆಸೇನು ಉಂಟು. ಅಲ್ಲದೀರ, ಗಿಡ ಬೆಳೆಯುವಷ್ಟು ದಿನ ಬೆಳಸಿ ಕಾಯಿ ತಕೋಬೇಕು. ಕೊಂಚ ಕಷ್ಟಕ್ಕೆ ಸೋಮಾರಿತನಮಾಡಿ ಬರುವ ಫಲ ಬಿಡೋದೆ? ಇನ್ನೊಂದು ತಿಂಗಳಾದಮೇಲೆ ಕಾಯಿ ಬೇಕು ಎಂದರೆ ಸಿಕ್ಯಾತೆ? ಈಗ ನೋಡಿ ಹದಿನೈದು ದಿನದಿಂದ ನಮ್ಮೂರಲ್ಲಿ ಯಾರ ಮನೆಯಲ್ಲೂ ಅವರೇಕಾಯಿ ಇಲ್ಲ. ನಮ್ಮ ಮನೇಲಿ ದಿನಾ ನಾಲ್ಕು ಕಾಳು ಇದೆ." ನನ್ನ ಬಳಿ ಆಗಾಗ ಒಬ್ಬ ಹರಿದಾಸರು ಬರುತ್ತಾರೆ. ಅರ್ಧಗಂಟೆ ಕುಳಿತು ಆ ಮಾತು ಈ ಮಾತು ಆಡುತ್ತಿರು ತ್ತಾರೆ. ಅವರು ಬರುವಾಗ್ಗೆ ನನ್ನ ಮನಸ್ಸಿನಲ್ಲಿ ಏನಾದರೂ ಯೋಚನೆ ಯಿದ್ದರೆ, ಅವರು ಹೋಗುವ ವೇಳೆಗೆ ಅದನ್ನೆಲ್ಲ ಕಳೆದಿರುತ್ತಾರೆ. ನಮ್ಮ ಯೋಚನೆಯೇನೆಂದು ನಾವು ಅವರಿಗೆ ಹೇಳಬೇಕಾದದ್ದಿಲ್ಲ. ಹೇಗೋ ಮಾತು ತಿರುಗುತ್ತದೆ. "ನೋಡಿ ಸ್ವಾಮಿ, ನಮ್ಮ ಅಣ್ಣಂದಿರು

ನೋಡಿಕೋತ ಇದ್ದರು ಸಂಸಾರಾನ. ನನಗೆ ಆರುವತ್ತು ವರುಷ ಆಗೋ ತನಕ ಅವರು ನನಗೆ ತಂದೆಯಂತೆ ಇದ್ದರು. ಹೋಗಬೇಕಾದರೆ ಹತ್ತಿರ ಕುಳಿತಿದ್ದೆ. ನನ್ನ ಕಣ್ಣಿನಲ್ಲಿ ನೀರು ಬಂತು. ನೋಡಿ, ನೀನು ಯೋಚನೆ ಮಾಡಬೇಡ, ಇದಕ್ಕೆಲ್ಲಾ ಕರ್ತ ಇದಾನೆ, ನೋಡಿಕೊಳ್ಳುತ್ತಾನೆ ನಿನಗೆ ಭಾರ ಆಗೋದಿಲ್ಲ, ಎಂದರು. ದೊಡ್ಡ ಸಂಸಾರ. ಹತ್ತು ವರುಷ ಆಯಿತಲ್ಲ; ನೋಡಿ, ನಡೆಯಿಸಿಬಿಟ್ಟ ದೇವರು. ಸ್ವಾಮಿ, ನಾವು ಮಾಡುತ್ತೇವೆ ಎಂತ ಚಿಂತೆಯಿಟ್ಟುಕೊಳ್ಳಬಾರದು. ನಮ್ಮಿಂದಲೇ ಆಗುತ್ತೆ. ಆದರೆ ಮಾಡುವವರು ನಾವಲ್ಲ. ಅವ ಮಾಡುತ್ತಾನೆ." "ಅವ ಮಾಡುತ್ತಾನೆ ಎಂತ ನಾವು ಕೂತಿರಲಾಗದು. ನಮ್ಮಿಂದಲೇ ಆಗೋದು ಅದು, ಅವ ಮಾಡಿಸುತ್ತಾನೆ." "ಒಳ್ಳೆಯದನ್ನೇ ಆಗಲಿ ಕೆಟ್ಟವನ್ನೇ ಆಗಲಿ ಮಾಡೋಕೆ ನಾವು ಸ್ವತಂತ್ರರಲ್ಲ. ನಾನು ಮಾಡಿದೆ ಎಂತ ದೇವರ ಪೂಜೆ ಮಾಡಿದರೂ ಫಲವಿಲ್ಲ. ಅವ ಬುದ್ಧಿಕೊಟ್ಟು ಮಾಡಿಸಿದ. ನಮ್ಮಿಂದ ಆಯಿತು." ಹೀಗೆಂದು ಇದನ್ನು ಸಮರ್ಥಿಸು ವುದಕ್ಕೆ ಇವರು ಹರಿಕಥಾಮೃತಸಾರದ ಪದ್ಯಗಳನ್ನು ಹೇಳುವರು. ಸಂಸಾರದಲ್ಲಿರುವವರಿಗೆ ಈ ಜ್ಞಾನ ಎಲ್ಲಿ ಬರಬೇಕು ಎಂದರೆ, "ಸ್ವಾಮಿ ಸ್ವಲ್ಪ ಸ್ವಲ್ಪ ಆಗಾಗ ಇದನ್ನು ಅಂದುಕೊಳ್ಳಬೇಕು, ಬರುತ್ತೆ. ಸಂಸಾರವೇನು ಸಂನ್ಯಾಸವೇನು ಸ್ವಾಮಿ ? ಎಣಿಸಿದ ಹಾಗೆ ಆಗುತ್ತೆ. ದುಡಿಯುವುದೆಲ್ಲ ದೇವರಿಗಾಗಿ ಎಂದರೆ ಎಲ್ಲಾ ಪೂಜೆಯೇ " ಎಂದು ಸಾಧನದ ಬಗೆಗಾಣೆ ಎನ್ನಬಹುದೇ ಎಂಬ ದೇವರ ನಾಮವನ್ನು ಹೇಳು ವರು. "ಮಕ್ಕಳನ್ನ ಮರೀನ ನಮ್ಮದು ಎಂದರೆ ಭಯವಾಗಿ ಹೇಗಪ್ಪ ಎನ್ನಿಸುತ್ತದೆ. ಅವನವು ಅನ್ನಿ ಸಮಾಧಾನವಾಗುತ್ತೆ. ಅವರನ್ನು ಸಾಕೋದು ಅವನ ಕೆಲಸ. ನಮ್ಮನ್ನಿಟ್ಟು ಸಾಕಿಸುತ್ತಾನೆ." "ಸ್ವಾಮಿ, ತಿಳಿದವರು ಮಕ್ಕಳನ್ನ ದಾದಿ ಯಜಮಾನನ ಮಕ್ಕಳನ್ನ ಕಾಣೋ ಹಾಗೆ ಕಾಣಬೇಕು. ಭ್ರಮೆಯಿಂದ ಸಾಕಬೇಕು. ಯಾಕೆ ? ;ತಪ್ಪಿದರೆ ಯಜ ಮಾನ ಕೋಪಿಸುತ್ತಾನೆ. ಆದರೆ ಅವನ್ನು ನನ್ನವು ಅನ್ನಕೂಡದು. ಲಾಲಿಸು ಅಂದರೆ ಲಾಲಿಸಿದೆವು; ಬೇಡವೆಂದರೆ ಬಿಟ್ಟೆವು. ಅವನಿಗೆ ತಿಳಿ ಯದೇ ಯಾವುದು ಸರಿ ಎಂತ." ನನಗೇನೋ ಈ ಹರಿದಾಸರ ಸಂಗಡ

ಅರ್ಥಗಂಟೆ ಮಾತನಾಡಿದರೆ ನಾನು ಇದುವರೆಗೆ ಓದಿ ಕೇಳಿ ನೋಡಿ ಕಲಿತ ಕಲಿವಿನ ಸಾರವೆಲ್ಲ ಮನಸ್ಸಿನಲ್ಲಿ ಮರಳಿ ಮೂಡುತ್ತದೆ. ನಮ್ಮ ಮಿತ್ರರೊಬ್ಬರು ಒಂದು ರಾತ್ರೆ ಬಂಡಿಯಲ್ಲಿ ಮಕ್ಕಳೊಡನೆ ಪ್ರಯಾಣ ಮಾಡುತ್ತ ಮಳೆಯಲ್ಲಿ ಸಿಕ್ಕಿ ಮುಂದಕ್ಕೆ ಹೋಗಲಾರದೆ ದಾರಿಯಲ್ಲಿ ಒಂದು ಮನೆಯನ್ನು ಕಂಡು ಅಲ್ಲಿ ನಿಂತರಂತೆ. ಅದು ಶಿವಾಚಾರದವರ ಒಂದು ಮಠ. ಇವರು ಬಂಡಿಯನ್ನು ನಿಲ್ಲಿಸಿ ಇಲ್ಲಿ ಇಳಿದುಕೊಳ್ಳಬಹುದೆ ಎಂದು ಕೇಳಿದರಂತೆ. ಮಠದ ಅಯ್ಯನೂ ಅಲ್ಲಿದ್ದ ಒಬ್ಬ ಮುದುಕಿಯೂ ಮನೆಯವರೆಲ್ಲರೂ ಬಂದು. ಬರಬೇಕು ಬರಬೇಕು ಎಂದು ಹೇಳಿ ಆದರ ದಿಂದ ಇವರನ್ನು ಕರೆದುಕೊಂಡು ಹೋಗಿ, ಬ್ರಾಹ್ಮಣರು ನಮ್ಮಲ್ಲಿ ಊಟ ಮಾಡುವುದಿಲ್ಲ ಹಣ್ಣು ಹಂಪಲು ತಕ್ಕೊಳ್ಳಿ ಎಂದು ಕೊಟ್ಟು, ಮಕ್ಕಳಿಗೆ ಹಾಸಿಕೊಳ್ಳುವುದಕ್ಕೆ ಹೊಸ ಕಂಬಳಿ ಮೊದಲಾದುವನ್ನು ಕೊಟ್ಟು, ಅಂದಿನ ರಾತ್ರಿ ಅಲ್ಲಿ ನಿಲ್ಲಿಸಿಕೊಂಡಿದ್ದು ಮಾರನೆಯ ದಿನ ಕಳುಹಿಸಿಕೊಟ್ಟರಂತೆ. ನಾನು ಒಂದು ಸಲ ಮಲೆನಾಡಿನಲ್ಲಿ ಸುತ್ತುತ್ತ ಒಂದು ಹಳ್ಳಿಗೆ ಹೋದೆ. ಆ ಕಾಡು ಹಳ್ಳಿಯಲ್ಲಿ ಮಧ್ಯೆ ಒಂದು ದೊಡ್ಡ ಮನೆ. ಇದು ಯಾರದೆಂದೆ. ಚೆನ್ನೇಗೌಡನದು ಎಂದೋ ಏನೋ ಹೆಸರು ಹೇಳಿದರು. ನಾವು ಮಾತ ನಾಡುವುದನ್ನು ಕೇಳಿ ಮನೆಯ ಮುದುಕಿ ಹೊರಗೆ ಬಂದರು. ಒಂದೆರಡು ಮಾತಾದ ಮೇಲೆ "ಇದು ಚೆನ್ನೇಗೌಡರ ಮನೆಯೇ" ಎಂದೆ. "ಹೌದು." "ಚೆನ್ನೇಗೌಡರು ಎಲ್ಲಿ?" "ಶಿವನಪುರಿಗೆ ಹೋಗ್ಯಾರೆ." ನನಗೆ ಅರ್ಥವಾಗಲಿಲ್ಲ. ನಾನು "ಶಿವನಪುರ ಎಲ್ಲಿದೆ?" ಎಂದೆ. ಹತ್ತಿರ ಇದ್ದವರು ಚೆನ್ನೇಗೌಡ ತೀರಿಹೋಗಿದ್ದಾರೆಂದು ತಿಳಿಸಿದರು. ನಾನು "ಅಯ್ಯೋ ಪಾಪ" ಎಂದು "ನಿಮ್ಮ ಮಾತು ತಿಳಿಯಲಿಲ್ಲವಮ್ಮಾ" ಎಂದೆ. ಮುದುಕಿ, "ಅಯ್ಯೋ ನನ್ನಪ್ಪಾ ಏನು ಮಾತು ತಿಳಿಯೋಕೆ ಬಿಡಿ. ಅವರು ಹೋಗಿ ಹತ್ತು ವರ್ಷ ಆಯಿತು," ಎಂದರು. "ಶಿವನಪುರಿಗೆ ಹೋಗಿದಾರೆ!" ಮತ್ತೆ ನೋಡುವ ಭರವಸೆ ಉಂಟು ಎಂದು ಅರ್ಥ ಕಾಣುತ್ತದೆ. ಈ ಅರ್ಥ ಆಕೆಯ ಮನಸ್ಸಿನಲ್ಲಿತ್ತೆ ಎಂದು ಸಂದೇಹ ಆವಶ್ಯಕವಿಲ್ಲ. ಮಾತು ಹುಟ್ಟಿ ಅರ್ಥ ಬರಲಿಲ್ಲ; ಅರ್ಥವಿದ್ದದ್ದರಿಂದ ಮಾತು ಬಂತು.

ಈ ಸಂಸ್ಕೃತಿಯ ಫಲವಾದ ಗ್ರಾಮ ಜೀವನ

ಇದೇ ರೀತಿಯ ನಯವನ್ನು ನಮ್ಮ ಗ್ರಾಮಗಳ ಜೀವನದಲ್ಲಿಯೂ ನಾವು ನೋಡಬಹುದು. ನವನಾಗರಿಕತೆಯ ಬಡಿತದಿಂದ ಈಗ ನಮ್ಮ ಊರುಗಳ ಬದುಕಿನ ಕಟ್ಟು ಸಡಿಲವಾಗಿದೆ. ಈಗ ಕೆಲವು ವರುಷಗಳ ಹಿಂದೆ ಅದು ತಕ್ಕಮಟ್ಟಿಗೆ ಭದ್ರವಾಗಿತ್ತು. ನಮ್ಮ ಜನರಲ್ಲಿ ರಾಜ್ಯವೆಂಬ ಭಾವನೆ ಹೆಚ್ಚಾಗಿರಲಿಲ್ಲ; ಇದು ನಮ್ಮ ದೇಶದ ಚರಿತ್ರೆಯ ಫಲ; ದಿನಕ್ಕೆ ಒಬ್ಬನು ನಾಯಕನೆಂದರೆ, ರಾಮನಿಗೆ ರಾಜ್ಯವಾದರೇನು ರಾವಣನಿಗೆ ರಾಜ್ಯವಾದರೇನು ರಾಗಿ ಬೀಸುವುದು ತಪ್ಪಲಿಲ್ಲ, ಎಂಬ ಭಾವನೆ ಹುಟ್ಟುವುದು ಸ್ವಭಾವ. ಆದರೆ ಊರೆಂದರೆ ಯಾರೂ ಅಸಡ್ಡೆ ಮಾಡುವಂತಿರಲಿಲ್ಲ. ಜನ ನಾಡಿಗೆ ಅಂಟಿದ್ದಿತು: ಬಡಗ ನಾಡಿನವರು, ಸೀರ ನಾಡಿನವರು, ಮಂಡ್ಯದವರು, ಕೆಳ ನಾಡಿನವರು. ಆದ್ದರಿಂದ ಇವರಿಗೆ ತಮ್ಮ ಹಳ್ಳಿಗಳಲ್ಲಿ ಮಮತೆ ಹೆಚ್ಚು. ಊರ ಜನ ಅದರ ಬಳಿ ತೋಪು ಕೊಳ ಗುಡಿ ಮಂಟಪ ಮುಂತಾದುವನ್ನು ಮಾಡಿಕೊಂಡಿದ್ದರು. ಹತ್ತು ಜನಕ್ಕೆ ಸಹಾಯವಾಗುವ ಕೆಲಸವೆಂದರೆ ಪುಣ್ಯವೆಂದು ಭಾವನೆ. ರಂಗಪ್ಪನ ತೋಪು ಗಿರಿಯಪ್ಪನ ಬಾವಿ ಎಂದು ರಂಗಪ್ಪ ಹಾಕಿಸಿದ ತೋಪನ್ನೂ ಗಿರಿಯಪ್ಪನು ತೋಡಿಸಿದ ಭಾವಿಯನ್ನೂ ಕರೆಯುವರು. ಊರಿನ ಮುಂದೆ ರಚ್ಚೆಗಳು; ದಾರಿಗಳಲ್ಲಿ ಹೊರೇಕಲ್ಲುಗಳು, ಜಲಸಂದ್ರಗಳು; ಬಿಸಿಲ ದಿನದಲ್ಲಿ ಅರವಟ್ಟಿಗೆಗಳು. ಊರ ದೇವಾಲಯದಲ್ಲಿ ಉತ್ಸವ ಕಾಲದಲ್ಲಿ ದಿನ ದಿನವೂ ಒಬ್ಬರಲ್ಲದಿದ್ದರೆ ಒಬ್ಬರ ಸೇವೆ. ಕಾಲ ಕಾಲದಲ್ಲಿ ಆಯುಧ ಪೂಜೆ; ಬಿತ್ತುವಂದು ಭೂಮಿಯ ಪೂಜೆ. ಹೊಲ ಗದ್ದೆಗಳ ಕೆಲಸಗಳಲ್ಲಿ ಒಬ್ಬರಿಗೊಬ್ಬರು ನೆರವು. ಊರ ಹುಡುಗರಿಗಾಗಿ ಉಪ್ಪರಪಟ್ಟಿ ಗುಡುಗಿನಾಟ ಮುಂತಾದ ಆಟಗಳು. ಹಬ್ಬಗಳು. ಊರ ಜಗಳದ ನ್ಯಾಯಕ್ಕೆ ಬೇರೆಯವರನ್ನು ಕರೆಯುವುದಿಲ್ಲ. ಊರ ಜನದ ಅಂತಸ್ಸಾಕ್ಷಿ ಊರ ಚಾವಡಿಯಲ್ಲಿತ್ತು. ಈಗ ಅದು ನಾಡಿನ ಅಂತಸ್ಸಾಕ್ಷಿಯಲ್ಲಿ ಲೀನವಾಗಿ ನಮ್ಮ ನ್ಯಾಯಸ್ಥಾನಗಳಲ್ಲಿ ಜನರಿಗೆ ಗುರುತು ಸಿಕ್ಕದೆ ಮರೆಯಾಗಿದೆ. ಅದು ಚಾವಡಿಯಲ್ಲಿದ್ದಾಗ ಜನರು ಅದರೆದುರಿಗೆ ಸುಳ್ಳು ಹೇಳುವುದಕ್ಕೆ ಹಿಂಜರಿಯುತ್ತಿದ್ದರು.

ಹೀಗೆ ಒಂದೊಂದು ಗ್ರಾಮವೂ ಒಂದೊಂದು ಸಂಸಾರದಂತೆ ಇರುತ್ತಿತ್ತು.

ಈ ಸಂಸ್ಕೃತಿಯಲ್ಲಿ ಕಲೆತ ವಿವಿಧ ಮತಗಳು

ಜನದ ಈ ಸಂಸ್ಕೃತಿ ಹಲವು ಮತಗಳ ಸೇರುವೆಯಿಂದ ಬೆಳೆಯಿತು. ಇದರಲ್ಲಿ ಮೊದಲನೆಯದು ನಾವು ಈಗ ಹಿಂದೂಮತವೆನ್ನುವುದರ ಮಧ್ಯಭಾಗ. ವಿದೇಶಿಯರು ನಮ್ಮ ಮತಗಳನ್ನು ಕುರಿತು ಚರ್ಚಿಸುವುದರಲ್ಲಿ ಕ್ರೀಸ್ತಮತ ಮಹಮ್ಮದೀಯ ಮತಗಳನ್ನು ಬೇರೆಯೆಂದು ಎಣಿಸುವಂತೆ ಸನಾತನ ಧರ್ಮದ ಭಾಗಗಳನ್ನು ಬೇರೆ ಬೇರೆ ಮತಗಳೆಂದು ಎಣಿಸಿ ಬರೆದಿದಾರೆ. ಇದು ತಪ್ಪು ರೀತಿಯ ಭಾವನೆ. ಬೌದ್ಧಮತ ಜೈನಮತಗಳು ಹಿಂದೂಮತದಿಂದ ಬೇರೆಯಲ್ಲ. ಪ್ರೊಟೆಸ್ಟೆಂಟ್ ಕ್ರೈಸ್ತಜನರು ಪ್ರೊಟೆಸ್ಟೆಂಟರಾದರೂ ಕ್ರೈಸ್ತರು ಹೇಗೋ ಹಾಗೆ ಬೌದ್ಧರೂ ಜೈನರೂ ಬೌದ್ಧ ಜೈನರಾದರೂ ಹಿಂದೂಗಳೇ; ಸನಾತನ ಧರ್ಮದ ಮಧ್ಯಕಾಂಡವನ್ನಲ್ಲ, ಶಾಖೆಗಳನ್ನು ಅವಲಂಬಿಸಿರುವವರೂ ಅಷ್ಟೇ. / (ಇತ್ತೀಚೆಗೆ ಕೆಲವರು ವಿದೇಶೀಯರು ವೀರಶೈವ ಮತ ಕೂಡ ಹಿಂದೂಮತದಿಂದ ಬೇರೆ ಎಂಬಂತೆ ಮಾತನಾಡಿದಾರೆ) ಹಿಂದೂಮತವನ್ನು ಇವರು "ಬ್ರಾಹ್ಮನಿಕಲ್" ಎಂದರೆ ಬ್ರಾಹ್ಮಣವೆಂದು ಕರೆಯುತ್ತಾರೆ. ಈ ಮಾತು ಬ್ರಾಹ್ಮಣ ಬ್ರಾಹ್ಮಣೇತರರ ವೈಷಮ್ಯಕ್ಕೆ ಕೂಡಾ ಕಾರಣವಾಗಿದೆಯೆನ್ನಬೇಕು. ಸನಾತನ ಧರ್ಮ ಯಾವ ಒಂದು ಜಾತಿಗೆ ಸೇರಿದುದೂ ಅಲ್ಲ. ಅದು ಬ್ರಾಹ್ಮನಿಕಲ್ಲೂ ಅಲ್ಲ ಶೂದ್ರಯಿಕಲ್ಲೂ ಅಲ್ಲ; ಅದಕ್ಕೆ ಬೌದ್ಧ ಜೈನ ತತ್ತ್ವಗಳು ವಿರೋಧವಾದುದಲ್ಲ; ವೀರಶೈವ ಮತವು ಅದರ ಆವರಣದಿಂದ ಹೊರಗಿರತಕ್ಕದ್ದಲ್ಲ. ಹೀಗೆ ಬೌದ್ಧ ಜೈನ ವೀರಶೈವ ಮೊದಲಾದ ಹಲವು ಶಾಖೆಗಳನ್ನೊಳಗೊಂಡ ಈ ಧರ್ಮದಲ್ಲಿ ಮಧ್ಯಭಾಗವೆನ್ನುವುದು ಸಾಂಪ್ರದಾಯಿಕವಾಗಿರುತ್ತ ಸ್ವಲ್ಪ ಸ್ವಲ್ಪ ಮಾರ್ಪಟ್ಟರೂ ಮೊತ್ತದಲ್ಲಿ ಆದಿಯಲ್ಲಿದ್ದ ಅಚ್ಚಿನಲ್ಲೇ ನಡೆದುಬರುತ್ತಿರುವ ಮತ./ ಇದನ್ನು ನಾವು ಸ್ಮಾರ್ತ ಮತವೆಂದು ಕರೆಯಬಹುದು. ಕರ್ಣಾಟಕದ ಜನಸಂಸ್ಕೃತಿಯ ಚಿತ್ರಪಟದಲ್ಲಿ ಮೊದಲ ಬಣ್ಣ ಈ ಸ್ಮಾರ್ತ ಮತದ್ದು. ಇದಾದ ಮೇಲೆ

ಬೌದ್ಧಮತದ ಬಣ್ಣ ಸ್ವಲ್ಪ ಸೇರಿರಬೇಕು; ಇದರ ಜೊತೆಯಲ್ಲಿ ಜೈನ ಮತದ ಬಣ್ಣ ಸ್ವಲ್ಪ ಸೇರಿತು. ಆಮೇಲೆ ಅದರಲ್ಲಿ ವಿಶಿಷ್ಟಾದ್ವೈತ ಮತದ ವರ್ಣ ಒಂದು ಕಡೆ ಸೇರಿತು. ಇತ್ತ ಇದು ಸೇರುತ್ತಿರುವಲ್ಲಿ ಇನ್ನೊಂದು ಕಡೆ ಈ ನಾಡಿನ ಉತ್ತರ ಭಾಗದಲ್ಲೇ ಹುಟ್ಟಿದ ವೀರಶೈವ ಮತವೂ ಹರಿದಾಸ ಪಂಥವೂ ಚಿತ್ರಕ್ಕೆ ಬೇರೆ ಬೇರೆಯ ತೀವ್ರ ವರ್ಣಗಳನ್ನು ಸೇರಿಸಿದುವು. ಅದರಿಂದಾಚೆಗೆ ಕನ್ನಡನಾಡು ಕಷ್ಟಕ್ಕೆ ಸಿಕ್ಕಿ ಪುರೋಗಮನದಲ್ಲಿ ಭಂಗವನ್ನು ಪಡೆಯಿತು. ರಾಜ್ಯದಲ್ಲಿ ನೆಮ್ಮದಿ ಇಲ್ಲದ್ದರಿಂದ ಜನ ಒಂದು ಮುಖವಾಗಿ ಬೆಳೆಯುವುದಕ್ಕೆ ಇಲ್ಲದೆ ಹೋದರೂ ಜನರು ತಮ್ಮ ಹಿರಿಯರಿಂದ ಬಂದ ಧರ್ಮವನ್ನು ಹೇಗೋ ಹಾಗೆ ಕಾಪಾಡಿಕೊಂಡು ಬಂದರು. ನಮ್ಮ ಜನರ ಸಂಸ್ಕೃತಿಯಲ್ಲಿ ಕಡೆಯಲ್ಲಿ ಬಿದ್ದ ಬಣ್ಣ ವೀರಶೈವ ಮತದ್ದು ಮಾಧ್ವ ಮತದ್ದು. ಈಚೆಗೆ ಮಹಮ್ಮದೀಯ ಮತ ಕ್ರೈಸ್ತ ಮತಗಳ ಸಂಪರ್ಕದಿಂದಲೂ ಕೆಲವು ಕೆಲವು ಮಾರ್ಪಾಡುಗಳು ಉಂಟಾಗಿವೆ.

ಸಂಸ್ಕೃತಿಯಲ್ಲಿ ಬೌದ್ಧ ಜೈನ ಮತಗಳ ಅನುಭಾವ

ಕರ್ಣಾಟಕದ ಸಂಸ್ಕೃತಿ ಬೌದ್ಧಮತದಿಂದ ಯಾವ ವಿಶೇಷ ಗುಣವನ್ನು ಪಡೆದಿರಬಹುದೆಂದು ಹೇಳುವುದಕ್ಕೆ ಅವಕಾಶವಿಲ್ಲ. ಬುದ್ಧ ಮತಾವಲಂಬಿಯಾದ ಅಶೋಕ ಮಹಾರಾಜನ ಶಾಸನಗಳು ಮೂರು ಮೈಸೂರ ಉತ್ತರ ಭಾಗದಲ್ಲಿ ಸಿಕ್ಕಿರುವುದರಿಂದಲೂ, ಬೌದ್ಧರು ತಮ್ಮ ಮತ ಪ್ರಚಾರಕ್ಕಾಗಿ ಭರತವರ್ಷದಲ್ಲೆಲ್ಲ ಪ್ರಯತ್ನ ಮಾಡಿದರಾದ್ದರಿಂದಲೂ, ಅವರು ಕರ್ಣಾಟಕದಲ್ಲಿಯೂ ಕೆಲಸ ಮಾಡಿರಬೇಕೆಂದು ಊಹಿಸುವುದಕ್ಕೆ ಕಾರಣವಿದೆ. ಅಜಂತದ ದೇವಾಲಯಗಳೂ ಕನ್ನಡ ನಾಡಿನ ಎಲ್ಲೆಯಲ್ಲಿವೆ. ಬೌದ್ಧ ಶ್ರವಣರು ಕರ್ಣಾಟಕದಲ್ಲಿ ತಮ್ಮ ಮತವನ್ನು ಪ್ರಚಾರಮಾಡಿದ್ದೇನೋ ಇರಬೇಕು. ಆದರೆ ಅವರ ಗುರುತು ಕನ್ನಡ ನಾಡಿನಲ್ಲಿ ಬಹಳವಾಗಿ ಸಿಕ್ಕುವಂತಿಲ್ಲ. ಬೌದ್ಧಮತ ಗ್ರಂಥಗಳ ಅನ್ವೇಷಣಕ್ಕಾಗಿ ನಮ್ಮ ಸೀಮೆಗೆ ಬಂದ ಫಾಹಿಯಾನ್ ಎಂಬ ಚೀನನು ಮಧ್ಯದೇಶದ ಪ್ರಯಾಣ ಮುಗಿಸಿದ ಮೇಲೆ ನಾವೆಯನ್ನೇರಿ ಸಿಂಹಳ

ದ್ವೀಪಕ್ಕೆ ಹೋದಂತೆ ಅವನ ಪ್ರಯಾಣ ಕಥೆಯಿಂದ ತಿಳಿಯುತ್ತದೆ. ಕರ್ಣಾಟಕದಲ್ಲಿ ಬೌದ್ಧಕ್ಷೇತ್ರಗಳು ಹೆಚ್ಚಾಗಿದ್ದಲ್ಲಿ ಅವನು ಇಲ್ಲಿಗೂ ಪ್ರಾಯಶಃ ಬರುತ್ತಿದ್ದನು. ಎಂದರೆ ಬೌದ್ಧಮತವು ಕರ್ಣಾಟಕದ ಅಂಚನ್ನು ಮುಟ್ಟಿದಷ್ಟು ಮಾತ್ರವೇ ಹೋಗಿತು ಇಲ್ಲಿ ನೆಲಸಲಿಲ್ಲವೆಂದು ತೋರುತ್ತದೆ. ಇದು ಹೇಗಾದರೂ ಶ್ರೀ ಶಂಕರಾಚಾರ್ಯರು ಸನಾತನ ಧರ್ಮಸ್ಥಾಪನ ಕಾರ್ಯದಲ್ಲಿ ವಿಮತಖಂಡನ ಮಾಡುತ್ತ ಯಾವು ದಾದರೂ ಒಳ್ಳೆಯ ಅಂಶಗಳು ಜನರಲ್ಲಿ ಊರಿದ್ದರೆ ಅವುಗಳನ್ನು ಬಿಡದಂತೆ ಮುಖ್ಯ ಧರ್ಮಕ್ಕೆ ಅವನ್ನು ಸಮನ್ವಯ ಮಾಡಿ ಬೌದ್ಧ ಮತವು ಬೇರೆಯ ಮತವಾಗಿ ಜನರಲ್ಲಿ ನಿಲ್ಲಬೇಕಾದ ಅವಶ್ಯಕತೆಯನ್ನು ಕಳೆದರು. ಬೌದ್ಧಮತದ ಉಪಯುಕ್ತ ತತ್ತ್ವಗಳು ಹಲವು ಹೀಗೆ ಸನಾತನ ಧರ್ಮದಲ್ಲಿ ಬೆರೆತುಹೋಗಿರಬೇಕು.

ಜೈನಮತದ ಚಿಹ್ನೆಗಳು ಕರ್ಣಾಟಕದಲ್ಲಿ ಇದಕ್ಕಿಂತ ಸ್ವಲ್ಪ ಸ್ಪಷ್ಟ ವಾಗಿ ಕಾಣುತ್ತವೆ. ಶ್ರವಣಬೆಳಗೊಳವೂ ಕಾರಕಳವೂ ಕರ್ಣಾಟಕ ದಲ್ಲಿರುವ ಜೈನ ಯಾತ್ರಾಸ್ಥಾನಗಳು. ಕನ್ನಡ ಸಾಹಿತ್ಯದ ಆರಂಭ ಕಾಲದ ಉದ್ದಾಮ ಕವಿಗಳೆಲ್ಲ ಜೈನರೇ. ಕನ್ನಡ ನಾಡಿನ ಜೈನ ಅರಸರು ಅನೇಕರು ಆಳಿದರು. ಜೈನರು ಈಗಲೂ ಮನೆಯಲ್ಲಿ ಮದುವೆ ಮುಂಜಿಗಳಲ್ಲಿ ಕನ್ನಡದ ಮಂತ್ರಗಳನ್ನು ಹೇಳುವರಂತೆ. ಕರ್ಣಾಟಕದ ಜೈನರು ಆಡುವ ಮಾತು ಕೂಡ ಅಚ್ಚಗನ್ನಡ. ಸರ್ವಜ್ಞನು ಜೈನ ಮತವನ್ನು ಹೊಗಳುತ್ತಾನೆ. ಬೇರೇದೇವರು ಜಿನ್ನೇದೇವರನ್ನು ಬಟ್ಟೆ ಬೇಡಿದಹಾಗೆ ಎನ್ನುವ ನಾಣ್ಣುಡಿಯಿಂದ ಜಿನಮೂರ್ತಿಯು ಜನಕ್ಕೆ ಪರಿಚಿತಮೂರ್ತಿಯಾಗಿತ್ತೆಂದು ವ್ಯಕ್ತವಾಗುತ್ತದೆ. ಆದರೆ ಜೈನರ ಚರಿತ್ರೆಯಲ್ಲೂ ಕೂಡ ಬರಬರುತ್ತ ಹೆಚ್ಚಿನ ಮಾರ್ಪಾಡುಗಳು ಆದುವು. ರಾಮಾನುಜನರ ಮತವು ಮೈಸೂರ ನಾಡಿಗೆ ಬಂದು ಜೈನರ ಪ್ರಾಬಲ್ಯ ಕಡಿಮೆಯಾಯಿತು. ಇದರಿಂದ ಇವರ ಮತದಿಂದ ಜನದ ಬದುಕಿನಲ್ಲಿ ಯಾವ ಸಂಸ್ಕಾರವುಂಟಾಗಿತ್ತೋ ಅದು ಕೂಡ ಬೇರೆಯಾಗಿ ಗುರುತು ಸಿಕ್ಕದಂತೆ ಸನಾತನ ಧರ್ಮದಲ್ಲಿ ಸೇರಿಹೋಯಿತು. ಈಗ ಹಳ್ಳಿಗಳಲ್ಲಿರುವ ಜೈನರು ಉತ್ತಮ ತರಗತಿಯ ಸನಾತನ ಧರ್ಮ

ಗಳಂತೆಯೇ ಕಾಣುವರು. ಮಾತನಾಡಿಸಿ ನೋಡಿದರೂ ಜೈನರಿಗೂ ಹಿಂದೂಗಳಿಗೂ ವ್ಯತ್ಯಾಸವೇನೆಂದು ಕಂಡುಬರುವುದಿಲ್ಲ. ಒಟ್ಟಿನಲ್ಲಿ ಮೊದಲಲ್ಲಿ ಪ್ರಾಣಿವಧೆ ತಪ್ಪೆಂಬ ಭಾವನೆ ಜನರಲ್ಲಿ ಜೈನಮತದಿಂದ ಹರಡಿರಬೇಕು.

ಸನಾತನ ಧರ್ಮದ ಅನುಭಾವ

ಬೌದ್ಧ ಜೈನಮತಗಳು ಖಿಲವಾದರೂ ಅವುಗಳ ಉತ್ತಮ ಗುಣಗಳನ್ನು ಒಳಗೆ ಸೇರಿಸಿಕೊಂಡು ಹೆಚ್ಚು ಜನರದಾಗಿ ನಿಂತ ಮತವನ್ನು ಮುಖ್ಯಮತ ಸ್ಮಾರ್ತಮತ ಎಂದು ಇಲ್ಲಿ ಕರೆದಿದೆ. ಈ ಮತದಲ್ಲಿ ಇದೊಂದು ವಿಶೇಷ ಗುಣ. ಇದು ಇನ್ನು ಯಾವ ಮತದಿಂದಲೂ ಮರೆಯಾಗಿ ಹೋಗಿಲ್ಲ. ಈ ಮತವು ಮನುಷ್ಯ ವರ್ಗದ ಎಲ್ಲಾ ಅವಸ್ಥೆಗಳಿಗೂ ಅನುಕೂಲವಾದ ತತ್ತ್ವಗಳನ್ನು ಒಳಗೊಂಡಿದೆ. ಇದರಲ್ಲಿ ವೇದಾಂತದ ಕಡೆಯ ಎಲ್ಲೆಯಲ್ಲಿ ಸುಳಿಯುವ ಜ್ಞಾನಿಯಿಂದ ಹಿಡಿದು ಸಾಮಾನ್ಯ ಜೀವನದಲ್ಲಿ ಬೀಳುತ್ತ ಏಳುತ್ತ ದೇವರನ್ನು ಒಬ್ಬ ಮನುಷ್ಯನಂತೆ ಭಾವಿಸಿ ಅವನ ಕೃಪೆಯನ್ನು ಸಂಪಾದಿಸುವುದಕ್ಕೆ ಅವನಿಗೆ ತೆಂಗಿನಕಾಯಿ ಒಡೆಯಬೇಕು ಎನ್ನುವ ಸಾಮಾನ್ಯ ಜ್ಞಾನಿಯವರೆಗೆ ಎಲ್ಲ ಮಟ್ಟದ ಸಂಸ್ಕಾರದ ಜನಕ್ಕೂ ಸ್ಥಳವಿದೆ; ಮಾನವ ಹೃದಯದ ಎಲ್ಲ ಭಾಗಕ್ಕೂ ಒಂದು ಅವಕಾಶವಿದೆ; ಇರುವಲ್ಲಿಂದ ಮುಂದಕ್ಕೆ ಒಯ್ಯಲು ದಾರಿಯಿದೆ. ಇದರ ತತ್ತ್ವಗಳು ಇಷ್ಟೇ ಎಂದು ಹೇಳುವಂತಿಲ್ಲ. ಆದರಿಂದ ಇದು ಒಂದು ಮತವೇ ಎಂದು ಕೆಲವರು ಪ್ರಶ್ನೆಮಾಡುವಂತೆ ಕೂಡ ಆಗಿದೆ. ಇದು ತತ್ತ್ವ ಕೆಲವನ್ನು ಹೇಳಿ ಅದಕ್ಕೆ ಒಪ್ಪಿದವರೇ ತನ್ನವರೆನ್ನುವುದಿಲ್ಲ. ಬಂದ ಎಲ್ಲಾ ಜನರನ್ನೂ ತನ್ನವರೆಂದು ಅವರ ಬದುಕನ್ನು ವ್ಯವಸ್ಥೆಗೊಳಿಸುವುದಕ್ಕೆ ಏರ್ಪಾಡು ಮಾಡಿದೆ. ಇದರಲ್ಲಿ ಸಮಾಜದ ಬೆಳವಣಿಗೆಗೆ ವ್ಯಕ್ತಿಯ ಬೆಳವಣಿಗೆಗೆ ಅವಶ್ಯಕವಾದ ಮುಖ್ಯ ಸೂತ್ರಗಳೆಲ್ಲ ಅಡಕವಾಗಿವೆ; ದಿನದ ಆಚಾರ, ವ್ಯವಹಾರ, ಪೂಜೆ ಪುರಸ್ಕಾರ, ಹಬ್ಬ ಹುಣ್ಣಿಮೆ, ಇರುವುದು ಹೋಗುವುದು, ಕಷ್ಟ ಸುಖ, ಎಲ್ಲವೂ ಒಂದು ಉಚ್ಚ ನಿಯಮಕ್ಕೆ ವಿಧೇಯವಾಗಿ ನಡೆದುಕೊಳ್ಳುತ್ತವೆ.

ಇದು ಜನದ ಜೀವನದಲ್ಲಿ ಗಾಳಿಯಂತೆ ಬೆಳಕಿನಂತೆ ಎಲ್ಲೆಡೆಯನ್ನು ವ್ಯಾಪಿಸಿ ಅದನ್ನು ಸಾಧ್ಯವಾದಲ್ಲೆಲ್ಲ ತಿದ್ದುತ್ತ ಇದ್ದಿದೆ.

ಸ್ಮಾರ್ತ ಮತವು ತಿಳಿವನ್ನೆಲ್ಲ ಜನರಿಂದ ಮರೆಯಿಸಿತ್ತೆಂದೂ ಸಾಮಾನ್ಯ ಜನರನ್ನೆಲ್ಲ ಪುರೋಹಿತ ವರ್ಗಕ್ಕೆ ಅಧೀನವಾಗಿ ಮಾಡಿತ್ತೆಂದೂ ಪಾಶ್ಚಾತ್ಯ ಧರ್ಮಜ್ಞರು ಹೇಳುವುದುಂಟು. ಇತ್ತೀಚಿಗೆ ನಮ್ಮ ಜನರೂ ಈ ಮಾತನ್ನು ಹೇಳುತ್ತಿದಾರೆ. ಜನರಿಗೆಲ್ಲ ಓದುಬರಹ ಕಲಿಸಲು, ಜನರಿಗೆ ಜ್ಞಾನಸಂಪಾದನೆಯ ಸಾಧನವನ್ನು ಕೊಡಲು, ಹಿಂದೆ ಸಾಕಾದಷ್ಟು ಪ್ರಯತ್ನ ನಡೆಯಲಿಲ್ಲವೆಂದರೂ ಜನಾಂಗದ ಜ್ಞಾನದ ಸಾರವನ್ನು ಜನರಲ್ಲಿ ಹರಡುವುದಕ್ಕೆ ನಮ್ಮ ಪೂರ್ವಿಕರು ಪ್ರಯತ್ನ ಮಾಡದೆ ಬಿಡಲಿಲ್ಲವೆಂದು ಈ ಮೊದಲೇ ಸೂಚಿಸಿದೆ. ಈ ಮತವು ಮುಖ್ಯವಾದ ಆಚಾರವನ್ನು ವಿಧಿಸಿ ಬದುಕನ್ನು ತಿದ್ದಿತು. ನಾವು ಈಚೆಗೆ ಕರ್ಮವೆಂದರೆ ಹಾಸ್ಯ ಮಾಡುವುದಕ್ಕೆ ಆರಂಭ ಮಾಡಿದೇವೆ. ಸಂಧ್ಯಾವಂದನೆಯನ್ನೇಕೆ ಮಾಡಬೇಕು ಎನ್ನುವೆವು. ನಮ್ಮ ತಾತಂದಿರು ಕಟ್ಟುನಿಟ್ಟಾಗಿ ಒಂದು ಗಳಿಗೆಯಾದರೂ ದೇವರನ್ನು ನೆನೆಯುತ್ತಿದ್ದ ಸಂದರ್ಭದಲ್ಲಿ ನಾವು ಒಂದು ಕ್ಷಣವಾದರೂ ನೆನೆಯುವುದಿಲ್ಲ. ದೇವರ ಪೂಜೆಗೆ ದೇವಾಲಯಕ್ಕೆ ಏಕೆ ಹೋಗಬೇಕು ಎನ್ನುವೆವು ; ದೇವಾಲಯಕ್ಕೆ ಹೋಗುವುದೂ ಇಲ್ಲ, ಬೇರೆ ಕಡೆ ದೇವರನ್ನು ಪೂಜಿಸುವುದೂ ಇಲ್ಲ. ಮಾಡಬೇಕಾದದ್ದೆಂದು ನಿರ್ಧಾರವಾದ ಕೆಲಸವನ್ನು ಜನರು ಮಾಡುವರೇ. ಇಂದು ಅದರ ಅರ್ಥ ತಿಳಿಯದಿದ್ದರೂ ಮುಂದೆ ಅದನ್ನು ಅವರು ತಿಳಿಯಬಹುದು. ಕರ್ಮವನ್ನು ನಿಯಮಿಸುವುದರ ಉದ್ದೇಶ ಇದು. ಅನೇಕ ಸಂದರ್ಭದಲ್ಲಿ ಮೊದಲು ಅರ್ಥ ತಿಳಿದಿದ್ದು ಆಮೇಲೆ ಮರೆಯುವುದೂ ನಿಜ. ಆದರೆ ಅದರಿಂದ ಮೊದಲು ಏರ್ಪಾಡು ಮಾಡಿದವರ ಮೇಲೆ ತಪ್ಪು ಹೊರಿಸುವುದು ಸರಿಯಲ್ಲ. ಸ್ಮಾರ್ತ ಮತವು ಮೊದಲು ವಿಶೇಷವಾಗಿ ಕರ್ಮವನ್ನು ವಿಧಿಸಿ ಸಾಮಾನ್ಯ ಜನರ ಬಾಳನ್ನು ಸಂಸ್ಕರಿಸಲು ಯತ್ನಮಾಡಿತು. ಬರಿಯ ಕರ್ಮದಿಂದ ಜನ ಉದ್ಧಾರವಾಗಲಿಲ್ಲವೆಂದು ಹೊಸ ಮತಗಳು ಏಳಲು ಅವುಗಳ ಉತ್ತಮ ಭಾಗಗಳನ್ನು ಸ್ವೀಕರಿಸಿ ಭಕ್ತಿಮಾರ್ಗವನ್ನು ಜನರಲ್ಲಿ

ಪ್ರಚಾರಕ್ಕೆ ತಂದಿತು. ಇತರ ಮತಗಳು ದೇಶಭಾಷೆಗಳ ಸಹಾಯ ದಿಂದ ನೀತಿಯನ್ನು ಕಲಿಸಬಂದದ್ದನ್ನು ನೋಡಿ ತಾನೂ ದೇಶಭಾಷೆಯ ಸಹಾಯವನ್ನು ತೆಗೆದುಕೊಂಡಿತು. ಕಾಲಾನುಗುಣವಾಗಿ ಹೊಸ ಪದ್ಧತಿಗಳನ್ನು ಅನುಸರಿಸುತ್ತ ತನ್ನ ಕರ್ತವ್ಯವನ್ನು ಸಾಧ್ಯವಾದಷ್ಟು ಮಟ್ಟಿಗೆ ನಡೆಯಿಸುತ್ತ ಬೆಳೆಯಿತು.

ಸ್ಮಾರ್ತ ಮತವು ಸಾಮಾನ್ಯ ಜನರನ್ನು ಮರೆಯಲಿಲ್ಲವೆನ್ನುವುದು ಶಂಕರಾಚಾರ್ಯರ ಮತ್ತು ಅವರ ಶಿಷ್ಯರ ಶ್ಲೋಕಮಂಜರಿಗಳಿಂದ ವ್ಯಕ್ತವಾಗುತ್ತದೆ. ಈ ಶ್ಲೋಕಗಳಿಗಿಂತ ಸರಳವಾದ ಭಾಷೆಯಲ್ಲಿ ಇವು ಹೇಳುವಷ್ಟು ತತ್ತ್ವವನ್ನು ಹೇಳುವ ಶ್ಲೋಕಗಳನ್ನು ಮತ್ತೆ ಯಾವ ಭಾಷೆಯಲ್ಲಿಯಾದರೂ ನೋಡುವುದು ದುರ್ಲಭ. ಆ ಶ್ಲೋಕಗಳಲ್ಲಿ ಹೇಳಿರುವ ತತ್ತ್ವಗಳಂತೂ ಹಿರಿಯರು ಕಿರಿಯರಿಗೆನ್ನದೆ ಸರ್ವರಿಗೂ ಬೇಕಾದುವಾಗಿವೆ. ಶಾಂಕರ ಮತವು ಜೀವವನ್ನೇ ಪರಮಾತ್ಮನೆಂದು ಹೇಳುತ್ತದೆಂದೂ ಸೃಷ್ಟಿಯನ್ನೆಲ್ಲಾ ಮಾಯವೆಂದು ವರ್ಣಿಸುತ್ತ ದೆಂದೂ ಆದರಿಂದ ಮನುಷ್ಯನು ಕೆಲಸ ಮಾಡುವುದಕ್ಕೆ ಕಾರಣವೇ ಇಲ್ಲದೆ ಹೋಗುತ್ತದೆಂದೂ ಒಳ್ಳೆಯತನಕ್ಕೆ ಸಾಕಾದ ಪ್ರಯೋಜನವು ನಾಶವಾಗುತ್ತದೆಂದೂ ಸಾಮಾನ್ಯವಾದ ಭಾವನೆ ಕೆಲವು ಜನರಲ್ಲಿ ಹರಡಿದೆ. ಈ ದೋಷಗಳನ್ನು ಈ ಮತದ ವಿರೋಧಿಗಳು ಇದಕ್ಕೆ ಆರೋಪಿಸುವರು. ಇದೆಲ್ಲ ಭ್ರಮೆಯ ಮಾತು. ಶಾಂಕರ ಮತವನ್ನು ಅನುಸರಿಸುವವರು ಕೂಡ ಅದ್ವೈತವು ಕಷ್ಟಸಾಧ್ಯವೆಂದು ಬಲ್ಲರು. ಆ ಮತವಾಗಲಿ ಮನುಷ್ಯನನ್ನು ಇಷ್ಟಬಂದಹಾಗೆ ಮಾಡೆಂದು ಹೇಳ ವುದಿಲ್ಲ, ಶುಷ್ಕಮಾಯಾವಾದದಲ್ಲಿ ಬದುಕನ್ನು ಮುಗಿಸು ಎನ್ನುವುದಿಲ್ಲ; ಒಳ್ಳೆಯದರಿಂದ ಪ್ರಯೋಜನವಿಲ್ಲವೆನ್ನುವುದಿಲ್ಲ. ಆಚಾರ್ಯರ ಭಜಗೋವಿಂದಂ ಶ್ಲೋಕಮಂಜರಿಯಲ್ಲಿ ಈ ಮುಖ್ಯ ತತ್ತ್ವ ಸ್ಪಷ್ಟವಾಗು ವುದು. ಗೋವಿಂದನನ್ನು ಭಜಿಸು. ಸಾವು ಬಂದಾಗ ಡುಕೃಂಕರಣೆ ರಕ್ಷಿಸುವುದಿಲ್ಲ. ಜ್ಞಾನದ ಸಲಕರಣೆ ಜ್ಞಾನವಲ್ಲ; ಜ್ಞಾನವನ್ನೇ ಸಂಪಾದಿಸು; ಅದರಂತೆ ನಡೆ. ನಾನು ಯಾರು ಎಲ್ಲಿಂದ ಬಂದೆ ಎಲ್ಲಿಗೆ ಹೋಗುತ್ತೇನೆ ಎಂದು ಯೋಚನೆ ಮಾಡು. ಇದು ಬುದ್ಧಿವಂತನ

ಲಕ್ಷಣ. ಸಾಮಾನ್ಯನು ಬಾಲ್ಯದಲ್ಲಿ ಆಟದಲ್ಲಿಯೂ ಯೌವನದಲ್ಲಿ ಸುಖದಲ್ಲಿಯೂ ವಾರ್ಧಿಕ್ಯದಲ್ಲಿ ಚಿಂತೆಯಲ್ಲಿಯೂ ಮಗ್ನನಾಗಿರುತ್ತಾನೆ; ಹೀಗಿರಬಾರದು. ಪರವಸ್ತುವಿನ ಸ್ವರೂಪವನ್ನು ಅರಿ. ಅದರ ವಿಶ್ವ ನಿಯಮಕ್ಕೆ ಅನುಗುಣವಾಗಿ ನಡೆದುಕೋ. ಸರಿಯಾದ ಭಾವದಿಂದ ಗೀತೆಯ ಒಂದು ಮಾತನ್ನು ಪಾಠ ಮಾಡಿದರೂ ಮುಕ್ತಿಯುಂಟು; ಅದಿಲ್ಲದೆ ಗೀತೆಯೆಲ್ಲವನ್ನೂ ಪಾಠಮಾಡಿ ಪ್ರಯೋಜನವಿಲ್ಲ. ವಿಷಯ ಸುಖವು ಹೇಯವಾದದ್ದು, ಕ್ಷಣಿಕವಾದದ್ದು; ಅದಕ್ಕೆ ಮನಸ್ಸನ್ನು ಕೊಡಬೇಡ. ನಿತ್ಯಸುಖ ಹಿರಿಯದು; ಅದನ್ನು ಅಪೇಕ್ಷಿಸು; ಅದನ್ನು ಸಂಪಾದಿಸಲು ಯತ್ನಮಾಡು; ಇತ್ಯಾದಿ, ಇತ್ಯಾದಿ. ವೇದಾಂತದ ಸಾರವೇ ಈ ಶ್ಲೋಕಗಳಲ್ಲಿ ಭಟ್ಟಿ ಇಳಿದಿದೆ

ಅನುಭವಾಮೃತ ಕಾವ್ಯ

ಕಾಲಕ್ರಮದಲ್ಲಿ ಜನದ ಉಪದೇಶಕ್ಕಾಗಿ ಸ್ಮಾರ್ತಮತಾವಲಂಬಿಗಳಿಂದ ಅನೇಕ ಷಟ್ಪದೀ ಕಾವ್ಯಗಳು ಸೃಷ್ಟವಾದುವು. ಬರಬರುತ್ತ ಜ್ಞಾನವು ಮುಖ್ಯವೇ ಹೊರತು ಅದನ್ನು ಕಲಿಯುವುದು ಯಾವ ಭಾಷೆಯಲ್ಲಿ ಎಂಬುದು ಮುಖ್ಯವಲ್ಲ ಎಂಬುದು ಜನರಿಗೆ ತೋರಿತು. ಇದು ಇಷ್ಟು ಕಷ್ಟವಾದ ವಿಷಯವೇ ಎಂದು ನಾವು ಕೆಲವರು ಕೇಳಬಹುದು. ನಿಜವಾಗಿಯೂ ಇದು ಬಹಳ ಕಷ್ಟ. ಪ್ರಪಂಚದಲ್ಲೆಲ್ಲಾ ಈ ಕಷ್ಟದ ಅನುಭವ ಉಂಟಾಗಿದೆ. ಲ್ಯಾಟಿನ್, ಗ್ರೀಕ್ ಭಾಷೆಗಳಿಂದ ಕ್ರೈಸ್ತ ಬೈಬಲ್ ಗ್ರಂಥವು ಸಾಮಾನ್ಯ ಜನದ ಭಾಷೆಗಳಿಗೆ ಭಾಷಾಂತರವಾಗಬೇಕಾದರೆ ಸಾವಿರದ ಐದುನೂರು ವರ್ಷ ಕಳೆಯಿತು. ಇಂಥಾ ಭಾವನೆ ಇನ್ನೂ ನಮ್ಮಲ್ಲಿ ಹೋಗಿಲ್ಲ. ಸಂಸ್ಕೃತದ ವಿಷಯದಲ್ಲಿ ಸಂಸ್ಕೃತ ಪಂಡಿತರಿಗಿರುವ ಈ ಭಾವನೆ ಈಗ ಇಂಗ್ಲೀಷ್ ಭಾಷೆಯ ವಿಷಯದಲ್ಲಿ ಇಂಗ್ಲೀಷನ್ನು ಕಲಿತ ನಮಗೆ ಇದೆ. ಇಂಗ್ಲೀಷಿನಲ್ಲಿ ಇರುವ ವಿಷಯವನ್ನು ಕನ್ನಡದಲ್ಲಿ ಹೇಳುವುದು ಸಾಧ್ಯವೇ ಎಂದು ನಮ್ಮಲ್ಲಿ ಅನೇಕರಿಗೆ ಈಗಲೂ ಸಂದೇಹ. ಕನ್ನಡದ ಜನದ ತಲೆಗೆ ಅಂಟಬಹುದಾದ ಭಾವವೆಲ್ಲಾ ಕನ್ನಡದ ನುಡಿಯಲ್ಲಿ ಹೇಳಲು ಸಾಧ್ಯವಾಗುವುದೆಂದು

ನಾವು ಒಮ್ಮೆಗೆ ಒಪ್ಪುವುದಿಲ್ಲ. ಹಿಂದೆ ಈ ಭಾವ ಬರುವುದು ಹೀಗೆಯೇ ಸಾವಕಾಶವಾಯಿತು. ಬಂದಾಗ್ಯೆ ಕನ್ನಡ ನಾಡಿನ ಜ್ಞಾನಿಗಳು ಜನರಿಂದ ಯಾವುದನ್ನೂ ಬಚ್ಚಿಡಲಿಲ್ಲ. ಅನುಭವಾಮೃತವೆಂಬ ಗ್ರಂಥದಿಂದ ಈ ವಿಷಯ ಸ್ಪಷ್ಟವಾಗುತ್ತದೆ.

ಕನ್ನಡವನ್ನು ಸುಲಿದ ಬಾಳೆಯ ಹಣ್ಣಿನಂದ ಕಳೆದ ಸಿಗುರಿನ ಕಬ್ಬಿನಂದ ಎಂದು ಮೊದಲಾಗಿ ಹೊಗಳುವ ಪದ್ಯವನ್ನು ನಾವೆಲ್ಲಾ ಕೇಳಿರುವೆವು. ಆ ಪದ್ಯದಲ್ಲಿಯ ಉಜ್ಜ್ವಲ ಭಾಷಾಪ್ರೇಮವು ಈಗ ದೇಶ ವತ್ಸಲರೆನ್ನಿಸಿಕೊಳ್ಳುವ ನಮ್ಮಲ್ಲಿ ಕೂಡ ಅನೇಕರಿಗೆ ಇರಲಾರದು. ಸಂಸ್ಕೃತದ ಗಂಧವನ್ನೇ ಅರಿಯದವರಾದರೂ ನಾವು ಸಂಸ್ಕೃತದಲ್ಲೇನಿದೆ ಎಂದು ಹೇಳುವುದಕ್ಕೆ ಹಿಂಜರಿಯುತ್ತೇವೆ. ಇಂಗ್ಲೀಷಿನಲ್ಲೇನಿದೆ ಎಂದು ಯಾರೂ ಹೇಳುವ ಸಂದರ್ಭವೇ ಇಲ್ಲ. ಆದರೂ ಹಲವು ಶತಮಾನಗಳ ಹಿಂದೆ ಅನುಭವಾಮೃತ ಗ್ರಂಥವನ್ನು ಬರೆದ ಕವಿ ಕನ್ನಡವನ್ನು ಸಾಕೆಂದ ದ್ದಲ್ಲದೆ ಸಂಸ್ಕೃತದಲ್ಲಿ ಇನ್ನೇನಿದೆ ಎಂದನು. ಇವನ ಕಾವ್ಯದಲ್ಲಿ ಹೇಳಿರುವ ವಿಷಯ ಮುಕ್ತಿಸಾಧನೆಯ ಮಾರ್ಗ. ತಿಳಿವನ್ನು ಎಲ್ಲರಿಗೂ ಎರಚುವುದೇ, ಬೇಡಿಬಂದವರಿಗೆ ಮಾತ್ರ ಕೊಡುವುದೇ, ಎಂಬುದು ಚರ್ಚಾರ್ಹವಾದ ವಿಷಯ. ಸಂತೆಯಲ್ಲಿ ತತ್ತ್ವವನ್ನು ಬೋಧಿಸುವುದು ಮೂರ್ಖತನ ಎಂಬ ಸಂಪ್ರದಾಯವಿರುವಲ್ಲಿ ಬೇಕಾದವರು ಓದಲಿ ಎಂದು ಈತನು ಕನ್ನಡದಲ್ಲಿ ಈ ಗ್ರಂಥವನ್ನು ಬರೆದಿಟ್ಟನು. ಇದನ್ನು ನೋಡಿದರೆ ನಮಗೆ ಈತನ ಔದಾರ್ಯ ಎಷ್ಟು ಹಿರಿಯದೆಂದು ವ್ಯಕ್ತ ವಾಗುವುದು. ಈ ಗ್ರಂಥವು ಜನದಲ್ಲಿ ಬಹಳ ವಾಡಿಕೆಗೆ ಬಂತು. ದತ್ತಪುತ್ರನಿಗೆ ಏತಕ್ಕೆ ಪಿತೃಭಕ್ತಿ ಎಂಬ ರೀತಿಯ ಮಾತುಗಳು ಈ ಗ್ರಂಥದಲ್ಲಿ ಹಲವು ಬರುತ್ತವೆ. ಇಂಥಾ ನಾಣ್ನುಡಿಗಳನ್ನು ಜನಕ್ಕೆ ಈ ಗ್ರಂಥವೇ ಕೊಟ್ಟಿರಬಹುದು. ಸ್ಮಾರ್ತಮತದಿಂದ ಜನರಲ್ಲಿ ಹರಡಿ ತೆನ್ನುವ ತಿಳಿವಿನ ಲಕ್ಷಣಗಳು ಈ ಗ್ರಂಥದ ಕೆಲವು ಅಧ್ಯಾಯಗಳನ್ನು ನೋಡುವುದರಿಂದ ನಮಗೆ ತಿಳಿದುಬರುವುವು.

ಮುಕ್ತಿಯೇ ಶಾಶ್ವತವಾದ ಸುಖ, ಅದನ್ನು ಪಡೆಯುಲು ಯತ್ನಿಸು ವುದೇ ಮಾನವನಿಗೆ ಯೋಗ್ಯ ಕರ್ತವ್ಯ, ಎನ್ನುವುದೇ ಈ ಗ್ರಂಥದ ಮೂಲ

ಸೂತ್ರ. ಮುಕ್ತಿ ಎಂದರೆ ಬ್ರಹ್ಮಜ್ಞಾನ. ಬ್ರಹ್ಮಜ್ಞಾನಕ್ಕೆ ಅಧಿಕಾರಿ ಯಾರು ಎಂದು ಹೇಳುವುದರಲ್ಲಿ ಕವಿಯು ಸಜ್ಜನನ ಲಕ್ಷಣಗಳನ್ನು ಹೇಳುತ್ತಾನೆ. ಇಂಥ ಮನುಷ್ಯನು ದಾನ ಧರ್ಮದಯಾನ್ವಿತನಾಗಿರಬೇಕು; ನಿರ್ಮಾನಮದಮತ್ಸರನಾಗಿರಬೇಕು; ಜ್ಞಾನಸಾಧನ ಶಮ ದಮಾದಿ ವಿಧಾನ ನಿರತನಾಗಿರಬೇಕು. ದಂಭದರ್ಪಗಳೇನೂ ಇಲ್ಲದ ಶಾಂತನಾಗಿರಬೇಕು. ಬಂದ ಸುಖದುಃಖಗಳು ತನ್ನನ್ನು ಮುಂದುಗೆಡಿಸಲು ನೋಯದುಬ್ಬದೆ ಬಂದುದೆಲ್ಲವೂ ಈಶ್ವರಾಜ್ಞೆ ಎನ್ನುತ್ತಾ ಧೈರ್ಯವನ್ನು ತಂದು ಮನದಲ್ಲಿ ದೃಢ ವಿರಕ್ತಿಯ ಹೊಂದಿ ಭೋಗ ಭ್ರಾಂತಿಯಳಿದರೆ ಅಂದು ಮನುಜನು ಮುಕ್ತನೆನಿಸುವನು. ಇಂಥವನು ತರುಣಿಯರು ತನ್ನಿದಿರೊಳೆಸೆದಿರೆ ಕುರುಡನಂತಿರುವನು. ಅನ್ಯರು ಪರರ ನಿಂದೆಯನೊರೆಯಲು ಬಧಿರನಂದದಿ ಕೇಳನದನೊಲಿದು; ಕರವಿಕಲನಂದದಲಿ ಹಿರಿದಾದರೂ ಪರಧನವನು ಹಿರಿಯನು. ದುಷ್ಟರು ತನ್ನನ್ನು ಜರಿಯೆ ಮರಳಿ ಜರಿಯ. ಎಡರಿನಲಿ ಎದೆಗುಂದದುಬ್ಬದೆ ಪೊಡವಿಗಧಿಪತಿಯಾಗೆ ಹಿಗ್ಗದೆ ಬಡತನದಿ ಕಂಗೆಡದೆ ವಿತ್ತವ ಗಳಿಸಿ ಗರ್ವಿಸದೆ ಮಡದಿ ಮನೆ ಮನೆವಾರ್ತೆ ಮಕ್ಕಳ ಗೊಡವಿಯಲಿ ಕಡುಮಮತೆ ಇಲ್ಲದೆ ದೃಢ ವಿರಕ್ತಿಯುಲಿರಲು ಮನುಷ್ಯನು ಮೋಕ್ಷ ಪಡೆಯುವನು. ಈ ದಾರಿಗೆ ಮನಸ್ಸನ್ನು ಕೊಡದೆ ಸಂಸಾರದಲ್ಲೀ ಮನಸ್ಸಿಟ್ಟವನು ಕೆಟ್ಟುಹೋಗುವನು. ಮಾಯೆ ಮೊದಲೇ ಮುಚ್ಚಿದೆ; ಅದರಮೇಲೆ ಸಂಸಾರಕ್ಕೆ ಹೋತರೆ, ಮರುಳು ಹಿಡಿದವನು ಮದ್ದುಗುಳಿಗೆಯನು ತಿಂದಂತಾಯಿತು. ಇಂಥ ಮನುಷ್ಯನಿಗೆ ಬರಬರುತ್ತಾ ಸಂಸಾರದ ತೊಡಕು ಹೆಚ್ಚುವುದೇ ಹೊರತು ಕಡಿಮೆಯಾಗಲಾರದು. ತೆರಳೆಯ ಹುಳು ನಡೆದಂತೆಲ್ಲಾ ಅದರ ಭಾರ ಹೆಚ್ಚುವಂತೆ ಇವನ ಸ್ಥಿತಿ. ಇಂಥವರಿಗೆ ಸಂಸಾರದಲ್ಲಿ ಸಿದ್ಧವಾದ ಜರೆ ಮರವು ಮರಣವೆಂಬ ದುಃಖ ತಪ್ಪಿದ್ದಲ್ಲ. ಒರಳಲ್ಲಿ ತಲೆಯಿಟ್ಟವನಿಗೆ ಒನಕೆಯ ಪೆಟ್ಟು ತಪ್ಪಿದ್ದೆ? ಭವಕ್ಕೆ ಸಿಕ್ಕಿದ ಮೇಲೆ ಅದರ ಕಷ್ಟ ಸಿದ್ಧ. ಕೊರಳಿಗೆ ಸುತ್ತಿದ ಹಾವು ಕಚ್ಚದೆ ಮರಳುವುದೆ? ಇಂಥವನು ಮೋಕ್ಷದ ಮಾತನ್ನು ಕೇಳಿದರೂ ಪ್ರಯೋಜನವಿಲ್ಲ. ಕಣ್ಣು ಕಾಣದವನಿಗೆ ಕನ್ನಡಿಯೇಕೆ? ನಪುಂಸಕನಿಗೆ ರಾಣಿಯೇಕೆ? ಇಷ್ಟಕ್ಕೆ

ಅವನು ಅದನ್ನು ಲಕ್ಷಿಸಲೂ ಆರನು. ಕತ್ತೆ ಕಸ್ತೂರಿಯನ್ನರಿವುದೇ? ದತ್ತಾಗಿ ಹೋದ ಮಗನಿಗೆ ಹೆತ್ತ ತಂದೆಯ ಮೇಲೆ ಭಕ್ತಿ ಹೇಗೆ ಬರಬೇಕು? ಅವನು ಬೇರೆಯ ಜನಕ್ಕೆ ಸೇರಿದನು. ಸಂಸಾರಕ್ಕೆ ಮಾರು ಹೋದವನಿಗೆ ಪರತತ್ತ್ವದ ಮಾತೇಕೆ? ಇಂಥವನು ವೇದಾಂತದ ಲಾಂಛನವನ್ನು ಧರಿಸಿದರೂ ವೇದಾಂತಿಯಾಗಿರಲಾರನು. ಎತ್ತಿಗೆ ಲಿಂಗಮುದ್ರೆ ಹಾಕಿದರೆ ಅದು ಬಸವನಾಗುವುದು; ಕತ್ತೆಗೆ ಲಿಂಗಮುದ್ರೆ ಹಾಕಿದರೆ ಕತ್ತೆಯಲ್ಲದೆ ಬಸವನಾಗಲಾರದು. ಅಧಿಕಾರವಿಲ್ಲದವನು ನನಗೇಕೆ ಎಂದು ಬಿಡುವುದಕ್ಕೂ ಇಲ್ಲ. ಅಧಿಕಾರವನ್ನು ಸಂಪಾದಿಸು ವುದಕ್ಕೆ, ಅದಕ್ಕೆ ಬೇಕಾದ ಜ್ಞಾನವನ್ನು ಸಂಪಾದಿಸುವುದಕ್ಕೆ, ಯತ್ನ ಮಾಡಬೇಕು. ಜ್ಞಾನವನ್ನು ಸಂಪಾದಿಸದವನ ಬದುಕು ವ್ಯರ್ಥ. ನಿಜವಾದ ಜ್ಞಾನವನ್ನು ಪಡೆಯುವುದು ಸುಲಭವಲ್ಲ. ಬರಿಯ ದಾರಿ ಯನ್ನರಿತ ಮಾತ್ರದಿಂದ ಅದು ಬರುವುದೂ ಇಲ್ಲ. ಮೀನು ನೀರಿನಲ್ಲಿದ್ದರೆ ಅದಕ್ಕೆ ಸ್ನಾನವಾಯಿತೆ? ಬಕ ಧ್ಯಾನದಲ್ಲಿದ್ದೇನು? ಮರ್ಕಟ ಕಾನನ ದಲ್ಲಿದ್ದೇನು? ಕೋಗಿಲೆ ಮೌನದಲ್ಲಿದ್ದೇನು? ಇವು ಏನನ್ನೂ ಸಾಧಿಸ ಲಾರವು. ಹೀಗೆಯೇ ಬರಿಯ ತಪದಿಂದ ಫಲವಿಲ್ಲ. ಹುತ್ತ ಬಡಿದರೆ ಹಾವು ಸಾವುದೆ? ಮೈಯನ್ನು ಒಣಗಿಸಿದರೆ ಆಸೆ ಬತ್ತುವುದೇ? ಮುಖ್ಯ ಮನುಷ್ಯನಿಗೆ ಮನಸ್ಸಿನಲ್ಲಿ ಸಂಸಾರ ಆಸಾರವೆಂಬ ಜ್ಞಾನ ಹುಟ್ಟ ಬೇಕು. ಆಗ ಅವನು ಬೇರೆಯಾದ ನಿತ್ಯಸುಖವನ್ನು ಅಪೇಕ್ಷಿಸುವನು. ಸಂಸಾರ ಆಸಾರವೆಂಬುದು ಸ್ವಲ್ಪ ಯೋಚಿಸಿದರೆ ತಿಳಿಯುತ್ತದೆ. ಮನುಷ್ಯನು ಹುಟ್ಟುತ್ತ ತಾನೊಬ್ಬ; ಸಾಯುವಾಗ ತಾನೊಬ್ಬ; ಮಧ್ಯೆ ಬಂಧುಗಳ ಸಂಸರ್ಗ. ದಾರಿ ನಡೆಯುವ ಮನುಜರು ಅರವಟ್ಟಿಗೆಯಲ್ಲಿ ಸೇರಿ ದಾಹವನ್ನು ಕಳೆದುಕೊಂಡು ಆಮೇಲೆ ತಮ್ಮ ತಮ್ಮ ದಾರಿ ಯಲ್ಲಿ ಹೋಗುವಂತೆ ಸಂಸಾರ. ಮರದ ಮೇಲೆ ನೂರಾರು ಹಕ್ಕಿಗಳು ಸೇರಿ ಗಜಿಬಿಜಿ ಮಾಡಿ ಸ್ವಲ್ಪ ಹೊತ್ತುಹೋದನಂತರ ತಮ್ಮ ತಮ್ಮ ಕಡೆಗೆ ಹಾರುವಂತೆ ಸಂಸಾರ. ಮನುಷ್ಯನಿಗೆ ಸ್ಥಿರವಾದ ನಂಟು ಒಂದೂ ಇಲ್ಲ. ಒಂದೊಂದು ವಯಸ್ಸಿನಲ್ಲಿ ಒಬ್ಬೊಬ್ಬರು ರಕ್ಷಕರು. ದೇಹ ನೀರಮೇಲಣ ಗುಳ್ಳೆಯಂತೆ. ಅದನ್ನು ಉಳಿಸಿಕೊಳ್ಳುವೆನೆಂಬ

ಪ್ರಯತ್ನ ನೀರ ಗುಳ್ಳೆಗೆ ಹಾಕುವ ಲೋಹದ ಕಟ್ಟು. ಮೃತ್ಯುವಿಗೆ ಸೇರಿದ ವೈಯನ್ನು ಮನುಷ್ಯನು ಮುದ್ದಿಸುವುದು ಜಾರೆಯಾದ ಹೆಂಡತಿಯ ಮಗುವನ್ನು ತನ್ನದೆಂದು ಭ್ರಮಿಸುವಂತೆ. ಹಿಂಸೆಗೆಂದು ಜನಿಸಿರುವ ನಾವು ಏನೋ ಸ್ವಲ್ಪ ಸುಖದ ಕಡೆ ನೋಡುತ್ತೇವೆ; ಹರಕೆಗೆ ತಂದ ಕುರಿ ತೋರಣದ ಚಿಗುರನ್ನು ತಿಂದಂತೆ. ಸರ್ಪದ ಬಾಯಲ್ಲಿರುವ ಕಪ್ಪೆ ಹತ್ತಿರ ಬಂದ ನೊಣವನ್ನು ಕಬಳಿಸುವುದಕ್ಕೆ ನೋಡುವಂತೆ, ಕೇಡಿಗೆ ಉದ್ದಿಷ್ಟರಾದ ನಾವು ಇತರರಿಗೆ ಕೇಡನ್ನು ಬಗೆಯುವೆವು. ಧನವಿರಲು ನಂಟರು, ಇಲ್ಲದಿದ್ದರೆ ಯಾರೂ ಇಲ್ಲ. ಇತರರಿಗೆ ಅನ್ಯಾಯ ಮಾಡಿ ತನ್ನವರನ್ನು ಸಾಕುವುದೂ ಬೇರೆ ಯವರನ್ನೆಲ್ಲಾ ಬಿಟ್ಟು ತನ್ನ ಹೆಂಡತಿ ಮಕ್ಕಳೆಂದು ಇವರನ್ನೇ ಸಾಕು ವುದೂ ಪಾಪಕ್ಕೆ ದಾರಿ. ಎಲ್ಲರೂ ಕಾಲವಶರು. ಎಲ್ಲವೂ ಕರ್ಮಾಧೀನ. ಜಗದ ಕೆಲಸವೆಲ್ಲ ನಿಯಮವನ್ನನುಸರಿಸಿ ನಡೆಯುತ್ತಿದೆ. ಇದನ್ನು ತಿಳಿದು ನಾವು ಇದೆಲ್ಲ ಈಶ್ವರಾಜ್ಞೆಯೆನ್ನಬೇಕು. ಇದು ತಿಳಿಯ ದಿದ್ದರೆ ಮನುಷ್ಯನು ಉದ್ಧತನಾಗುವನು. ಕೋಪ ಕೆಟ್ಟದು; ಕಾಮ ಕೆಟ್ಟದು; ನೋಡಿದರೆ ಸ್ತ್ರೀಸಂಗ ಅಸಹ್ಯಕರ. ಒಂದೊಂದೇ ಇಂದ್ರಿಯವು ಕೇಡಿಗೆ ಕಾರಣ. ಇಂಥದರಲ್ಲಿ ನಾವು ಅನೇಕ ಇಂದ್ರಿಯ ಗಳಿಗೆ ಮನಗೊಟ್ಟರೆ ಗತಿಯೇನು? ಆದ್ದರಿಂದ ಮನುಷ್ಯನು ಮುಕ್ತಿ ಯೆಂಬ ನಿತ್ಯಸುಖದ ದಾರಿಯನ್ನು ನೋಡಬೇಕು. ಅದಿಲ್ಲದಿದ್ದರೆ ಇಲ್ಲಿಯ ಕ್ಷಣಿಕ ಸುಖ ಸ್ವರ್ಗದ ಕಲ್ಪದ ಸುಖ ಇದನ್ನು ಕಷ್ಟದೊಂದಿಗೆ ಬೆರಸಿ ಅನುಭವಿಸುತ್ತಾ ಸಂಸಾರ ಚಕ್ರದಲ್ಲಿ ಸುಮ್ಮನೆ ಸುತ್ತುವುದಾಗುತ್ತದೆ.

ತಿಳಿವು; ತಿಳಿವಿನ ಅಭ್ಯಾಸ

ಅನುಭವಾಮೃತ ಕಾವ್ಯದ ಒಂದೆರಡು ಅಧ್ಯಾಯಗಳ ಈ ಸಾರಾಂಶ ಶ್ರವಣದಿಂದ ಈ ಗ್ರಂಥ ಎಷ್ಟು ಗಹನವಾದ ವಿಷಯ ಎಷ್ಟು ಲಲಿತವಾಗಿ ಸರ್ವರಿಗೂ ಸಿಕ್ಕುವಂತೆ ಹೇಳಿತು ಎಂದು ತೋರು ತ್ತದೆ. ಇದಿಷ್ಟು ವಿಷಯವೂ ಜನರಿಗೆಲ್ಲ ಸರಿಯಾಗಿಯೇ ತಿಳಿದಿತ್ತೆಂದಾಗಲಿ ಅಥವಾ ತಿಳಿದಿದ್ದರೂ ಎಲ್ಲರ ಜೀವನದಲ್ಲೂ ಅದು ಅನುಷ್ಠಾನಕ್ಕೆ

ಬಂದಿತೆಂದಾಗಲಿ ಯಾರೂ ಹೇಳುವಂತಿಲ್ಲ. ಮುಖ್ಯವಾಗಿ ತಿಳಿವು ಎನ್ನುವುದನ್ನು ಜೀವನದಲ್ಲಿ ಸಾಧನೆಗೆ ತರುವುದು ವ್ಯಕ್ತಿಗಳಿಗೇ ಕಷ್ಟ ಸಾಧ್ಯ. ಇನ್ನು ಜನಾಂಗದ ಮಾತೇನು? ಮನುಷ್ಯನಿಗೆ ಬಹು ಜನ್ಮಗಳ ಸಂಸ್ಕಾರದಿಂದ ಜ್ಞಾನ ಲಭಿಸುವುದೆಂದು ಗೀತೆಯಿಂದ ತಿಳಿಯುತ್ತದೆ. ಇನ್ನು ಒಂದು ಜನ್ಮದಲ್ಲೇ ಒಳ್ಳೆಯದು ಸಿದ್ಧಿಗೆ ಬರುವುದೆಂದು ಯಾರು ಹೇಳಿಯಾರು? ಅಲ್ಲದೆ ಚಿನ್ನಕ್ಕೆ ಕಾಗೆಯು ಬಂಗಾರದಂತೆ ಒಳ್ಳೆಯದಾದ ಎಲ್ಲ ವಸ್ತುವಿಗೂ ಒಂದು ಆಭಾಸರೂಪವುಂಟು. ವೇದಾಂತಿಯ ಸಹನೆ ಯನ್ನು ಅನುಕರಿಸಹೋಗಿ ಸಾಮಾನ್ಯನು ಹೇಡಿಯಾಗಬಹುದು. ಎಲ್ಲರೂ ಸಮನೆಂದು ಕಾಣಬೇಕೆಂದು ಕಲಿತ ಮನುಷ್ಯನು, ಯಾವ ಜೀವವೂ ಸಣ್ಣದಲ್ಲವೆಂದು ನಿಕೃಷ್ಟ ಜೀವಕ್ಕೂ ಒಂದು ಕನಿಕರವನ್ನು ತೋರುವುದಕ್ಕೆ ಪ್ರತಿ ತನ್ನ ಗುರುವನ್ನೂ ರಾಜನನ್ನೂ ತನಗಿಂತ ಹಿರಿಯ ರಲ್ಲವೆಂದು ಭಾವಿಸುವುದರಲ್ಲಿ ಮುಗಿಯಬಹುದು. ನಮ್ಮ ಸೀಮೆಯಲ್ಲಿ ವೇದಾಂತದಿಂದ ಇಂಥ ವಿಕಾರ ಫಲಗಳು ಉಂಟಾಗಲಿಲ್ಲವೆಂದು ನಾವು ಹೇಳುವುದಿಲ್ಲ. ಆದರೆ ಅದು ವೇದಾಂತದ ದೋಷವೂ ಅಲ್ಲ; ಅದನ್ನು ಸಾಮಾನ್ಯರಿಗೆ ಸುಲಭವಾಗಿ ಮಾಡಿದವರ ದೋಷವೂ ಅಲ್ಲ. ವೇದಾಂತದ ಸಾರವನ್ನು ಜನರ ಮುಂದಿಟ್ಟ ಜನರೇ ಅಧಿಕಾರವನ್ನು ಸಂಪಾದಿಸು ಎಂದೂ ಗುರುವಿನ ಮೂಲಕ ಜ್ಞಾನವನ್ನು ಸಂಪಾದಿಸು ಎಂದೂ ಹೇಳಿ ದರು. ಗುರುವಿನಿಂದ ಕಲಿ ಎನ್ನುವುದರಲ್ಲಿ ಉದ್ದೇಶ ಅನುಷ್ಠಾನದ ದಾರಿ ಸರಿಯಾಗಿ ತಿಳಿಯಲಿ ಎನ್ನುವುದೇ. ಇಲ್ಲದಿದ್ದರೆ ವೇದಾಂತದ ಆಭಾಸಾಭ್ಯಾಸದಿಂದ ಬರುವ ದುಷ್ಪರಿಣಾಮವನ್ನು ಭಾವಿಸಬಹುದು. ನಿಜವಾದ ವೈರಾಗ್ಯಕ್ಕೆ ಬದುಕನ್ನು ಬಿಡುವುದು ಅವಶ್ಯಕವಲ್ಲ. ಆಸೆಯನ್ನು ಬಿಟ್ಟವನು ಏನನ್ನಾದರೂ ಕಟ್ಟಿಕೊಳ್ಳಬಹುದು; ಅವನು ಮುಕ್ತನು. ಆಸೆಯನ್ನಿಟ್ಟುಕೊಂಡವನು ಏನನ್ನು ಬಿಟ್ಟರೂ ಮುಕ್ತನಲ್ಲ. ವೈರಾಗ್ಯ ಬೋಧೆಯ ಉದ್ದೇಶವು, ಕ್ಷಣಿಕವಾದ ಅಲ್ಪವಾದ ಸುಖವನ್ನು ಅಪೇಕ್ಷಿಸ ಬೇಡ, ನಿತ್ಯಸುಖವನ್ನು ಅಪೇಕ್ಷಿಸು, ಅದಕ್ಕಾಗಿ ವ್ಯವಸಾಯಮಾಡು ಎಂದಿತ್ತು. ಆದರೆ ಜನರಲ್ಲಿ ಈ ಎರಡನೇ ಮೆಟ್ಟಲು ಅಷ್ಟು ವಾಡಿಕೆಗೆ ಬರಲಿಲ್ಲ. ಬದುಕಿನಲ್ಲೇನಿದೆ ಎಂದು ಎಂಥವನೂ ಹೇಳಬಹುದು; ಅದು

ಮೋಕ್ಷಕ್ಕೆ ಸಾಧನವಾಗುತ್ತದೆ ಎಂದು ಹೇಳುವುದು ತಿಳಿದವರಿಗೆ ಮಾತ್ರ ಸಾಧ್ಯ.

ಸ್ಮಾರ್ತಮತದ ವೈರಾಗ್ಯ ಬೋಧೆ ಆಭಾಸದಿಂದ ಜನದಲ್ಲಿ ತಾಮಸ ವೈರಾಗ್ಯವಾದಂತೆ ಅದರ ಕರ್ಮವಿಧಿ ನಮ್ಮ ಜನರಲ್ಲಿ ಒಂದು ತಾಮಸ ರೀತಿಯಲ್ಲಿ ಪ್ರಚುರಕ್ಕೆ ಬಂದಿತು. ಕರ್ಮವೆನ್ನುವುದು ಜನರಲ್ಲಿ ಸ್ಥಿರವಾದ ಎಲ್ಲ ಮತಗಳಲ್ಲಿಯೂ ಒಂದು ಕಟ್ಟುಪಾಡಿಗೆ ಬರಲೇ ಬರುತ್ತದೆ. ಸನಾತನ ಧರ್ಮದಲ್ಲಿ ಆರಂಭದಲ್ಲಿ ಸಾಮಾನ್ಯವಾಗಿದ್ದ ಯಜ್ಞಗಳು ಬರಬರುತ್ತ ಬಹಳ ಹೆಚ್ಚಿಕೊಂಡು ಬೌದ್ಧ ಧರ್ಮದಲ್ಲಿ ಯಜ್ಞಗಳು ತಿರಸ್ಕಾರಕ್ಕೆ ಗುರಿಯಾದವು. ಬೌದ್ಧಮತದಿಂದ ವಿನಿವೃತ್ತವಾಗುವುದರಲ್ಲಿ ಸ್ಮಾರ್ತಮತವು ಪ್ರಾಯಶಃ ಕರ್ಮಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಬೇಕಾಗಿ ಬಂದಿತು. ನಾನು ಈ ಮೊದಲು ಉದಾಹರಿಸಿರುವ ಜವರೇಗೌಡನು ಆ ಮಾತು ಈ ಮಾತು ಆಡುತ್ತಾ, "ನಾವೇನು ಬ್ರಾಹ್ಮಣರೇ ಸ್ವಾಮಿ, ಇತ್ತಲಾಗಿ ಪಾಪಮಾಡಿ, ಇತ್ತಲಾಗಿ, ಸಂಧ್ಯಾವಂದನೆಮಾಡಿ ಅದನ್ನು ಕಳೆದುಕೊಳ್ಳುವುದಕ್ಕೆ," ಎಂದನು. ಇದೀಗ ಕರ್ಮಕಾಂಡದ ವಿಪರೀತಾವಸ್ಥೆ. ತಪ್ಪು ಮಾಡಿದವನಿಗೆ ಬೇಡಿದಲ್ಲಿ ಭಗವಂತನಲ್ಲಿ ಕ್ಷಮೆಯುಂಟು. ಆದರೆ ಬೇಡುವ ಎಂದೇ ಮನಸ್ಸು ಮಾಡಿಕೊಂಡು ತಪ್ಪುಮಾಡಿದರೆ? ಮನುಷ್ಯನು ಪತಿತನಾಗುವನು. ಆದರೆ ಜನರಲ್ಲಿ ಈ ಭಾವನೆ ಹುಟ್ಟಿರುವುದು ನಿಜ. ಹೀಗೆಂದಮಾತ್ರಕ್ಕೆ ಇಂಥ ಕುತರ್ಕ ನಮ್ಮ ಸೀಮೆಗೆ ವಿಲಕ್ಷಣವಾದದ್ದೆಂದು ತಿಳಿಯಬಾರದು. ರಷ್ಯಾ ರಾಜ್ಯದಲ್ಲಿ ರ್‍ಯಾಸ್‌ಪುಟಿನ್ ಎಂಬಾತನು ಮುಕ್ತಿಗೆ ಪಶ್ಚಾತ್ತಾಪ ಆವಶ್ಯಕವೆಂಬ ಕ್ರೈಸ್ತನ ಉಪದೇಶವನ್ನು ಇದೇ ರೀತಿಯಲ್ಲಿ ವಿಪರೀತ ರೂಪಕ್ಕೆ ಇಳಿಸಿದನಂತೆ. ಪಶ್ಚಾತ್ತಾಪಪಡಬೇಕಾದರೆ ತಪ್ಪು ಮಾಡಿರಬೇಕಲ್ಲವೇ? ಆದ್ದರಿಂದ ರ್‍ಯಾಸ್‌ಪುಟಿನ್, "ತಪ್ಪುಮಾಡದೆ ಇದ್ದರೆ ಪಶ್ಚಾತ್ತಾಪ ಸಾಧ್ಯವಿಲ್ಲ; ಪಶ್ಚಾತ್ತಾಪವಿಲ್ಲದೆ ಮುಕ್ತಿಯಿಲ್ಲ; ಆದ್ದರಿಂದ ತಪ್ಪು ಮಾಡದೇ ಇದ್ದವನಿಗೆ ಮುಕ್ತಿಯಿಲ್ಲ. ಆದ್ದರಿಂದ ಜನರೆಲ್ಲ ತಪ್ಪುಮಾಡಿ ಬದುಕಿ," ಎಂದನಂತೆ. ರ್‍ಯಾಸ್‌ಪುಟಿನ್ ಹೀಗೆ ಹೇಳದೆ ಇದ್ದರೂ ಅನೇಕ ಜನರು ಹೀಗೆ ತಿಳಿದುಕೊಂಡದ್ದೇನೋ ಉಂಟು. ಇಂಥಾ ಆಭಾಸ

ಎಲ್ಲಾ ತತ್ತ್ವಪ್ರಚಾರದ ಉದ್ಯಮಗಳಿಗೂ ಸಹಜವಾದ ಒಂದು ಪರಿಣಾಮ.

ಕರ್ಮವು ಜೀವನದಲ್ಲಿ ಈ ಸ್ಥಿತಿಗೆ ಬಂದಾಗ್ಗೆ ಅದರ ಸುಧಾರಣೆ ಒಡನೆಯೇ ಬರುತ್ತದೆ. ಕರ್ಮದಲ್ಲಿ ಬಾಹ್ಯ ವ್ಯಾಪಾರ ಮುಖ್ಯವಲ್ಲ; ಅದನ್ನು ಯಾವ ಭಾವನೆಯಿಂದ ಮಾಡುವೆವೆನ್ನುವುದು ಮುಖ್ಯ. ಎಂದರೆ ಶೀಲ ವಿನಯ ಭಕ್ತಿಗಳು ಮುಖ್ಯ. ಶೀಲವೇ ವಿನಯವೇ ಭಕ್ತಿಯೇ ಮುಖ್ಯ ವೆಂಬ ಭಾವನೆ ಯಾವ ಒಂದು ಮತದ ಆಸ್ತಿಯಲ್ಲ. ಅದು ಎಲ್ಲ ಮತ ದಲ್ಲಿಯೂ ಅಡಗಿದೆ. ಆದರೆ ಕಾಲದಿಂದ ಕಾಲಕ್ಕೆ ಅದು ಮರೆತು ಹೋಗಿ ಮತ್ತೆ ಉದ್ಬೋಧನೆ ಅವಶ್ಯವಾಗುತ್ತದೆ. ಸಂಧ್ಯಾವಂದನೆಯೆಂದರೆ ಕುಳಿತು ಬೆರಳೆಣಿಸುವುದೂ ತುಟಿಯನ್ನು ಪಿಟಪಿಟ ಅಲುಗಿಸುವುದೂ ಹೊರಕ್ಕೆ ಕಾಣುತ್ತವೆ. ಅನೇಕರು ಸಂಧ್ಯಾವಂದನೆ ಮಾಡುವಾಗ ಮಾಡುವ ಕರ್ಮ ಅಷ್ಟೇ: ಅದರ ಅರ್ಥ ಅವರಿಗೆ ತಿಳಿದಿರುವುದಿಲ್ಲ. ತಿಳಿದಿದ್ದರೂ ಅವರು ಅದನ್ನು ಆಗ ನೆನೆಯುವುದಿಲ್ಲ. ಕರ್ಮ ಈ ರೀತಿಯಲ್ಲಿ ಶುಷ್ಕ ವಾದಾಗಲೇ ದೇಶದಲ್ಲೆಲ್ಲ ಭಕ್ತಿ ಪಂಥಗಳ ಗುಂಪುಗಳು ಎದ್ದು ನಿಂತವು.

ವೀರಶೈವ ಮತ

ಇಂಥ ಮತಗಳಲ್ಲಿ ವೀರಶೈವ ಮತ ಒಂದು ಮುಖ್ಯವಾದ ಮತ. ದ್ರಾವಿಡ ದೇಶದಲ್ಲಿ ಶೈವ ಸಂಪ್ರದಾಯ ಅನೇಕ ಶತಮಾನಗಳಿಂದ ಇದ್ದಿದೆ. ಕರ್ಣಾಟಕದ ಈ ಸಂಪ್ರದಾಯ ಆ ಸಂಪ್ರದಾಯದ ಜೊತೆಯ ಸಂಪ್ರದಾಯವೋ ಅಥವಾ ಅಲ್ಲಿಂದ ಇಲ್ಲಿಗೆ ಬಂದದ್ದೋ ಎಂಬುದನ್ನು ಸಂಪ್ರದಾಯಗಳ ಚರಿತ್ರಕಾರರು ಹೇಳಬೇಕು. ಅಂತೂ ವೀರಶೈವ ಮತಕ್ಕೆ ಕರ್ಣಾಟಕದ ಮಹನೀಯನೊಬ್ಬನು ಪ್ರತಿಷ್ಠಾಪಕನಾದನು. ಈ ಮಹನೀಯನ ಚರಿತ್ರೆ ತಿಳಿದಿರುವುದು ಸ್ವಲ್ಪ ಮಾತ್ರ. ಆ ಸ್ವಲ್ಪ ಎಲ್ಲರಿಗೂ ತಿಳಿದೇ ಇದೆ. ಈತನು ಬ್ರಾಹ್ಮಣ ಕುಲದಲ್ಲಿ ಜನಿಸಿ ಕುಲ ವೆಂದೂ ಕರ್ಮವೆಂದೂ ಹೆಮ್ಮೆಪಡುತ್ತಿದ್ದ ತನ್ನ ಸುತ್ತಣ ಸಮುದಾಯ ವನ್ನು ನೋಡಿ ಬೇಸರಗೊಂಡು ಬ್ರಾಹ್ಮಣ ಸಮುದಾಯವನ್ನು ಬಿಟ್ಟು ವೀರಶೈವಾಚಾರವನ್ನು ಅನುಸರಿಸಿದನೆನ್ನುವುದು ಅದರ ಮುಖ್ಯಾಂಶ.

ಇವನು ಹೀಗೆ ಮಾಡುವ ಮೊದಲೇ ದೇಶದಲ್ಲಿ ಕರ್ಮವೆನ್ನುವುದರ ವಿಷಯದಲ್ಲೂ ಕುಲವೆನ್ನುವುದರ ವಿಚಾರದಲ್ಲೂ ಬಹಳ ಬೇಸರ ಹುಟ್ಟಿರಬೇಕು. ಬಸವಣ್ಣನವರು ಪ್ರಾಪ್ತವಯಸ್ಕರಾಗಿ ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿ ಪದವಿಗೆ ಬಂದರು. ವೀರಶೈವ ಮತದ ತತ್ತ್ವವನ್ನು ಜನಗಳಲ್ಲಿ ಹರಡಿದರು; ಅದಕ್ಕೆ ಒಂದು ಹಿರಿಯ ಸ್ಥಾನವನ್ನು ಸಂಪಾದಿಸಿದರು; ಅದರ ತತ್ತ್ವಗಳನ್ನು ಪ್ರಚಾರಗೊಳಿಸುವುದಕ್ಕೆ ಜಂಗಮರ ಸಂಸ್ಥೆಯನ್ನು ಉಪಯೋಗಿಸಿದರು. ಕಡೆಗೆ ವೀರಶೈವ ಮತವು ರಾಜ್ಯಗಳನ್ನು ಎಬ್ಬಿಸಿ ರಾಜ್ಯಗಳನ್ನು ಉರುಳಿಸುವ ಪ್ರಬಲ ಶಕ್ತಿಯಿಂದ ತುಂಬಿತು. ಆಗಿನ ಕಾಲದಲ್ಲಿ ಇಂಥ ಪಂಥಗಳು ಯಾವ ರೀತಿಯಲ್ಲಿ ಹಬ್ಬುತ್ತಿದ್ದುವೆಂಬುದು ನಮಗೆ ಈಗ ಊಹೆಗೂ ಕೂಡ ಸಿಕ್ಕದಂತೆ ಆಗಿದೆ. ಉತ್ತರ ಕರ್ಣಾಟಕದಲ್ಲೆಲ್ಲ ವೀರಶೈವ ಮತವು ಒಂದೇ ಸಮನೆ ಹರಡಿತು. ಎಲ್ಲೆಲ್ಲೂ ಮಠಗಳು; ಎಲ್ಲೆಲ್ಲೂ ಜಂಗಮರು; ವೀರಶೈವ ಮತದ ತತ್ತ್ವಗಳನ್ನು ಇವರು ಪದ್ಯಗಳಾಗಿ, ವಚನಗಳಾಗಿ, ಗೀತೆಗಳಾಗಿ ಜನರಲ್ಲೆಲ್ಲಾ ಪ್ರಚಾರಕ್ಕೆ ತಂದರು. ಹೀಗೆ ವೀರಶೈವ ಮತವು ಬ್ರಾಹ್ಮಣ ಮತಕ್ಕೂ ಕ್ರೈಸ್ತಮತಕ್ಕೂ ಎಲ್ಲ ಒಳ್ಳೆಯದೆಂಬ ಮತಕ್ಕೂ ಆಧಾರವಾದ ಮೂಲ ತತ್ತ್ವಗಳನ್ನೇ ಕರ್ಣಾಟಕದಲ್ಲಿ ಸರ್ವ ಸುಲಭವಾಗಿ ಮಾಡಿತು. ಕರ್ಣಾಟಕದಲ್ಲಿ ಈಗ ಈ ಮತದ ಅನುಯಾಯಿಗಳು ಸುಮಾರು ನಲವತ್ತು ಲಕ್ಷದಷ್ಟು ಇದಾರೆ. ಇವರ ಭಾವನೆಯೆಲ್ಲ ವೀರಶೈವ ಮತದ್ದು, ವೀರಶೈವ ವಚನಗಳದು. ಈ ಕಾರಣದಿಂದ ಈ ವಚನಗಳ ಸ್ವರೂಪವನ್ನು ಸ್ವಲ್ಪ ಮಟ್ಟಿಗೆ ವರ್ಣಿಸುವುದು ಆವಶ್ಯಕ. ವಚನಸಾಹಿತ್ಯದಲ್ಲಿ ವೀರಶೈವ ಮತದ ಉತ್ತಮವಾದ ಲಕ್ಷಣಗಳು ತೋರಿಬರುವುದಲ್ಲದೆ ಅದು ಹೇಗೆ ಜನ ಸಾಮಾನ್ಯದ ಸಂಸ್ಕೃತಿಯ ಸಾಧಕ ಕಾರಣವೂ ಫಲವೂ ಆಯಿತೆನ್ನುವುದು ವ್ಯಕ್ತವಾಗುವುದು.

ಬಸವಣ್ಣನವರ ವಚನಗಳು

ನಮ್ಮ ತತ್ತ್ವಸೋಪಾನದಲ್ಲೆಲ್ಲ ಮೊದಲನೆಯ ಮೆಟ್ಟಲು ಸಂಸಾರವು ಸುಖವಲ್ಲವೆಂಬ ಮಾತು. ಮನುಷ್ಯನು ಅಪೇಕ್ಷಿಸುವುದು ಸುಖ-

ಕಾಲ ದೇಶ ಅವಸ್ಥೆಗಳು ಭಿನ್ನವಾದಂತೆ ಭಿನ್ನವಾಗುವ ಸುಖ ಸುಖವಲ್ಲ. ಮನುಷ್ಯನು ಬೇರೆಯಾದಂತೆ ಬೇರೆಯಾಗುವ ಸುಖ ಸುಖವಲ್ಲ. ನಿಜವಾದ ಸುಖ ಕಾಲ ದೇಶ ವರ್ತಮಾನಗಳನ್ನು ಮೀರಿದ್ದು. ಅಪೇಕ್ಷೆ ಪಟ್ಟು ಅದನ್ನು ತೃಪ್ತಿಗೊಳಿಸುವುದರಿಂದ ಬರುವ ಸುಖ ಸುಖವಲ್ಲ. ಅಪೇಕ್ಷೆಯನ್ನು ಕಾಣದ ಮರ ಕಲ್ಲು ಮೊದಲಾದ ಜಡವಸ್ತುಗಳ ಇರವು ಸುಖವಲ್ಲ. ಅಪೇಕ್ಷೆಯನ್ನರಿತು ಅದರ ಕೋಟಲೆಗೆ ಒಳಗಾಗ ದಿರುವ ಸುಖ ಸುಖ. ಈ ಸುಖ ಹಿರಿಯದೆಂದು ತಿಳಿಯಬೇಕಾದರೆ ಇದಲ್ಲದ ಇನ್ನೆಲ್ಲ ತರದ ಸುಖವೆಂಬ ಅವಸ್ಥೆಯೂ ಇದಕ್ಕೆ ಕೀಳಾದ ದ್ದೆಂದು ತಿಳಿಯಬೇಕು. ಇದನ್ನು ತಿಳಿಸುವುದಕ್ಕೆ ನಮ್ಮವರು ಸಂಸಾರವು ಅಸಾರವೆಂದು ಒತ್ತಿಒತ್ತಿ ಹೇಳುತ್ತಿದ್ದರು. ಬಸವಣ್ಣನವರ ವಚನ ಗಳಲ್ಲಿ ಈ ವಿಚಾರ ಬಹಳ ಮುಖ್ಯವಾಗಿ ಹೇಳಲ್ಪಟ್ಟಿದೆ. "ಕಪ್ಪೆ ಸರ್ಪನ ನೆರಳಿನಲ್ಲಿ ಇರ್ಪಂತೆ ಸಂಸಾರ", "ಅಕಟಕಟಾ ಸಂಸಾರ ವೃಥಾ ಹೋಯಿತು! ಕರ್ತೃಕೂಡಲ ಸಂಗಮದೇವ ಇವನು ತಪ್ಪಿಸಿ ಎನ್ನನು ರಕ್ಷಿಸಯ್ಯಾ ಪ್ರಭುವೇ." "ಶೂಲದ ಮೇಲಣ ಭೋಗ ಸಂಸಾರವೇನಾದೊಡೇನೋ; ನಾನಾವರ್ಣದ ಸಂಸಾರ ಹಾವ ಹಾವಾಡಿ ಗನ ಸ್ನೇಹದಂತೆ." "ಸಂಸಾರವೆಂಬ ಬಲೆಯಲ್ಲಿ ಸಿಲುಕಿದೆನಯ್ಯಾ" "ಸಂಸಾರವೆಂಬ ಸರ್ಪ ಮುಟ್ಟಲು ಪಂಚೇಂದ್ರಿಯದ ವಿಷಯವೆಂಬ ವಿಷದಿಂದ ಮನುಷ್ಯನು ಮುಂದುಗೆಟ್ಟ." "ಎಂದೋ ಸಂಸಾರ ದಂದುಗ ಹಿಂಗುವುದು. ಎಂದೋ ಮನದಲ್ಲಿ ಪರಿಣಾಮವಹುದೆನಗೆ. ಎಂದೋ ಎಂದೋ ಕೂಡಲ ಸಂಗಮದೇವಾ, ಇನ್ನೆಂದೋ ಪರಮ ಸಂತೋಷದಲ್ಲಿಹುದೆನಗೆಂದೋ." ಆದರೆ ಭಗವಂತನ ಕೃಪೆ ಬರುವ ತನಕ ಇದರಿಂದ ಬಿಡುಗಡೆಯ ದಾರಿಯಿಲ್ಲ. "ಲೇಸಕಂಡು ಮನದಲ್ಲಿ ಬಯಸಿ ಆಸೆಮಾಡಿದಡಿಲ್ಲ ಕಂಡಯ್ಯಾ. ತಾಳಮರಕ್ಕೆ ಕಯ್ಯನೀಡಿ ಮೇಲೆ ನೋಡಿ ಗೋಣು ನೊಂದುದಯ್ಯಾ. ಸೀನೀವ ಕಾಲಕ್ಕಲ್ಲದೆ ಇಲ್ಲ ಕಂಡಯ್ಯಾ." ಮನಸ್ಸು ಸಿಕ್ಕಿದಂತೆ ಆಡುವುದು: "ಕೊಂಬೆಯ ಮೇಲಣ ಮರ್ಕಟನಂತೆ ಲಂಘಿಸುವುದು ಎನ್ನ ಮನ. ನಿಂದಲ್ಲಿ ನಿಲ್ಲ ಲೀಯದೆನ್ನ ಮನ ಹೊಂದಿದಲ್ಲಿ ಹೊಂದಲೀಯದು. . . ." "ಮರನ

ನೇರಿದ ಮರ್ಕಟದಂತೆ ಹಲವು ಕೊಂಬಿಂಗೆ ಹಾರುತಲಿದ್ದೇನೆ. ಬೆಂದ ಮನವನು ನಾನೆಂತು ನಂಬುವೆನಯ್ಯ.” ಸಾಲದ್ದಕ್ಕೆ ಆಸೆಗಳಿಗೆ ಮೊದಲು ಕೊನೆಯಿಲ್ಲ. ಅವನ್ನು ತಡೆಯುವ ಯೋಗ್ಯತೆ ನಮಗಿಲ್ಲ. “ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರಿಸದಿರಯ್ಯ ; ಪಶುವೇನ ಬಲ್ಲದು ಹಸುರೆಂದೆಳಸುವುದಲ್ಲದೆ? ವಿಷಯ ರಹಿತನ ಮಾಡಿ ಭಕ್ತಿರಸವ ದಣಿಯ ಮೇಯಿಸಿ ಸುಬುದ್ಧಿ ಎಂಬ ಉದಕವನೆರೆದು ನೋಡಿ ಸಲಹು.” ಇದಕ್ಕೇನು ಗತಿ? ಆಸೆಯೇ ಇಲ್ಲದಂತೆ ಆಗುವುದೇ ಗತಿ. “ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯ ತಂದೆ. ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯ ತಂದೆ. ಮತ್ತೊಂದು ಕೇಳದಂತೆ ಕಿವುಡನ ಮಾಡಯ್ಯ ತಂದೆ. ನಿಮ್ಮ ಶರಣರ ಪಾದವಲ್ಲದೆ ಇತರ ವಿಷಯಕ್ಕೆಳಸದಂತೆ ಇರಿಸು.” ಹಾಗಾದರೆ ಈ ಪಾಪ, ಈ ಸಂಸಾರ ಬಂಧನ, ಹೋಗುವುದು ಹೇಗೆ? “ಕರಿಯಂಜುವುದು ಅಂಕುಶಕಯ್ಯ, ಗಿರಿಯಂಜುವುದು ಕುಲಿಶಕಯ್ಯ, ತಮಂಥವಂಜುವುದು ಜ್ಯೋತಿಗಯ್ಯಾ, ಕಾನನವಂಜುವುದು ಬೇಗೆಗಯ್ಯಾ, ಪಂಚಮಹಾಪಾತಕಗಳಂಜುವುದು ಕೂಡಲ ಸಂಗಮದೇವರ ನಾಮಕ್ಕಯ್ಯಾ.” “ಓಂ ನಮಃ ಶಿವಾಯವೆಂಬುದೇ ಮಂತ್ರ. ಓಂ ನಮಃ ಶಿವಾಯವೆಂಬುದೇ ತಂತ್ರ. ನಮ್ಮ ಕೂಡಲ ಸಂಗಮದೇವರ ನೆನೆವುದೇ ಮಂತ್ರ.” “ಎನ್ನ ಭವಬಂಧನ ದುರಿತಂಗಳ ಗೆಲವೊಡೆ ಓಂ ನಮಃ ಶಿವಾಯ ಶಿವಶರಣೆಂದರೆ ಸಾಲದೆ.” “ಪಾತಕ ಶತಕೋಟಿಗಳನೊರಸಲು ಸಾಲದೆ ಒಂದೆ ಶಿವನಾಮ ಸಾಲದೆ ಒಂದೆ ಹರನ ನಾಮ.” ಹಾಗಾದರೆ ಸುಮ್ಮನೆ ಶಿವ ಶಿವ ಎಂದರೆ ಸಾಕೊ? “ಒಳಗೆ ಕುಟಿಲ ಹೊರಗೆ ವಿನಯವಾಗಿ ಭಕ್ತರೆನೆಸಿಕೊಂಬುವರ ಒಲ್ಲನೊಲ್ಲನಯ್ಯಾ ಲಿಂಗವು. ಅವರು ಶಿವಪಥಕ್ಕೆ ಸಲ್ಲರು ಸಲ್ಲರಯ್ಯ. ಒಳಹೊರಗೊಂದಾಗದವರಿಗೆ ಅಳಿಯಾಸೆದೋರಿ ಬೀಸಾಡುವನವರ ಜಗದೀಶ.” ಮನೆಯೊಳಗೆ ಮನೆಯಾತನಿರಲು ಕಸ ಇರುವುದಿಲ್ಲ; ಅಂಗಳದಲ್ಲಿ ಹುಲ್ಲು ಬೆಳೆದಿರುವುದಿಲ್ಲ. ಅದರಂತೆ ಹೃದಯದಲ್ಲಿ ಶಿವನಿದ್ದರೆ ಮನಸ್ಸು ನಿರ್ಮಲವಾಗಿರುವುದು, ಬದುಕು ಚೆನ್ನಾಗಿರುವುದು. ಅವನು ಒಳಗೆ ಇಲ್ಲದಿದ್ದರೆ ಬಯಲ ಡಂಭವಾಯಿತೇ ಹೊರತು ಅದರಿಂದ

ಯಾರಿಗೂ ಪ್ರಯೋಜನವಿಲ್ಲ ; ಬದುಕು ಕೊಳಕಾಗಿಯೇ ಇರುತ್ತದೆ. "ಕುಂಬಳದ ಕಾಯಿಗೆ ಕಬ್ಬುನದ ಕಟ್ಟುಕೊಟ್ಟರೆ ಕೊಳೆವುದಲ್ಲದೆ ಬಲುಹಾಗಬಲ್ಲದೆ. ಅಳಿಮನದಂಗೆ ಶಿವದೀಕ್ಷೆ ಕೊಟ್ಟರೆ ಭಕ್ತಿ ಎಂತಹುದೋ ? ಮುನ್ನಿನಂತೆ." "ಸಗಣಿಯ ಬೆನಕಂಗೆ ಸಂಪಿಗೆಯರಳಲ್ಲಿ ಪೂಜಿಸಿದರೆ ರಂಜನೆಯಹುದಲ್ಲದೆ ಅದರ ಗಂಜಳ ಬಿಡದಣ್ಣ. ಮಣ್ಣು ಪುತ್ಥಳಿಯ ಮಾಣದೆ ಜಲದಲ್ಲಿ ತೊಳೆದರೆ ನಿಚ್ಚನಿಚ್ಚ ಕೆಸರಹುದಲ್ಲದೆ ಅದರಚ್ಚುಗ ಬಿಡದಣ್ಣ. ಲೋಕದ ಮಾನವರಿಗೆ ಶಿವದೀಕ್ಷೆಯ ಕೊಟ್ಟರೆ ಕೆಟ್ಟವನೇಕೆ ಸದ್ಭಕ್ತನಹನು." "ಎನಿಸುಕಾಲ ಕಲ್ಲು ನೀರೊಳಗಿದ್ದರೇನು. ನೆನೆದು ಮೃದುವಾಗಬಲ್ಲುದೆ? ಎನಿಸುಕಾಲ ನಿಮ್ಮ ಪೂಜಿಸುವೆನಯ್ಯಾ ಮನದಲ್ಲಿ ದೃಢವಿಲ್ಲದನ್ನಕ್ಕರ?" ಉದ್ಧಾರವಾಗುವೆನೆನ್ನುವವನು ಲೋಕದಲ್ಲಿ ಸರಿಯಾಗಿ ನಡೆದುಕೊಳ್ಳಬೇಕು. ಇಲ್ಲಿ ಏನಿದೆ ಎಂದು ಬದುಕನ್ನು ನಿರ್ಲಕ್ಷಿಸಬಾರದು. "ಮರ್ತ್ಯಲೋಕವೆನ್ನುವುದು ಕರ್ತಾರನ ಕಮ್ಮಟ. ಇಲ್ಲಿ ಸಲ್ಲುವರು ಅಲ್ಲಿ ಸಲ್ಲುವರು, ಇಲ್ಲಿ ಸಲ್ಲದವರು ಅಲ್ಲಿ ಸಲ್ಲರು." ಒಳ್ಳೆಯ ಜೀವನ ಆವಶ್ಯಕ. ಒಳ್ಳೆಯ ಬಾಳೇ ದೇವಲೋಕ ; ಕೆಟ್ಟಬಾಳೇ ಮರ್ತ್ಯಲೋಕ. ಮನುಷ್ಯನು ದಯಾವಂತನಾಗಿರಬೇಕು ; ದೇವರಲ್ಲಿ ನಿಜವಾದ ಭಕ್ತಿಯನ್ನು ಸಾಧಿಸಬೇಕು. ಹಲವು ದೇವರನ್ನು ನಂಬುವುದು ಸರಿಯಲ್ಲ. ದೇವರ ಭಕ್ತನೆಂದು ಹೆಸರಿಟ್ಟುಕೊಂಡು ಕೊಳಕು ಜೀವನದಲ್ಲಿರುವುದು ಸರಿಯಲ್ಲ. ದೇವರೆಂದಮೇಲೆ ದಿನ ವಾರಗಳ ಶುದ್ಧಿಯೆಂಬ ಅಜ್ಞಾನದಲ್ಲಿರುವುದು ಸರಿಯಲ್ಲ. ದೇವರ ಶರಣರೆಲ್ಲ ಒಂದೇ ಜಾತಿ. ಒಳ್ಳೆಯ ನಡತೆ ಒಳ್ಳೆಯ ಜಾತಿ ; ಕೆಟ್ಟ ನಡತೆ ಕೆಟ್ಟ ಜಾತಿ. ಮನುಷ್ಯನ ಬದುಕು ಚೆನ್ನಾಗಬೇಕಾದರೆ ಅವನ ಮನಸ್ಸು ಒಳ್ಳೆಯದಕ್ಕೆ ಸೋಲಬೇಕು. ಮನಸ್ಸು ಎಂದಿನಂತೆ ಇದ್ದರೆ ಹೊಳೆಯಲ್ಲಿ ಮಿಂದು ಪ್ರಯೋಜನವಿಲ್ಲ. ಭಕ್ತಿ ಸುಲಭವಲ್ಲ ; ಕರಗಸದಂತೆ, ಹೋಗುತ್ತಾ ಕೊಯ್ಯುತ್ತದೆ ಬರುತ್ತಾ ಕೊಯ್ಯುತ್ತದೆ. ನಾನು ಭಕ್ತನೆಂದರೆ ದೇವರು ಪರೀಕ್ಷೆಮಾಡಿ ನೋಡುವನು. ಶರಣಾಗತಿ ಹಿರಿದು. ತನು ನಿನ್ನದು, ಮನ ನಿನ್ನದು, ಧನ ನಿನ್ನದು, ಎಂದು ಎಲ್ಲವನ್ನೂ ದೇವರಲ್ಲಿ ಅರ್ಪಣೆಮಾಡಿದರೆ ಮನುಷ್ಯನು ನಿಜವಾದ ಸುಖವನ್ನು ಪಡೆಯುವನು.

ಈ ಮತದ ಅನುಭಾವ

ಬಸವಣ್ಣನವರ ವಚನಗಳಿಂದಲೂ ಬದುಕಿನಿಂದಲೂ ಆತ್ಮೋದ್ಧರಣದ ಮೂಲ ಸೂತ್ರಗಳಾದ ಈ ತತ್ತ್ವಾರ್ಥಗಳು ಜನರಲ್ಲೆಲ್ಲ ವಾಡಿಕೆಗೆ ಬಂದುವು. ವೀರಶೈವ ಮತವು ಈ ವಿಷಯಗಳನ್ನು ಜನರಿಗೆ ತಿಳಿಸುವುದಕ್ಕೆ ಜಂಗಮರನ್ನು ಏರ್ಪಡಿಸಿತು. ಬಸವಣ್ಣನವರ ಪ್ರಭಾವದಿಂದ ಅವರ ಮಾತುಗಳಲ್ಲಿ ಕಾಣಬರುವ ಆತ್ಮಜ್ಞಾನವೂ ನಿರ್ದಾಕ್ಷಿಣ್ಯವಾದ ಆತ್ಮ ಪರೀಕ್ಷೆಯೂ ಹತ್ತಾರು ಜನರಲ್ಲಿ ಕಂಡುಬಂದಿತು. ಈ ಮತದ ಮುಖ್ಯ ವಚನಕಾರರಲ್ಲಿ ಹಲವರು ಹೆಂಗಸರೂ ಇದಾರೆ. ಉಡುತಡಿಯ ಮಹಾದೇವಿಯಕ್ಕನ ವಚನಗಳು ಇನ್ನು ಯಾವ ಭಕ್ತಶಿರೋಮಣಿಯ ವಚನಗಳಿಗಿಂತಲೂ ಕಡಿಮೆಯಿಲ್ಲವೆಂಬಂತೆ ಇವೆ. ಈ ವಚನಕಾರರಲ್ಲಿ ಅನೇಕರು ಪಂಡಿತರಲ್ಲ. ಆದರೆ ಇವರ ಸಾಧನೆ ಬರಿಯ ಪಾಂಡಿತ್ಯದ ಅಂತಸ್ತನ್ನು ಮೀರಿದ್ದು. ಪಾಂಡಿತ್ಯಕ್ಕೆ ನಿಲುಕದ ಸಿದ್ಧಿಗೆ ಈ ವಚನಕಾರರು ಊರ ಸಾಮಾನ್ಯ ಜನರ ಮಾತುಗಳಲ್ಲೇ ರೂಪನ್ನು ಕೊಟ್ಟರು. ಇವರು ಸಾಮಾನ್ಯ ಜನರಿಂದ ಬಂದ ಸಿದ್ಧರು ; ಅವರ ಬಾಳನ್ನು ಬಲ್ಲವರು ; ಆದ್ದರಿಂದ ಸಾಮಾನ್ಯರ ಅನುಭವಗಳನ್ನು ತೆಗೆದುಕೊಂಡು ತತ್ತ್ವಗಳನ್ನು ಪ್ರತಿಪಾದಿಸಿದಾರೆ. ಇವರ ಉದಾಹರಣೆಗಳು ಹಳ್ಳಿಯವು, ಇವರ ಉಪಮೆಗಳು, ಹಳ್ಳಿಯ ಬದುಕಿನಿಂದ ಬಂದವು. ವೀರಶೈವ ಮತವು ಹಳ್ಳಿಯ ಜನರಿಂದ ಹಳ್ಳಿಯ ಜನಕ್ಕಾಗಿ ಹಳ್ಳಿಯ ಮಾತಿನಲ್ಲಿ ಪ್ರಚಾರ ಪಡೆಯಿತು. ಈ ಕಾರಣದಿಂದ ಅತ್ಯಲ್ಪ ಕಾಲದಲ್ಲಿಯೇ ಇದು ಜನಾಂಗದ ಜೀವನದ ಅಂತರ್ಯವನ್ನೇ ಮಾರ್ಪಡಿಸಿತು.

ಶಿವಶರಣರೆಲ್ಲರೂ ಜನರಿಗೆ ಉಪದೇಶಮಾಡಿದರೆಂದು ಹೇಳಬಹುದು. ಅವರಲ್ಲಿ ವಚನಗಳನ್ನು ರಚಿಸಿದವರು ನೂರಾರು ಜನ. ಶ್ರೀಮಾನ್ ಹಳಕಟ್ಟಿ ಗುರುಶಾಂತಪ್ಪ ಫಕೀರಪ್ಪನವರು ಅಚ್ಚುಹಾಕಿಸಿರುವ ವಚನಶಾಸ್ತ್ರಸಾರದಲ್ಲಿ ಸುಮಾರು ಇನ್ನೂರು ಜನ ಶರಣರ ವಚನಗಳು ಕಾಣುತ್ತವೆ. ಅವುಗಳ ನೀತಿಬೋಧೆಯು ಎಷ್ಟು ವಿಸ್ತಾರವಾದದ್ದೆಂಬುದನ್ನು ಆ ಗ್ರಂಥದ ವಿಷಯ ಸೂಚಿಕೆಯಿಂದಲೇ ಕಾಣಬಹುದು. ಲಿಂಗಾಂಗಿ ಸದಾಚಾರಿಯಾಗಿರಬೇಕು. ಮನುಷ್ಯನು ಸತ್ಯವನ್ನು

ನುಡಿಯಬೇಕು, ಕಳವು ಮಾಡಬಾರದು, ಜೀವಹಿಂಸೆ ಮಾಡಬಾರದು. ಎಲ್ಲರೂ ಸಮನೆಂದು ಭಾವಿಸಬೇಕು, ಸಮಾಧಾನಿಯಾಗಿರಬೇಕು. ಮನುಷ್ಯನಿಗೆ ದುರಾಶೆ ಕೂಡದು, ಲೋಭ ಕೂಡದು, ಅಹಂಕಾರ ಕೂಡದು ; ವ್ಯಭಿಚಾರ ಕೂಡದು, ಭಕ್ತನೆಂಬ ಹೆಮ್ಮೆ ಕೂಡದು. ಮನುಷ್ಯನು ಸ್ತ್ರೀಯರನ್ನು ಮನ್ನಿಸಬೇಕು, ಶರಣರನ್ನು ಮನ್ನಿಸಬೇಕು ; ಶುದ್ಧನಾಗಿರಬೇಕು, ನಿಷ್ಠೆಯುಳ್ಳವನಾಗಿರಬೇಕು ; ವ್ರತನಿಯಮವನ್ನು ಬಿಡಬಾರದು, ಆದರೆ ತಾಮಸ ವ್ರತನಿಯಮವನ್ನು ಹಿಡಿಯಬಾರದು. ಈ ರೀತಿಯಲ್ಲಿ ಸದ್ವರ್ತನೆಯ ಮುಖ್ಯ ಸೂತ್ರಗಳೆಲ್ಲ ಈ ವಿಷಯ ಸೂಚಿಯಲ್ಲಿ ಕಂಡುಬರುತ್ತವೆ. ಈ ಮತವು ಸಾಮಾನ್ಯರೆಂದು ಎನಿಸಬಹುದಾದ ಎಂಥೆಂಥವರಲ್ಲಿದ್ದ ದೊಡ್ಡತನವನ್ನು ಹೊರಗೆಡಹಿತೆನ್ನುವುದಕ್ಕೆ ಶರಣರಲ್ಲಿ ಕೆಲವರ ಹೆಸರನ್ನು ನೋಡಿದರೆ ಸಾಕು. ಮಡಿವಾಳ ಮಾಚಯ್ಯ, ಸೌದೆ ಮಾರುವ ಮಾರಯ್ಯ, ಮಾದಾರ ಚನ್ನಯ್ಯ, ಮಾದಾರ ಧೂಳಯ್ಯ, ತಳವಾರ ಕಾಮಿದೇವ, ಕಿರಾತ ಸಂಗಯ್ಯ, ಹೊಡೆಹುಲ್ಲ ಬಂಕಣ್ಣ, ಗಾಣದ ಕನ್ನಪ್ಪ, ತುರುಗಾಹಿ ರಾಮಣ್ಣ, ಮೇದರ ಕೇತಯ್ಯ, ಕೊಟ್ಟಣದ ಸೋಮವ್ವ, ಹಡಪದ ರೇಚಣ್ಣ, ಹಡಪದ ಅಪ್ಪಣ್ಣ, ಕಾಮಾಟದ ಭೀಮಣ್ಣ. ಮನುಷ್ಯನು ಹಿರಿಯನಾಗುವುದು ಅವನು ಮಾಡುವ ಕೆಲಸದಿಂದಲ್ಲ ; ಅವನ ಅಂತರ್ಯದ ಪರಿಶುದ್ಧಿಯಿಂದ. ವೀರಶೈವ ಮತವು ಮಾಡಿದ ದೊಡ್ಡ ಕೆಲಸವೆಂದರೆ ಹೀಗೆ ಸಾಮಾನ್ಯರಲ್ಲಿ ಹಿರಿಯರನ್ನು ಕಾಣಿಸಿದ್ದು. ಇದರಂತೆಯೇ ಹೆಂಗಸರು ಹತ್ತಾರು ಜನ ವಚನಗಳನ್ನು ಹೇಳಿದ್ದಾರೆ. ಬಸವಣ್ಣನವರ ಪತ್ನಿ ಗಂಗಾಂಬಿಕೆ ; ಮೋಳಿಗೆ ಮಾರಯ್ಯ ಕೊಂಡೇ ಮಂಚಣ್ಣ ರಾಯಸದ ಮಂಚಣ್ಣ ಉರಿಲಿಂಗ ಪೆದ್ದಿ, ಇವರ ಪತ್ನಿಯವರು, ಉಡುತಡಿಯ ಮಹಾದೇವಿಯಕ್ಕ, ಇಬ್ಬರು ಕಾಳವ್ವೆಯರು, ಇಬ್ಬರು ರೆಮ್ಮವ್ವೆಯರು, ರೇಚವ್ವೆ, ಸತ್ಯಕ್ಕ, ಗೊಗ್ಗವ್ವ, ರೇಕಮ್ಮ ; ಹೀಗೆಯೇ ಇನ್ನು ಹತ್ತು ಜನ. ಇಷ್ಟು ಜನ ಹೆಂಗಸರಲ್ಲಿ ವಚನಗಳನ್ನು ನುಡಿಯುವಷ್ಟು ಆತ್ಮಗೌರವ ಉಂಟಾಗಬೇಕಾದರೆ ಈ ಮತವು ಸ್ತ್ರೀಯರನ್ನು ಎಷ್ಟು ಮರ್ಯಾದೆಯಿಂದ ಕಂಡಿತೆಂಬುದೂ ಇದರಿಂದ ಎಷ್ಟು ಶುಭ ಉಂಟಾಯಿತೆಂಬುದೂ ವ್ಯಕ್ತವಾಗಬೇಕು. ತನ್ನ ಅಂತರಂಗವನು

ತಾನು ನೋಡಿಕೊಳ್ಳುವುದು ತಿದ್ದಿಕೊಳ್ಳುವುದು ಈ ಮತದಿಂದ ಜನರಲ್ಲಿ ವಾಡಿಕೆಯಾಯಿತು. ಇದು ಬೆಳವಣಿಗೆಯ ಮೂಲ ಮಂತ್ರ. ದೇವರು ಒಬ್ಬನೇ ಎಂಬುದೂ, ಕ್ಷುದ್ರ ದೇವತೆಗಳನ್ನು ಪೂಜಿಸಬಾರದೆಂಬುದೂ, ಭಾವ ಶುದ್ಧಿಯೇ ಪೂಜೆ ಎಂಬುದೂ, ಜಾತಿ ಜಾತಿ ಎನ್ನಬಾರದೆಂಬುದೂ, ಪ್ರಾಣಿಹಿಂಸೆ ಮಾಡಕೂಡದೆನ್ನುವುದೂ, ತಿಥಿ ವಾರ ನಕ್ಷತ್ರವೆಂದು ಕ್ಲೇಶ ಪಡಬಾರದೆಂಬುದೂ ಜನರಲ್ಲಿ ವಾಡಿಕೆಯಾಯಿತು. ಅದೆಲ್ಲ ಜನರಲ್ಲಿ ಸಿದ್ಧಿಯಾಯಿತೆಂದಲ್ಲ; ಜ್ಞಾನವು ಅಷ್ಟು ಸುಲಭವಾಗಿ ಸಿದ್ಧಿಯಾಗುವುದಿಲ್ಲ. ಆದರೆ ನಾವು ತಿಳಿದುಕೊಂಡಿರುವುದಕ್ಕಿಂತಲೂ ಸರಿಯಾದದ್ದು ಬೇರೆ ಒಂದು ದಾರಿ ಇದೆ ಎಂದು ಜನಕ್ಕೆ ತೋರುವುದೇ ಒಂದು ವಿಶೇಷ. ಧ್ಯೇಯವೊಂದು ಕಣ್ಣಿಗೆ ಬಿದ್ದು ಹಿಂದಿನಿಂದ ಬಂದ ಕೆಟ್ಟ ಕಟ್ಟು ಸಡಿಲವಾಗುವುದೇ ಒಂದು ಶುಭ ಚಿಹ್ನೆ. ಸಂಸ್ಕಾರಕರು ನಮಗೆ ಮಾಡಬೇಕಾದದ್ದೂ ಇದೇ ಸಹಾಯ. ವೀರಶೈವ ಮತದಿಂದ ಜನಜೀವನದ ಹಿಂದಣ ಬಂಧನಗಳು ಬಹಳಮಟ್ಟಿಗೆ ಕಡಿಮೆಯಾದವು; ಜನರ ವಿವೇಕದ ಮಟ್ಟವೇ ಏರಿತು. ತಿಳಿವು ಬೇರೊಂದು ಭಾಷೆಯಲ್ಲಿರುತ್ತ ಸಾರ ಮಾತ್ರ ಜನಕ್ಕೆ ಎಂಬ ಅಜ್ಞಾನ ಹೋಯಿತು. ಧ್ಯಾನವೂ ಭಕ್ತಿಯೂ ದೇವರ ಸಾನ್ನಿಧ್ಯದಲ್ಲಿ ಸೇವೆ ಎನ್ನುವುದೂ ಕೆಲವರಿಗೆ ಮಾತ್ರ ಸೇರಿದ ಅಧಿಕಾರವಲ್ಲ, ಸರ್ವ ಸಾಮಾನ್ಯವಾದ ಪ್ರಯೋಜನಗಳು ಎಂದು ಜನರಲ್ಲಿ ಭಾವನೆಯುಂಟಾಯಿತು.

ಸರ್ವಜ್ಞ

ಜನರಲ್ಲಿ ಈ ಉಚ್ಚಭಾವನೆಗಳು ಹರಡಿ ಎಂಥ ಸಂಸ್ಕಾರವುಂಟಾಯಿತೆನ್ನುವುದು ನಮಗೆ ಸರ್ವಜ್ಞನ ತ್ರಿಪದಿಗಳಲ್ಲಿ ಕಾಣುತ್ತದೆ. ಸರ್ವಜ್ಞನ ಕೃತಿ ಸಾಮಾನ್ಯ ಜನರ ತಿಳಿವಿನ ಫಲ. ಅವನು ಹುಟ್ಟಿದ್ದು ಕುಂಬಾರರಲ್ಲಿ; ಕಲಿತದ್ದೆಲ್ಲಿ ಎಂದು ಹೇಳುವುದಕ್ಕಿಲ್ಲ. ಪ್ರಾಯಶಃ ಅವನು ಕಲಿತ ಶಾಲೆ ಅವನ ಸುತ್ತಣ ಜೀವನವೇ. ಅವನು ಎಲ್ಲವನ್ನೂ ಬದುಕಿನ ಗರಡಿಯಲ್ಲಿ ಕಲಿತನೆಂದು ಕಾಣುತ್ತದೆ. ಅವನ ಮಾತು ಜನದ ಮಾತು; ನಯವಾಗಿದೆ ನಿಜ, ಆದರೆ ತಿಳಿದ ಜನರ ಮಾತಾದದ್ದರಿಂದ ನಯವಾಗಿದೆ. ಅವನು ಎಲ್ಲ

ವಿಷಯವನ್ನೂ ಬಲ್ಲನು, ಎಲ್ಲವನ್ನೂ ಚೆನ್ನಾಗಿ ಹೇಳುತ್ತಾನೆ. ಜನಪದ ಬಾಯಲ್ಲಿ ನಡೆದು ನಡೆದು ಇವನ ಮಾತು ಸಾಣ್ಯವಾಗಿದೆ. ಸಣ್ಣ ಮಾತಿಗೆ ದೊಡ್ಡ ಅರ್ಥವೆಂದರೆ ಸರ್ವಜ್ಞನ ಪದಗಳಲ್ಲಿ ಕಾಣಬೇಕು. ಇವನ ಕಾಲದಲ್ಲಿ ಜನರಲ್ಲಿ ಹರಡಿದ್ದ ಜ್ಞಾನ ಎಂಥದೆಂದು ಅವನ ತ್ರಿಪದಿಗಳಿಂದ ತಿಳಿಯುತ್ತದೆ. ಮನುಷ್ಯನು ಸತ್ಯವನ್ನು ತಿಳಿದುಕೊಳ್ಳಬೇಕು; ಇದಕ್ಕೆ ಗುರುವನ್ನು ಆಶ್ರಯಿಸಬೇಕು; ಅವನನ್ನು ಎತ್ತಿಂತೆ ತೊತ್ತಿಂತೆ ಹಿತ್ತಲಿನ ಗಿಡದಂತೆ ಪಾದದ ಕೆರದಂತೆ ಸೇವಿಸಬೇಕು. ಅದರಂತೆಯೇ ಗುರುವಾದವನು ನೆಲೆಯರಿತವನಾಗಿರಬೇಕು. ಅದಿಲ್ಲದಿದ್ದರೆ ಅವನನ್ನು ನಂಬಿದ ಶಿಷ್ಯನು ಕೊಳವನ್ನು ಹೊಕ್ಕ ಕುರುಡನಂತಾಗುತ್ತಾನೆ. ನಿಷ್ಠೆಯಿಂದ ಶಿವನು ಸಿಕ್ಕುತ್ತಾನೆ. ಅವನಿಗೆ ಆಗಿಲ್ಲ ಹೋಗಿಲ್ಲ; ಮೇಗಿಲ್ಲ ಕೆಳಗಿಲ್ಲ; ದೇಗುಲವು ಇಲ್ಲ. ಅವನು ಹೃದಯದೊಳಗಿದಾನೆ. ಅವನೊಬ್ಬನೆ. ಕಣಿಕವೊಂದರಿಂದ ಹಲವು ಅಡಿಗೆಯಾಗುವಂತೆ ಅವನಿಂದ ಸರ್ವವೂ ಆಗಿದೆ. ಅವನನ್ನು ಇದ್ದಲ್ಲೇ ನೆನೆಯಬಹುದು. ನೆನೆಯುವುದೇ ಆದರೆ ಮನೆಯಲ್ಲಿ ನೆನೆದರೂ ಮರದಲ್ಲಿ ನೆನೆದರೂ ಫಲವೊಂದೇನೆ. ತಾರಣಪುರುಷನು ಒಳಗಿರಲಾಗಿ ವಾರಣಾಸಿಗೆ ಹೋಗುವ ಕಾರಣವಿಲ್ಲ. ತತ್ತ್ವವನ್ನರಿಯದೆ ವೇಷಮಾಡುವುದು ವ್ಯರ್ಥ. ಕತ್ತೆ ಬೂದಿಯಲ್ಲಿ ಹೊರಳಿದರೆ ಯತಿಯಪ್ಪುದೇ ? ವಿಭೂತಿಯಿಂದ ಯತಿಯಾಗುವುದಿಲ್ಲ. ತಿಳಿದವನು ವಿನಯದಿಂದ ಶೋಭಿಸುತ್ತಾನೆ; ಅವನನ್ನು ಇತರರು ತಾವಾಗಿ ಬಂದು ಆಶ್ರಯಿಸುವರು. ಕನ್ನಡಿಯು ನನ್ನನ್ನು ಬಂದು ನೋಡಿ ಎಂದು ಯಾರಿಗೂ ಹೇಳುವುದಿಲ್ಲ; ಎಲ್ಲರೂ ಅದರ ಬಳಿ ತಾವೇ ಬರುತ್ತಾರೆ. ಬದುಕಿರುವಾಗ ಸಂಸಾರ, ಆಮೇಲೆ ಮೋಕ್ಷ, ಎಂದು ತಿಳಿಯುವುದು ತಪ್ಪು. ಜೀವ ಇರುವಾಗ ಸರಿಯಾದ ದಾರಿಯನ್ನು ತಿಳಿದು ಅದರಲ್ಲಿ ನಡೆಯಬೇಕು. ಒಡಲನ್ನು ದಂಡಿಸಿ ಮುಕ್ತಿ ಪಡೆಯುವೆನೆನ್ನುವುದು ಹುತ್ತ ಹೊಡೆದು ಹಾವನ್ನು ಕೊಲ್ಲುವೆವೆಂಬ ರೀತಿ ಅಸಂಮಜಸ. ವೇಷ ಲಾಂಛನಗಳು ಮುಖ್ಯವಲ್ಲ; ಒಳ್ಳೆಯ ಆಂತರ್ಯ ಮುಖ್ಯ. ಜ್ಞಾನಿಗೆ ಕುಲವಿಲ್ಲ; ಸ್ವರ್ಗದಲ್ಲಿ ಹೊಲಗೇರಿಯಲ್ಲ; ಒಳ್ಳೆಯವರಾದವರು ಒಂದು ಕುಲ, ಒಂದು ಜಾತಿ. ನಡೆಯುವುದು ಒಂದೇ

ಭೂಮಿಯ ಮೇಲೆ; ಕುಡಿಯುವುದು ಒಂದೇ ನೀರು; ಎಲ್ಲರ ಮನೆಯಲ್ಲಿಯೂ ಸುಡುವುದು ಒಂದೇ ಅಗ್ನಿ; ಇನ್ನು ಕುಲವು ಬೇರೆ ಹೇಗೆ? ಜಾತಿ ಹೀನರ ಮನೆಯ ಜ್ಯೋತಿ ಹೀನವಾದದ್ದೇನು? ಜಾತಿ ವಿಜಾತಿ ಎನ್ನಬಾರದು. ದೇವನೊಲಿದಾತನು ಜಾತ.

ಇದೆಲ್ಲ ತತ್ತ್ವ ಮತ ಇವುಗಳನ್ನು ಕುರಿತ ಮಾತು. ಇದರಲ್ಲಿ ಕಾಣುವ ವಿಶಾಲವಾದ ಪ್ರಾಜ್ಞತೆಯೇ ಸರ್ವಜ್ಞನ ವ್ಯವಹಾರ ವಿಷಯಕ ವಚನಗಳಲ್ಲಿಯೂ ಕಾಣುತ್ತದೆ. ಅವುಗಳಲ್ಲಿ ಅಲ್ಲಲ್ಲಿ ಸುಂದರವಾದ ಹಾಸ್ಯ ಕಾಣುತ್ತದೆ. ದಾನಮಾಡಬೇಕಾದರೆ ಸಮಯವರಿತು ಮಿತವಾಗಿ ಮಾಡಬೇಕು. ಸೊಡರಿನಲ್ಲಿ ಎಣ್ಣೆ ತೀರಿದರೆ ಕೊಡವನ್ನೆತ್ತಿ ಹುಯ್ಯುವರೆ? ಸ್ವಲ್ಪ ಹಾಕುವರು. ಹಾಗೆಯೇ ಬೇಡಿದವರಿಗೆ ಕೊಡುವುದೆಂದು ಅತಿಯಾಗಿ ಕೊಡಬಾರದು; ಇಲ್ಲವೆಂದು ಬರಿಯ ಕಯ್ಯಲ್ಲಿ ಕಳುಹಿಸಬಾರದು. ಸೇವಕನಾದವನು ಸ್ವಾಮಿ ಕಾರ್ಯಕ್ಕೆ ಮಡಿಯಲಾದರೂ ಬೇಕು; ಹಿಂಜರಿಯಬಾರದು ಅಡಿಯನ್ನು ಮುಂದಿಟ್ಟರೆ ಸ್ವರ್ಗ; ಹಿಂದಕ್ಕಿಟ್ಟರೆ ನರಕ. ಬಲ್ಲಿದರೊಡನೆ ಜಗಳ ಬಾರದು; ಪಾಚಿ ಕಟ್ಟಿರುವ ಕಲ್ಲಮೇಲೆ ಅಡಿಯಿಡಬಾರದು. ಮಾಳಿಗೆ ಸಡಲಿದರೆ ಅಲ್ಲಿರಬಾರದು; ಹಲ್ಲುದುರಿದ ಸೂಳೆಯ ಬಳಿ ನಿಲ್ಲಬಾರದು. ದೊರೆ ಸುಳ್ಳು ಹೇಳಿದರೆ ಅಲ್ಲಿಂದ ತೊಲಗುವುದು ಕ್ಷೇಮ. ಹೊಲೆಯನು ಸಂಪಾದಿಸುವುದನ್ನು ಹೆಂಡಕ್ಕಿಡುತ್ತಾನೆ; ಕೃಷಿಕನು ಸಂಪಾದಿಸುವುದನ್ನು ದಂಡಕ್ಕಿಡುತ್ತಾನೆ; ಹಾರುವನು ಸಂಪಾದಿಸುವುದನ್ನು ಪಿಂಡಕ್ಕೆ ಇಡುತ್ತಾನೆ. ಅಲಸಿಕೆಯ ಮನುಷ್ಯನಿಗೆ ಕಲಸುವುದಕ್ಕೆ ಅಂಬಲಿಯಿಲ್ಲ; ಅಲಸಿಕೆಯಿಲ್ಲದವನಿಗೆ ಬೇರಿಂದ ಹಲಸು ಕಾತಂತೆ ತುಂಬ ಧನ ಧಾನ್ಯ ಸೇರುತ್ತದೆ. ಅನ್ನದೇವರ ಮುಂದೆ ಇನ್ನು ದೇವರು ಯಾಕೆ? ಅನ್ನವಿರುವ ತನಕ ಪ್ರಾಣ. ಜಗದಲ್ಲಿ ಅನ್ನವೇ ದೈವ. ಏನಾದರೂ ಕೊಟ್ಟು ಜ್ಞಾನಿಯ ಕೆಳೆಯನ್ನು ಸಂಪಾದಿಸು. ಅಜ್ಞಾನಿಗೆ ಬೇಕಾದದ್ದನ್ನು ಕೊಟ್ಟು ದೂರ ಕಳುಹಿಸು. ಅಕ್ಕಸಾಲೆಯ ಮಗು ಚಿಕ್ಕದೆಂದೆನ್ನ ಬೇಡ; ಚಿಕ್ಕಾಡು ಮೈಕಡಿವಂತೆ ಕಮ್ಮಟವನಿಕ್ಕುತಲೆ ಕಳುತಾನೆ. ಗಾಣಿಗನು ಈಶ್ವರನನ್ನು ಕಾಣನೆಂಬುದು ನಿಜ. ಈಶ್ವರನು ಬಂದರೂ ಗಾಣಿಗ ಅವನಿಂದ ಗಾಣ

ಮಾಡಿಸುವನು. ನಲ್ಲ ಒಲ್ಲೀ ಒಲ್ಲ; ಒಳ್ಳೆ ಅಕ್ಕಿ ಅನ್ನ ಒಲ್ಲ; ಏಕೆ? ಇಲ್ಲದ್ದಕ್ಕೆ ಒಲ್ಲ. ಗೌಡನಲ್ಲಿ ಹಗೆತನ, ಕಿವುಡನಲ್ಲಿ ಏಕಾಂತ, ತವುಡು ತಿಂದಂತೆ. ಹುಲ್ಲೆಯ ಚರ್ಮವನ್ನು ಹೊದ್ದು ಕಲ್ಲಮೇಲೆ ಮಲಗುವ ತಪಸ್ವಿಯ ಮನಸ್ಸು ಕೂಡ ಹೆಣ್ಣಿಗೆ ಸೋಲುತ್ತದೆ. ನಿನ್ನ ಪ್ರಿಯೆಯನ್ನು ಕೊಂಕುಗುರುಳ ರಂಭೆ, ಪಂಕಜಗಂಧಿ, ಎಂದು ಹೊಗಳದಿರು. ಒಲಿದವನಿಗೆ ಮಂಕೇ ಮಾಣಿಕ್ಯ. ಹೆಂಗಸರನ್ನು ಒಲಿಸಿಕೊಳ್ಳ ಬೇಕಾದರೆ ನಾರು ಬೇರು ಇಡಬೇಡ! ಅದರಿಂದೇನೂ ಆಗುವುದಿಲ್ಲ. ನಾರಿಯಾಗಲಿ ಜಗವಾಗಲಿ ಒಲಿಯಬೇಕಾದರೆ ಹೊನ್ನಿನ ಬೇರನ್ನಿಕ್ಕು ಒಲಿಯುತ್ತಾರೆ.

ಸರ್ವಜ್ಞನ ಜ್ಞಾನ ವಿಶಾಲವಾದದ್ದು, ಉದಾರವಾದದ್ದು, ಜೀವನದ ಒಳಗಿಂದ ಬಂದದ್ದು, ಸುತ್ತಣ ಬಾಳನ್ನು ಅವಲಂಬಿಸಿ ಬೆಳೆದದ್ದು. ಇವನ ಭಾವನೆ ಉದಾತ್ತವಾದದ್ದು. ಇವನ ಪರಿಹಾಸ್ಯ ನಿಸರ್ಗಜನ್ಯವಾದದ್ದು. ಮಾತು ಸರಳ, ಸುಂದರ, ಅರ್ಥಗರ್ಭಿತ. ಸರ್ವಜ್ಞನು ಆ ಕಾಲದ ಜನದ ತಿಳಿವಿನ ಮಟ್ಟವನ್ನು ಸೂಚಿಸುತ್ತಾನೆ. ಅವನು ಆ ತಿಳಿವಿನ ಸಾರವನ್ನು ಬರೆದಿಟ್ಟನು. ಅದರಿಂದ ಮುಂದಿನ ತಲೆಮಾರುಗಳಿಗೆ ಜ್ಞಾನಕ್ಕೆ ದಾರಿಯಾಯಿತು. ಸರ್ವಜ್ಞನ ಮಾತುಗಳನ್ನು ನಮ್ಮ ಜನ ಆಗಾಗ ಹೇಳುತ್ತಲೇ ಇರುವರು. ನೀಲಗಿರಿಯ ಬಡಗರಲ್ಲಿ ಓಡಿಯಾಡಿದ ನಮ್ಮ ಮಿತ್ರರೊಬ್ಬರು ಅವರಲ್ಲಿ ಸರ್ವಜ್ಞನ ಪದಗಳು ಬಹಳ ರೂಢಿಯಲ್ಲಿವೆ ಎಂದು ಹೇಳಿದರು. ಸರ್ವಜ್ಞನ ಮಾತುಗಳು ನಾಣ್ನುಡಿಗಳಾಗಿವೆ. ಇವುಗಳ ಸಂಘರ್ಷಣದಿಂದ ನಮ್ಮ ಜನಕ್ಕೆ ಜನವೇ ತ್ರಿಪದಿಗಳನ್ನು ಬರೆಯುವ ವಾಡಿಕೆಯನ್ನು ಕಲಿಯಿತೆನ್ನಬಹುದು. ಸರ್ವಜ್ಞನವೆಂದು ಹೇಳುವ ಅನೇಕ ತ್ರಿಪದಿಗಳು ಸರ್ವಜ್ಞನವೋ ಬೇರೆಯವರವೋ ಎಂಬು ಅನೇಕವೇಳೆ ಸಂದೇಹವುಂಟಾಗುತ್ತದೆ. ಇವನ ಹೆಸರಿಲ್ಲದಿದ್ದರೂ ಜನರಲ್ಲಿ ರೂಢಿಯಲ್ಲಿರುವ ಬಹು ಪದ್ಯಗಳು ತ್ರಿಪದಿಗಳು. ಇವುಗಳೆಲ್ಲದರ ಸ್ಫೂರ್ತಿಯೂ ಸರ್ವಜ್ಞನಿಂದ ಬಂದದ್ದೆಂದು ಹೇಳಿದರೆ ತಪ್ಪಾಗಲಾರದು.

ಭಕ್ತಿಮಾರ್ಗ

ಸ್ಮಾರ್ತ ಮತ ವೀರಶೈವ ಮತಗಳಲ್ಲದೆ ಕನ್ನಡನಾಡಿನ ಜನ ಸಂಸ್ಕೃತಿಗೆ ಸಹಾಯಕವಾದ ಮತ್ತೊಂದು ಚಳುವಳಿ ಹರಿದಾಸರದು ಎಂದು ಮೊದಲೇ ಹೇಳಿದೆ. ಹರಿದಾಸ ಮತವು ಮುಖ್ಯ ಮತದ ಎಂದು ವಿಶೇಷ ಗುಣವನ್ನೇ ಬಳೆಯಿಸಿತು. ಭಕ್ತಿ ಭಗವದನುಸಂಧಾನಕ್ಕೆ ಆವಶ್ಯಕ ವೆನ್ನುವುದು ಮುಖ್ಯ ಮತದಲ್ಲೇ ಪ್ರಸಿದ್ಧವಾಗಿದ್ದ ಒಂದು ಮಾರ್ಗ. ಮುಖ್ಯ ಮತವು ಒಂದು ದಾರಿಯನ್ನು ಪ್ರಶಂಸಿಸಿ ಮತ್ತೊಂದನ್ನು ಬಿಡುವುದಕ್ಕೆ ಆಗುವುದಿಲ್ಲ; ಎಲ್ಲಾ ತರಗತಿಯ ಜನಕ್ಕೆಂದು ದಾರಿಗಳನ್ನು ತೋರಿಸಿಕೊಡಬೇಕು. ಒಂದೊಂದು ವೇಳೆ ಎಲ್ಲರೂ ಎಲ್ಲಾ ದಾರಿಯನ್ನೂ ನಡೆಯುವುದಕ್ಕೆ ನೋಡುವರು; ಯಾರಿಗೂ ಯಾವ ದಾರಿಯೂ ಇಲ್ಲದೆ ಹೋಗುವುದು. ಇಂಥ ಸಂದರ್ಭದಲ್ಲಿ ಯಾರಾದರೂ ಒಬ್ಬರಿದ್ದು ಜನ ಸಾಮಾನ್ಯಕ್ಕೆ ಯಾವುದು ಮುಖ್ಯ ಎಂದು ತೋರಿಸಬೇಕಾಗುವುದು. ಬರ ಬರುತ್ತ ಜನರಿಗೆ ಭಕ್ತಿಯ ದಾರಿಯೇ ಸುಲಭ, ಸರಿ, ಎಂಬ ಭಾವನೆ ನೆಲೆಸುತ್ತ ಬಂದಿತು. ಆದರಿಂದಲೇ ಸೀಮೆಯಲ್ಲೆಲ್ಲ ಭಕ್ತಿ ಪಂಥಗಳು ಹೇರಳವಾಗಿ ಎದ್ದದ್ದು. ದೇವರು ಇರುವನೆ ಇಲ್ಲವೆ? ಇದ್ದರೆ ಅವನ ಸ್ವರೂಪವೇನು? ಅವನ ನಮ್ಮ ಸಂಬಂಧ ಯಾವುದು? ನಾವು ಹೇಗೆ ತಿಳಿದುಕೊಳ್ಳಬೇಕು? ಎಂಬ ವಿಚಾರ ಮಾಡುವುದು ಎಲ್ಲ ಬುದ್ಧಿಗೂ ಸಾಧ್ಯವಲ್ಲ. ಆದರೆ ದೇವರು ಒಬ್ಬನೆ, ಅವನು ಎಲ್ಲರಿಗೂ ತಂದೆ. ಅವನ ಮುಂದೆ ಎಲ್ಲರೂ ಸಮಾನರು, ಅವನ ಇಷ್ಟದಂತೆ ಜೀವನವನ್ನು ನಡೆಯಿಸಬೇಕು ಎಂದು ತಿಳಿದವರು ಹೇಳಿದರೆ ಅದನ್ನು ನಂಬಿ ಅದರಂತೆ ನಡೆಯುವುದು ಸಾಧ್ಯ. ಇದೇ ಭಕ್ತಿಮಾರ್ಗದ ಮೂಲ ಮಂತ್ರ. ಮುಖ್ಯ ಮತದಲ್ಲಿ ಯೋಗ್ಯತೆಗೆ ತಕ್ಕಂತೆ ದಾರಿಯೆಂದು ಭಾವನೆ. ಈ ಮತದಲ್ಲಿ ಎಲ್ಲರಿಗೂ ಒಂದೇ ದಾರಿ ಅಥವಾ ಈ ದಾರಿ ಎಲ್ಲರಿಗೂ ತಕ್ಕದ್ದು ಎಂಬುದು ಮುಖ್ಯ ಭಾವನೆ. ಸ್ಮಾರ್ತ ಮತದ ಮಧ್ಯದ ತಾಳನ್ನು ಬಿಡದಂತೆ ಎಲ್ಲರಿಗಾಗಿ ಈ ಮತವನ್ನು ಮುಖ್ಯವೆಂದು ಬೋಧಿಸಿ ದವರಲ್ಲಿ ರಾಮಾನುಜಾಚಾರ್ಯರು ಮೊದಲನೆಯವರೆಂದು ಹೇಳ ಬಹುದು. ಅವರ ಹಿಂದೆ ತಮಿಳು ನಾಡಿನಲ್ಲಿ ಆಳ್ವಾರುಗಳೆಂದು ಈ ಮತದ

ಆಚಾರ್ಯರು ಇದ್ದರು. ಅವರು ಅನುಷ್ಠಿಸಿದ್ದ ಮತವನ್ನು ರಾಮಾನುಜಾಚಾರ್ಯರು ಎಲ್ಲರಿಗಾಗಿ ಪ್ರಕಟಗೊಳಿಸಿದರು. ಇದನ್ನು ರಹಸ್ಯವಾಗಿ ಇಡಬೇಕೆಂದು ಗುರು ಹೇಳಿದಂತೆಯೂ ಆಚಾರ್ಯರು ಅವರ ಆಜ್ಞೆಯನ್ನು ಉಲ್ಲಂಘಿಸಿ ಅದನ್ನು ಪ್ರಕಟಿಸಿದರೆಂದೂ ಸಂಪ್ರದಾಯದಲ್ಲಿ ಹೇಳುತ್ತಾರೆ. ಇದು ಭಕ್ತಿ ಪಂಥದ ಮುಖ್ಯ ಲಕ್ಷಣ. ಎಲ್ಲರೂ ಮುಕ್ತರಾಗಬೇಕು, ಎಲ್ಲರಿಗೂ ಇದು ಸಾಧ್ಯ, ಶರಣಾಗತಿಯೇ ಇದಕ್ಕೆ ದಾರಿ, ಎಂದು ಈ ಮತದ ಗುರುಗಳೆಲ್ಲ ಹೇಳುತ್ತಾರೆ. ತಮಿಳು ನಾಡಿನಲ್ಲಿ ರಾಮಾನುಜಾಚಾರ್ಯರಿಂದ ಪ್ರಕಟವಾಗಿ ಭಕ್ತಿ ಮತವು ಭಾರತವರ್ಷದಲ್ಲೆಲ್ಲ ಹರಡಿತು. ಆಚಾರ್ಯರು ಕನ್ನಡನಾಡಿನಲ್ಲಿ ಸಂಚಾರಮಾಡಿದರು; ಅಲ್ಲಲ್ಲಿ ದೇವಾಲಯಗಳನ್ನು ಸ್ಥಾಪಿಸಿದರು; ಇಲ್ಲಿಯ ಕನ್ನಡದ ರಾಜನಾದ ವಿಷ್ಣುವರ್ಧನನನ್ನು ತಮ್ಮ ಮತಕ್ಕೆ ಸೇರಿಸಿಕೊಂಡು ಅವನ ಮೂಲಕ ಮತವನ್ನು ಪ್ರಚುರಮಾಡಿದರು. ಒಂದೆರಡು ದೇವಾಲಯಗಳಲ್ಲಿ ಪಂಚಮರಿಗೆ ಕೂಡ ಹೋಗಿಬರುವುದಕ್ಕೆ ಅಧಿಕಾರವನ್ನು ಆಚಾರ್ಯರು ಕಲ್ಪಿಸಿದರು.

ಹರಿದಾಸರು : ಪುರಂದರದಾಸರು

ಇದಾದ ಕೊಂಚಕಾಲದಲ್ಲಿಯೇ ಭಕ್ತಿಪಂಥದ ಈ ಏಳಿಗೆ ಕನ್ನಡ ನಾಡಿನಲ್ಲಿ ಮಧ್ವಾಚಾರ್ಯರಲ್ಲಿ ಮೂರ್ತಿಗೊಂಡಿತು. ಈ ಮತವು ಜನರ ಸೇವೆಗಾಗಿ ದಾಸಕೂಟವನ್ನು ಏರ್ಪಡಿಸಿತು. ಈ ಕೂಟಕ್ಕೆ ಮೂಲ ಪುರುಷರು ನರಹರಿತೀರ್ಥರೆಂದು ಹೇಳುತ್ತಾರೆ. ಅವರನಂತರ ವ್ಯಾಸರಾಯರು ಬಂದರು. ಪುರಂದರದಾಸರು ಇವರ ಶಿಷ್ಯರಂತೆ. ಹರಿದಾಸರ ಸಮುದಾಯದಲ್ಲಿ ಪುರಂದರದಾಸರು ಸಾರ್ವಭೌಮರು. ಇವರ ಹೆಸರಾದ ಮೇಲೆ ಕನಕದಾಸರು ಬಹಳ ದೊಡ್ಡ ಹೆಸರು. ಇವರಂತೆಯೇ ಇತರ ಹರಿದಾಸರು ಇನ್ನೂ ನೂರಾರು ಜನ ಬಂದರು; ಈ ಪದ್ಧತಿಯಲ್ಲಿ ಜನಕ್ಕೆ ತತ್ತ್ವವನ್ನು ಬೋಧಿಸಿದರು. ದಾಸಕೂಟದ ಮೂಲಪುರುಷರ ಪದ್ಯದಲ್ಲಿಯೇ ಅವರ ಪಂಥದ ಗುಣಗಳು ಕಾಣಬರುತ್ತವೆ. ಆದರೆ ಅದರ ವಿಸ್ತಾರವನ್ನು ತಿಳಿಯಬೇಕಾದರೆ ಪುರಂದರದಾಸರ ಪದಗಳನ್ನು ನೋಡಬೇಕು. ಇವರು ತ್ಯಾಗಿಗಳಾದದ್ದು ಹೇಗೆಂದು ಸಂಪ್ರದಾಯದಲ್ಲಿ

ಒಂದು ಕಥೆಯಿದೆ. ಇವರು ಮೊದಲು ಎಲ್ಲರಂತೆ ಸಂಸಾರಿಗಳಾಗಿದ್ದು ಆಮೇಲೆ ಬೇಸರಗೊಂಡು ನಿವೃತ್ತಿ ಮಾರ್ಗವನ್ನು ಹಿಡಿದಂತವರೆಂದು ಇದರಿಂದ ಕಾಣುತ್ತದೆ. ಇವರ ಗ್ರಂಥಗಳನ್ನು ನೋಡಿದರೂ ಹೀಗೆಂದೇ ಕಾಣುವುದು. ಇವರ ಪದ್ಯಗಳಲ್ಲಿ ಸಾಮಾನ್ಯನ ಜೀವನದ ಅರಿವು ಇದೆ. ಒಂದು ಸಲ ಇವರು ಅನಂತ ಅಪರಾಧ ಎನ್ನಲ್ಲಿ ಇರಲಾಗಿ ಬಿನ್ನಹಕೆ ಬಾಯಿ ಇಲ್ಲವಯ್ಯಾ ಎನ್ನುತ್ತಾರೆ. ಸಂಸಾರದಲ್ಲಿ ಭಂಗಪಟ್ಟರೆ ದೇವರ ಕಡೆಗೆ ಮನಸ್ಸು ತಿರುಗುವುದು ಎಂದು ಅಭಿಪ್ರಾಯ ಬರುವಂತೆ "ಹಂಗಿಸಿ ಹಂಗಿಸಿ ಎನಗೆ ಹರಿನಾಮ ಕಲಿಸಿದರು" ಎಂದು ಒಂದು ಸಂದರ್ಭದಲ್ಲಿ ಹೇಳುತ್ತಾರೆ. ಅದೇ ಅನುಭವ "ನಿನ್ನನೇ ನಂಬಿದೆನು ನೀನೆನ್ನ ಸಲಹಯ್ಯ" ಎಂಬ ಪದ್ಯದಲ್ಲಿಯೂ ಕಾಣುತ್ತದೆ. ಜೀವನದಲ್ಲಿ ಬಹಳ ಬೇಸರವಾದಾಗ "ಕಂಡು ಕಂಡು ಎನ್ನ ಕೈ ಬಿಡುವರೆ ಕೃಷ್ಣ" ಎಂದು ಮೊರೆ ಹೇಳಿದಾರೆ. ಕ್ಷಣವೊಂದು ಯುಗವಾಯಿತಂತೆ ಇವರಿಗೆ, ಇವರು ತೃಣಕ್ಕಿಂತ ಕಡೆಯಾದರಂತೆ. ಜನರನ್ನು ಉದ್ಧಾರಮಾಡಲು ತಮ್ಮ ಕೆಲಸವನ್ನು ಕೈಗೊಂಡ ಇವರು ಸೀಮೆಯನ್ನು ಸುತ್ತುವಲ್ಲಿ, ಹೋದಕಡೆ ಜನರಲ್ಲಿ ಆದರವಿಲ್ಲದಿರಲು "ಯಾಕೆನ್ನ ಈ ರಾಜ್ಯಕೆಳತಂದೆ ಹರಿಯೆ...." ಎಂದುಕೊಂಡಿರಬೇಕು. ಇನ್ನೊಂದು ಸಂದರ್ಭದಲ್ಲಿ "ಆರು ಬದುಕಿದರು ನಿನ್ನ ನಂಬಿ....ದೊರೆ ಪುರಂದರವಿಠಲ ನಿನ್ನ ನಂಬಿದರೆ ತಿರುಪೆಯೂ ಹುಟ್ಟಲೊಲ್ಲದು ಕೇಳು ಹರಿಯೇ...." ಎಂದು ಹೇಳಿದರು. ಭಕ್ತಿಯ ಮಾರ್ಗ ಸುಲಭವಲ್ಲ. ಬಸವಣ್ಣನವರು ಹೇಳಿದಂತೆ ಭಕ್ತಿ ಕರಗಸ: ಹೋಗುತ್ತ ಕೊಯ್ಯುವುದು, ಬರುತ್ತ ಕೊಯ್ಯುವುದು. ಆದರೆ ಇವರ ಮನಸ್ಸಿನ ಸಿದ್ಧಾಂತ "ವಾರಿಜನಾಭನ ಕರುಣವೆ ಸ್ಥಿರ! ಸಂಸಾರ ಎರವು ಕೇಳಾತ್ಮ" ಎಂಬ ಮಾತುಗಳಲ್ಲಿ ಸ್ಪಷ್ಟವಾಗಿ ಕಾಣುವುದು. ಪುರಂದರದಾಸರ ಅನುಭವ ಬಹಳ ವಿಸ್ತಾರವಾದದ್ದು. ಅವರ ಮಾತುಗಳಲ್ಲಿ ಈ ಅನುಭವದ ಬೆಳಕು ತುಂಬಿ ಅವುಗಳನ್ನು ಜ್ಯೋತಿರ್ಮಯವನ್ನಾಗಿ ಮಾಡಿದೆ. ವಿಸ್ತಾರವಾದ ಅನುಭವದಿಂದ ಇವರ ಭಾವನೆ ಉದಾರವಾಯಿತು. ಬೇರೆ ಬೇರೆ ಮಟ್ಟದ ಎಲ್ಲ ಜನರ ಮನೋಧರ್ಮವನ್ನೂ ಇವರು ಊಹಿಸಬಲ್ಲವ

ರಾಗಿದ್ದರು. ಸಂಸಾರವು ನೀರ ಕಡೆದಂತೆ ನಿಷ್ಪ್ರಯೋಜನವೆಂದು ಇವರ ಅಭಿಪ್ರಾಯವಾದರೂ "ಹಂಗಾಗಿರಬೇಕು. ಸಂಸಾರದಲ್ಲಿ ಹಿಂಗೆ ಬರೆದಿತ್ತು ಪ್ರಾಚೀನದಲ್ಲಿ...." ಎಂದು ಹೇಳಿದಾರೆ. ಹುಟ್ಟಿದ ಆವರಣದಲ್ಲಿ ತನ್ನ ಭಾಗಕ್ಕೆ ಬಂದ ಕೆಲಸವನ್ನು ಮಾಡಿಯೇ ಮನುಷ್ಯನು ಉದ್ಧಾರ ವಾಗಬೇಕು. ಸಂಸಾರದಲ್ಲಿಯೇ ಇದ್ದುಕೊಂಡು ಮುಕ್ತನಾಗಿರಬೇಕು. "ಈಸಬೇಕು ಇದ್ದು ಜೈಸಬೇಕು." ಮನಸ್ಸಿಗೆ ಸಮಾಧಾನ ಸ್ಥಿತಿ ಬಂದಮೇಲೆ ಅವರು ರಚಿಸಿದ ಗೀತೆಗಳಲ್ಲಿ "ನಾನಿನ್ನ ಧ್ಯಾನದೊಳಿರಲು ಹೀನ ಮಾನವರಿಂದ ಎನಗೇನಾಗುವುದು" ಎಂದು ಹೇಳಿದಾರೆ. ಪುರಂದರದಾಸರು ಎಲ್ಲರಂತೆ ಸಂಸಾರದ ದಾರಿಯಲ್ಲಿ ನಡೆದು ಈಸಿ ಜಯಿಸಿದರು. ಅವರ ಪದ್ಯಗಳಲ್ಲಿ ಒಂದು ಹಿರಿಯ ಜೀವನದ ಹೆಗ್ಗು ರುತುಗಳು ಸಿಕ್ಕುತ್ತವೆ. ಬರಿಯ ಅವರ ಪದ್ಯಗಳನ್ನೇ ತೆಗೆದುಕೊಂಡು ಒಂದು ಜೀವನ ಧರ್ಮಶಾಸ್ತ್ರವನ್ನೇ ರಚಿಸಬಹುದು. ಅವರ ಜ್ಞಾನವು ಸರ್ವ ವ್ಯಾಪಿ. ಅವರ ಭಕ್ತಿ ಅಗಾಧವಾದದ್ದು; ಎಲ್ಲರೊಡನೆ ನಡೆದು ಅವರ ಮಾತು ಸರಳವಾಗಿ ಸುಲಭವಾಗಿ ಎಲ್ಲರ ಹೃದಯವನ್ನು ಹೊಗು ವಂತಾಗಿತ್ತು. ಸಾಮಾನ್ಯ ಜನರಲ್ಲಿ ಹುಟ್ಟಿ ವೇದಾಂತಿಗಳಾದದ್ದರಿಂದ ಇವರು ವೇದಾಂತದ ಸಾರವನ್ನೇ ಜನರ ತಿಳಿವಿನಲ್ಲಿ ಕಲೆಸಿಹೋದರು.

ದಾಸರ ಜೀವನ ಧರ್ಮಶಾಸ್ತ್ರ

ಪುರಂದರದಾಸ ಕನಕದಾಸರ ಅನಂತರ ಬಂದ ದಾಸರೂ ಅವರವರ ಅನುಭವವನ್ನು ದೇವರ ಕೀರ್ತನೆಗಳಲ್ಲಿ ಬರೆದಿಟ್ಟಿದಾರೆ. ಆತ್ಮೀಯ ವಾದ ಅನುಭವವನ್ನೂ ಭಾವನೆಗಳನ್ನೂ ಬರೆಯುವುದು ಹೀಗೆ ಒಂದು ಸಂಪ್ರದಾಯವಾಯಿತು: ಗುರುವಿನಿಂದ ಶಿಷ್ಯ, ಶಿಷ್ಯನಿಂದ ಪ್ರಶಿಷ್ಯ; ಹೀಗೆ ಹಿರಿಯರ ಮಾತು ಬೀದಿ ಬೀದಿಯಲ್ಲಿಯೂ ಹಾಡಿನಲ್ಲಿ ಕೇಳ ಬಂದಿತು. ಹರಿದಾಸರಿಂದ ಹೀಗೆ ಸಂಪ್ರದಾಯವಾದ ಜೀವನ ತತ್ತ್ವ ವನ್ನು ಜನರಲ್ಲಿ ವಾಡಿಕೆಯಲ್ಲಿರುವ ಕೆಲವು ಹಾಡುಗಳಿಂದ ನಾವು ತಿಳಿಯ ಬಹುದು. "ನರ ಜನ್ಮ ಸುಖವಿಲ್ಲ. ಮೈ ಒಂದು ಹಿರಿಯವಸ್ತುವಲ್ಲ. ಬದುಕು ನಿತ್ಯವಲ್ಲ. ಇದನ್ನು ತಿಳಿಯದವನು ಸಂತೆಗೆ ಬಂದ ಕುರುಡು

ನಾಯಂತೆ ಬಾಳನ್ನು ಹಾಳುಮಾಡಿಕೊಳ್ಳುವನು. ಐಶ್ವರ್ಯ ಸ್ಥಿರವಲ್ಲ, ಮನುಷ್ಯರಿಗೆ ಚಿಂತೆ ತಪ್ಪಿದ್ದಲ್ಲ. ವೇಷದಿಂದ ಪ್ರಯೋಜನವಿಲ್ಲ. ನಿಜವಾದ ನೇಮ ಮಾಡು. ಸರಿಯಾದುದನ್ನು ಮಾಡುವುದಕ್ಕೆ ನಾಚಿಕೆಪಡಬೇಡ. ಸಾಧನೆಯದಾರಿ ತಿಳಿದೇ ಇದೆ. ಎಲ್ಲವನ್ನೂ ಭಗವಂತನಲ್ಲಿ ಅರ್ಪಿಸು. ತಪಸ್ಸು ಅವಶ್ಯಕವಿಲ್ಲ. ಈ ದೇಹವನ್ನು ದಂಡಿಸಿ ಪ್ರಯೋಜನವಿಲ್ಲ. ಮನುಷ್ಯನಿಗೆ ದೇವರಿಲ್ಲದೆ ಹಿಂದಿಲ್ಲ, ಮುಂದಿಲ್ಲ. ಅವಸರ ಬೇಕಾದರೆ ಬಡತನವಿಲ್ಲ. ಶರಣಾಗತನಾಗು. ಬಿಡೆ ನಿನ್ನ ಪಾದವ ಎಂದು ಹರಿಯ ಪಾದವನ್ನು ಹಿಡಿ. ಇದರಿಂದ ಒಳ್ಳೆಯದು ಖಂಡಿತ ಬರುತ್ತದೆ. ರಂಗಯ್ಯನನ್ನು ನಂಬಿ ಕೆಟ್ಟವರಿಲ್ಲ. ನಂಬದೆ ಕೆಟ್ಟವರುಂಟು. ಒಳ್ಳೆಯವರಂತೆ ನಡೆ. ನಡೆಯುತ್ತೇನೆಂದು ಆಣೆಯಿಟ್ಟುಕೊ. ಹೀಗೆ ಮಾಡಿದಮೇಲೆ ಧೈರ್ಯವಾಗಿರು. ಬಂದದ್ದೆಲ್ಲಾ ಬರಲಿ ಗೋವಿಂದನ ದಯೆ ಒಂದಿರಲಿ."

ದೇವರ ನಾಮುಗಳಲ್ಲಿ ಜನರಿಗೆ ಜೀವನದಲ್ಲಿ ನಡೆಯಬೇಕಾದ ದಾರಿ ತಿಳಿದುದಲ್ಲದೆ ಬದುಕಿನಲ್ಲಿರುವ ಸೊಗಸು ಅನೇಕ ಸೂಕ್ಷ್ಮ ತತ್ತ್ವಗಳೂ ತಿಳಿದುವು. "ನೀಮಾಯೆಯೊಳಗೊ ನಿನ್ನೊಳು ಮಾಯೆಯೊ" ಎನ್ನುವ ಪದ್ಯದಲ್ಲಿ ಕನಕದಾಸರು ವೇದಾಂತದ ಕೊನೆಯ ಮಾತನ್ನು ಸಾಮಾನ್ಯವಾದ ನುಡಿಯಲ್ಲಿ ವಿವರಿಸಿಬಿಟ್ಟಿದಾರೆ. ಇವರೇ ರಚಿಸಿರುವ "ತನು ನಿನ್ನದು ಜೀವನು ನಿನ್ನದೋ" ಎಂಬ ಪದ್ಯದಲ್ಲಿ "ಸ್ವಾತಂತ್ರ್ಯವೆನ್ನುವುದು ದೇವರದು. ಮನುಷ್ಯನಿಗಿರುವುದು ಪಾರತಂತ್ರ್ಯ ಮಾತ್ರ. ನಮ್ಮ ಎಲ್ಲ ಕರ್ಮವೂ ದೇವರಿತ್ತ ಶಕ್ತಿಯಿಂದ ಅವನ ಪ್ರೇರಣೆಯಂತೆ ನಡೆಯುತ್ತದೆ," ಎಂಬುದು ಹೃದಯಂಗಮವಾಗಿ ವಿವರಿಸಲ್ಪಟ್ಟಿದೆ. ಇಷ್ಟೇ ಅಲ್ಲದೆ "ಭಾಗ್ಯದ ಲಕ್ಷ್ಮಿಬಾರಮ್ಮ" ಎಂದು ಲಕ್ಷ್ಮಿದೇವಿಯರನ್ನು ಸ್ತೋತ್ರಮಾಡುವ ಪದ್ಯದಲ್ಲೂ, "ಶ್ರೀಶ ಕೊಳಲನೂದುತ ಬಂದ," "ಕೊಳಲನೂದುವ ಚದುರನಾರೇ ಪೇಳಮ್ಮಯ್ಯ," "ಕೃಷ್ಣಮೂರ್ತಿ ಕಣ್ಣಮುಂದೆ ನಿಂತಿದ್ದಂತಿದೆ" ಮುಂತಾದ ಕೃಷ್ಣದೇವರನ್ನು ವರ್ಣಿಸುವ ಪದ್ಯಗಳಲ್ಲಿಯೂ ಜನರಿಗೆ ಸುಂದರವಾದ ಕಾವ್ಯದ ಸುಖ ದೊರೆತಿತು. ಹೀಗೆ ಹರಿದಾಸರ ಪಂಥದ ಉತ್ತಮ ಕೃತಿಗಳಿಂದ ಜನರು ಉದಾತ್ತ

ವಾದ ನೀತಿಯನ್ನು ಕಲಿತರು; ಉತ್ತಮ ಸಾಹಿತ್ಯವನ್ನು ಪಡೆದರು, ಗಹನವಾದ ತತ್ತ್ವವನ್ನು ತಿಳಿದರು.

ಹರಿದಾಸರ ಕತೆಗಳು

ವೈಷ್ಣವ ಸಂಪ್ರದಾಯದ ಅನೇಕ ಮುಖ್ಯತತ್ತ್ವಗಳು ಜನರಲ್ಲಿ ದಾಸರನ್ನು ಕುರಿತ ಹಲವು ಕತೆಗಳಿಂದ ಹರಡಿವೆ. ದೇವರು ಎಲ್ಲಾ ಕಡೆ ಯಲ್ಲಿಯೂ ಇದ್ದಾನೆ ಎಂಬುದು, ಕನಕದಾಸರಿಗೆ ಅವರ ಗುರು ಒಂದು ಹಣ್ಣು ಕೊಟ್ಟು ಯಾರೂ ಇಲ್ಲದ ಕಡೆ ತಿನ್ನು ಎಂದು ಹೇಳಿದಾಗ, ಅವರು ಎಲ್ಲಾ ಕಡೆಯೂ ದೇವರಿದ್ದಾನೆ, ಎಲ್ಲಿಯೂ ತಿನ್ನಲಾಗಲಿಲ್ಲ ಎಂದು ಹೇಳಿದರು, ಎನ್ನುವ ಕತೆಯಲ್ಲಿ ಗರ್ಭಿತವಾಗಿದೆ. ಯಾವ ಭೂತಕ್ಕೆ ತೃಪ್ತಿಯಾದರೂ ಭಗವಂತನಿಗೇ ತೃಪ್ತಿ ಎನ್ನುವ ಮಾತು ಕನಕದಾಸರು ರೊಟ್ಟಿಯನ್ನು ಕದ್ದ ಒಂದು ನಾಯಿಗೆ ಬೆಲ್ಲವನ್ನು ತೆಗೆದುಕೊಂಡು ಹೋಗಿ ಕೊಟ್ಟರು ಎಂಬ ಕತೆಯಲ್ಲಿ ಗರ್ಭೀಕೃತವಾಗಿದೆ. ಎಲ್ಲರ ಅಂತರಂಗ ದಲ್ಲಿಯೂ ಒಬ್ಬನೇ ದೇವರು, ಅಪರೋಕ್ಷ ಜ್ಞಾನಿಗಳಿಗೆ ಒಬ್ಬರ ಮನಸ್ಸಿನ ಯೋಚನೆ ಇನ್ನೊಬ್ಬರಿಗೆ ತಿಳಿಯುತ್ತದೆ ಎಂಬುದು ಕನಕದಾಸರ ಮಾನಸ ಪೂಜೆಯ ಕತೆಯಲ್ಲಿ ಗರ್ಭೀಕೃತವಾಗಿದೆ. ಕುಲ ಹಿರಿಯದಲ್ಲ, ಯೋಗ್ಯತೆ ಹಿರಿಯದು, ಎನ್ನುವುದು ಕನಕನ ಕಿಂಡಿಯ ಕತೆಯಿಂದ ವ್ಯಕ್ತವಾಗುವುದು. ಅಹಂಕಾರ ಹೋದರೆ ಮುಕ್ತಿಯೆನ್ನುವುದು ಕನಕದಾಸರು ಗುರುವಿಗೆ, ನಾನು ಹೋದರೆ ಮುಕ್ತಿಗೆ ಹೋಗುತ್ತೇನೆ, ಎಂದು ಹೇಳಿದರು ಎಂಬ ಕತೆಯಿಂದ ವ್ಯಕ್ತವಾಗುತ್ತದೆ. ಇಂಥ ಕತೆಗಳು ಹರಿಕತೆಗಳ ಮೂಲಕ ಜನರಲ್ಲೆಲ್ಲ ಹರಡಿ ಈ ಪಂಥದ ತತ್ತ್ವಗಳು ಜನರ ಬದುಕಿನಲ್ಲಿ ಕಲೆತವು. ಅಲ್ಲದೆ ಭಕ್ತಿಮಾರ್ಗದ ಸಾರ ವಿಷಯವನ್ನು ಕನಕದಾಸರೂ ಜಗನ್ನಾಥ ದಾಸರೂ ಹರಿಭಕ್ತಿಸಾರ ಹರಿಕಥಾಮೃತಸಾರ ಎಂಬ ಗ್ರಂಥಗಳಲ್ಲಿ ಸೇರಿಸಿಟ್ಟು ಎಲ್ಲರಿಗೂ ಕಾವ್ಯವಾಗಿ ದೊರೆಯುವಂತೆ ಮಾಡಿದರು.

ಸುಲಭ ಕಾವ್ಯಗಳು: ಸಾಂಗತ್ಯಗಳು

ವೀರಶೈವ ಮತದಿಂದಲೂ ಹರಿದಾಸರ ಕೂಟದಿಂದಲೂ ತಿಳಿವು ಎಲ್ಲರಿಗೂ ಬೇಕಾದಷ್ಟೆಂಬ ಭಾವನೆಯಲ್ಲಿ ಸ್ವಲ್ಪ ಕೆಲಸ ನಡೆದಮೇಲೆ

ಸಾಮಾನ್ಯರಿಗಾಗಿ ಬರೆದ ಒಂದು ಸಾಹಿತ್ಯವೂ ಆರಂಭವಾಯಿತು. ಸಂಸ್ಕೃತದ ವೃತ್ತವು ಎಷ್ಟೇ ಸುಲಭವಾದರೂ ಸಾಮಾನ್ಯರಿಗೆ ತಿಳಿಯುವುದು ಕಷ್ಟ. ಅದರಲ್ಲಿ ಮಾತಿನ ಕಟ್ಟು ಬಿಗಿ; ಸಂಪ್ರದಾಯದಲ್ಲಿ ಸಂಸ್ಕೃತದ ಸಮಸ್ತ ಪದಗಳನ್ನು ಹೆಚ್ಚಾಗಿ ಹಾಕುವುದು ವಾಡಿಕೆಗೆ ಬಂದಿದೆ. ಷಟ್ಪದಿಯಲ್ಲಿ ಮಾತು ಆಡುವ ಮಾತಾಗಿರುತ್ತದೆ. ಇನ್ನು ಸ್ವಲ್ಪ ಕಾಲವಾದ ಮೇಲೆ ಸಾಂಗತ್ಯಗಳ ಬರಹ ವಾಡಿಕೆಗೆ ಬಂದಿತು. ಹೀಗೆ ವಾಡಿಕೆಯಾದ ಕಾವ್ಯಗಳಲ್ಲಿ ಕುಮಾರವ್ಯಾಸ ಭಾರತ, ಜೈಮಿನಿ ಭಾರತ, ಸಾಂಗತ್ಯಗಳಲ್ಲಿ ಕನಕದಾಸರ ಮೋಹನತರಂಗಿಣಿ ಇವು ಮುಖ್ಯ. ಈ ಕಾವ್ಯಗಳ ವಿಷಯ ಹೆಚ್ಚಾಗಿ ಹೇಳಬೇಕಾದದ್ದಿಲ್ಲ. ಕೇವಲ ಕವಿತೆಯಿಂದೇ ನೋಡಿದರೆ ಜೈಮಿನಿ ಭಾರತದ ಪದ್ಯಗಳೂ ಕುಮಾರವ್ಯಾಸನ ಪದ್ಯಗಳೂ ಅತ್ಯುತ್ತಮ ತರಗತಿಗೆ ಸೇರುತ್ತವೆ. ಸಂಸಾರದ ಚಿತ್ರವನ್ನು ಸ್ಫುಟವಾಗಿ ನೀತಿಬೋಧಕವಾಗಿ ಚಿತ್ರಿಸುವುದರಲ್ಲಿ ಕುಮಾರವ್ಯಾಸನಿಗಿಂತ ಹಿರಿಯ ಚಿತ್ರಕಾರರು ಇಲ್ಲವೆನ್ನಬಹುದು. ಅವನೇ ಹೇಳಿರುವಂತೆ, ಅವನ ಕಾವ್ಯವು ಅರಸುಗಳಿಗೆ, ವೀರ ದ್ವಿಜರಿಗೆ ವೇದಸಾರ, ಮಂತ್ರಿಗಳಿಗೆ ಬುದ್ಧಿಸಾರ, ಎಲ್ಲರಿಗೆ ಎಲ್ಲವೂ ಆಗಿದೆ. ಎಂದರೆ ಈ ಕಾವ್ಯವು ಕರ್ಣಾಟಕದ ಆಗಣ ಜೀವನದ ವಿಶ್ವಕೋಶವೆನ್ನಬಹುದು. ಕನಕದಾಸರ ಮೋಹನತರಂಗಿಣಿಯನ್ನು ನಾನು ಯಾವಾಗಲಾದರೂ ಸ್ವಲ್ಪ ಕೇಳಿದ್ದು ಎಷ್ಟೋ ಅಷ್ಟೆ. ಇದನ್ನು ಹೆಂಗಸರು ಹೇಳುತ್ತಾರೆ. ಇದರಲ್ಲಿ ಎಲ್ಲ ವಿಷಯವೂ ಬಂದಿರುವಂತೆ ಕಾಣುತ್ತದೆ. ಮುಖ್ಯ ಹೆಂಗಸರಿಗೆಂದೇ ಬರೆದುವಾದರೂ ಸಾಂಗತ್ಯಗಳು ನೀರಸವಾಗಿಯಾಗಲಿ ಅಸಡ್ಡೆಯಿಂದಾಗಲಿ ಬರೆದ ಕಾವ್ಯಗಳಲ್ಲ. ಜೈನಕವಿ ರತ್ನಾಕರನಿಂದ ರಚಿತವಾದ ಭರತೇಶ ವೈಭವ ಇಂಥ ಒಂದು ಕಾವ್ಯ. ಅದರ ವರ್ಣನೆಗಳು ಆಶ್ಚರ್ಯವಾಗುವಂತಿವೆ. ಯಾವ ವಿಷಯವನ್ನು ತೆಗೆದುಕೊಂಡರೂ ಕವಿ ಅದನ್ನು ಕೊನೆಮುಟ್ಟಿಸಿಬಿಟ್ಟಿದಾನೆ. ನಾಟಕದ ವಿಚಾರ, ಆರೋಗಣೆಯ ವಿಚಾರ, ಸರಸದ ವಿಚಾರ, ಎಲ್ಲವೂ ಅಂದವಾಗಿ ಬಂದಿದೆ. ಮುಖ್ಯ ಈ ಕಾವ್ಯವನ್ನು ಚೆನ್ನಾಗಿ ಓದಿದರೆ ಆಗಿನ ಜನರಿಗೆ ಸಂಪೂರ್ಣವಾದ ಪ್ರಪಂಚಜ್ಞಾನ ಉಂಟಾಗುತ್ತಿದ್ದಿತೆಂದು

ತೋರುತ್ತದೆ. ಭರತೇಶ ವೈಭವವನ್ನು ದಿನವೂ ಹೇಳಿ ಕೇಳಿ ಕಂಡಿದ್ದ ಹೆಂಗಸರೂ ಗಂಡಸರೂ ಸಂಸಾರದಲ್ಲಿ ಹೇಗೆ ನಡೆಯಬೇಕೆಂಬುದನ್ನು ಕಲಿಯುತ್ತಿದ್ದರೆಂದು ನಾವು ಖಂಡಿತವಾಗಿ ಹೇಳಬಹುದು. ಹೀಗೆಯೇ ಕುಮಾರವ್ಯಾಸನ ಭಾರತವನ್ನು ಓದಿ ಕೇಳಿ ಧರ್ಮನ ನಡತೆ ಶ್ರೀಕೃಷ್ಣನ ನಡತೆಯನ್ನು ಕುರಿತು ಯೋಚಿಸಿಯೇ ನಮ್ಮ ಜನರು ಗ್ರಾಮಗಳಲ್ಲಿ ಗಂಭೀರವಾಗಿ ಮರ್ಯಾದೆಯಿಂದ ನಡೆದುಕೊಳ್ಳುವುದನ್ನು ಕಲಿಯುತ್ತಿದ್ದರು. ಈ ಭಾರತದಲ್ಲಿ ಶ್ರೀಕೃಷ್ಣನು ಹಿರಿಯ ನಾಯಕನಂತೆ ಆಡುವ ಮಾತುಗಳೆಲ್ಲ ಕರ್ಣಾಟಕದ ಯಾವನೊಬ್ಬ ದೊಡ್ಡ ಮನುಷ್ಯನು ಆಡುವ ಮಾತುಗಳೆಂದೇ ಭಾವಿಸುವುದು ಸಾಧ್ಯವಾಗುತ್ತದೆ. ಮಾತಿನ ರೀತಿ ಹಾಗಿದೆ. ಹೀಗೆ ಕಾವ್ಯಗಳಲ್ಲಿ ಕವಿಗಳು ಜನದ ನಡತೆಯನ್ನು ಚಿತ್ರಿಸಿದರಲ್ಲದೆ ಅವುಗಳಿಂದ ಜನರಿಗೆ ನೀತಿಯ ಆದರ್ಶಗಳನ್ನು ಮಾಡಿಟ್ಟರು.

ಜನದ ಲಾವಣಿ ಸಾಂಗತ್ಯಗಳು

ವಿದ್ಯಾವಂತರು ಈ ರೀತಿಯಲ್ಲಿ ಕೆಲಸಮಾಡುತ್ತಿರುವ ಜನರಲ್ಲಿ ಅರಿವಿನ ಸಂಪ್ರದಾಯ ಜೀವಂತವಾಗಿರುತ್ತದೆ. ಹೀಗೆ ಜೀವಂತವಾಗಿರುವ ಜನರಲ್ಲೆಲ್ಲ ವಿದ್ಯಾವಂತರು ಕಾವ್ಯಗಳನ್ನು ರಚಿಸುತ್ತಿರುವಂತೆಯೇ ಅವಿದ್ಯಾವಂತರು ರಚಿಸುತ್ತಿರುತ್ತಾರೆ. ಅನೇಕ ಸಂದರ್ಭದಲ್ಲಿ ವಿದ್ಯಾವಂತರು ಜನರಿಗೆ ಬೇಕಾದ ಕಾವ್ಯಗಳನ್ನು ರಚಿಸದೆಹೋದರೂ ಅವಿದಾದ್ಯವಂತರೇ ಆ ಕೆಲಸವನ್ನು ಮಾಡಿಕೊಳ್ಳುತ್ತಾರೆ. ಹೀಗೆ ಇಂಗ್ಲೀಷ್ ಸಾಹಿತ್ಯದಲ್ಲಿ ೧೫ನೇ ಶತಮಾನದಲ್ಲಿ ಸಾಂಗತ್ಯಗಳು ಅನೇಕವಾಗಿ ರಚಿತವಾದುವು. ಹೀಗೆ ನಮ್ಮ ಸೀಮೆಯಲ್ಲಿ ಎಲ್ಲ ಕಡೆಯಲ್ಲೂ ಕಾವ್ಯ ರಚನೆ ಆಗಿದೆ. ಈ ವಿಷಯವನ್ನು ಕುರಿತ ಒಂದು ಉಪನ್ಯಾಸದಲ್ಲಿ ನಾನು ಕೋಲಾರ ತುಮಕೂರು ಕಡೆಯ ಮುದ್ದಲಗುಮ್ಮನ ತೆಲುಗು ಪದಗಳನ್ನೂ, ಮೈಸೂರಿನ ಕಡೆಯ ಗಂಜಾಂ ಲಾವಣಿ, ಧಾರವಾಡದ ಕಡೆಯ "ಗೆಳತಿ ಕರೆಯುತ್ತಾಳೆ" "ಕರ್ಣಾಟಕದ ಹೆಣ್ಣೇ," ಚಿಕ್ಕಮಗಳೂರಿನ ಕಡೆಯ ಮಲೆನಾಡಿನ ಲಾವಣಿಗಳು, ಸೀರ್ಯದ ಕಡೆಯ ಜೋಗಿಯ ಭಾರತದ ಹಾಡು, ಇಂಥ ಹಲವು ಕವಿತೆಗಳನ್ನು ಕುರಿತು ಪ್ರಸ್ತಾಪ

ಮಾಡಿದೇನೆ. ಈಚೆಗೆ ಮುದ್ದುಲಗುಮ್ಮನ ಪದಗಳು ಇನ್ನೂ ಕೆಲವನ್ನೂ ಇತರ ಪದ್ಯಗಳನ್ನೂ ಕೇಳಿದೇನೆ. ನಮ್ಮ ಮಿತ್ರರಾದ ಧಾರವಾಡದ ಗೆಳೆಯರ ಗುಂಪಿನ ಕವಿಗಳು ಉತ್ತರ ಕರ್ಣಾಟಕದ ಹಲವು ಪದ್ಯಗಳನ್ನು ಸಂಗ್ರಹಮಾಡಿ ಜಯಕರ್ಣಾಟಕದಲ್ಲಿ ಪ್ರಕಟಿಸಿದಾರೆ. ಸಂಪ್ರದಾಯ ಸಜೀವವಾಗಿದ್ದರೆ ಕಾವ್ಯ ಬಂದರೂ ಬಾರದಿದ್ದರೂ ಕವನ ನಿಲ್ಲದೆ ನಡೆಯುತ್ತದೆ. ಕೆಲವು ವರ್ಷಗಳ ಹಿಂದೆ ಕೊರಟಗೆರೆಯಲ್ಲಿ ಶಾಸ್ತ್ರಿಗಳೊಬ್ಬರು ಗುತ್ತಿಗೆಯ ಮನುಷ್ಯ ಗುತ್ತಿಗೆ ಧಾನ್ಯ ಸರಿಯಾಗಿ ಕೊಡದ ಸಂದರ್ಭದಲ್ಲಿ ಅಮಲ್ದಾರ್ ವೀರಾಸಾಮಿ ಮೊದಲಿಯಾರ್ರಿಗೆ ಅರ್ಜಿ ಬರೆಯಬೇಕಾದರೆ ಒಂದು ಕಗ್ಗ ಬರೆದರು. ಇದನ್ನು ನಾನು ಓದಿ ಕೇಳಿದೇನೆ. ಮೈಸೂರಲ್ಲಿ ಕರಿಬಸವಶಾಸ್ತ್ರಿಗಳೆನ್ನುವವರು ಮನೆಯಲ್ಲಿ ಕಳವಾಗಿ ಪೋಲೀಸಿನವರಿಂದ ವಸ್ತು ಪತ್ತೆಯಾಗಲಿಲ್ಲವೆಂದು ಶ್ರೀಮನ್ಮಹಾರಾಜರಿಗೆ ಅರ್ಜಿ ಹಾಕಬೇಕಾದರೆ ಷಟ್ಪದಿಯಲ್ಲಿ ಬರೆದರು. ಕವನ ಸಂಪ್ರದಾಯ ಜೀವಂತವಾಗಿರುವ ಕಡೆಯಲ್ಲೆಲ್ಲ ಜನದಲ್ಲಿಯೂ ಸಹಜವಾಗಿ ಕಾವ್ಯ ಸೃಷ್ಟಿಯಾಗುತ್ತಿರುತ್ತದೆ. ಜನಸಾಮಾನ್ಯದ ಕಾವ್ಯವೆಂದಮಾತ್ರಕ್ಕೆ ಕವನ ಸಾಮಾನ್ಯವೆಂದು ಭಾವಿಸಬೇಕಾದದ್ದಿಲ್ಲ. ಜನದ ಬದುಕು ವಾಸ್ತವವಾಗಿ ನಡೆದಷ್ಟು, ಜನದ ನಯ ಆಳವಾಗಿ ಇಳಿದಷ್ಟು, ಜನದ ನುಡಿಗೆ ಭಾವ ವ್ಯಂಜನೆಯ ಶಕ್ತಿಯೂ ಸೊಗಸೂ ಸೇರೆಯುವುವು. ಧಾರವಾಡದ ಕಡೆಯ ಒಂದು ಪದ್ಯವನ್ನು ಉದಾಹರಿಸಿ ಈ ವಿಷಯವನ್ನು ವ್ಯಕ್ತಪಡಿಸಬಹುದು. "ಜನಕರಾಯನ ಮಗಳು ವನಕೆ ತೊಟ್ಟಿಲಕಟ್ಟಿ ಕುಶಲವರನಿಟ್ಟು ತ್ಯ್ಯಾಗ್ಯಾಳೋ ಸೀತಾದೇವಿ ನಗುತೆ ವನವಾಸ ಕಳೆದಾಳೋ." ಜನಕರಾಯನ ಮಗಳು ಎನ್ನುವಲ್ಲಿ ಕವಿ ಆಕೆಯ ತೌರಸೌಭಾಗ್ಯವೆಂತದೆಂದು ಸೂಚಿಸುತ್ತಾನೆ, ದಶರಥರಾಯನ ಸೊಸೆ ಎಂದು ಹೇಳಿಲ್ಲ; ಸೊಸೆಗೆ ಮಾವನ ಹಿರಿಮೆಯಲ್ಲಿ ಭಾಗವಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ಯಾವ ಹೆಣ್ಣು ಮಗುವಿಗೂ ತೌರುಮನೆಯ ಕನಿಕರ ಬೆನ್ನ ಹಿಂದೆಯೇ ಬರುತ್ತದೆ. ಇದು ನಮ್ಮ ನಾಡು ನಮ್ಮ ಮನೆಗಳ ಸಂಪ್ರದಾಯವನ್ನು ಸೂಚಿಸುತ್ತದೆ. ಇಂಥ ಐಶ್ವರ್ಯದ ಮಗಳು ವನಕೆ ತೊಟ್ಟಿಲ ಕಟ್ಟಿದಳಂತೆ. ಕಂಬಕ್ಕೆ ಸಂಸಾರ ಮಾಡುವುದೇ ಎನ್ನುವಂತೆ ವನಕ್ಕೆ

ತೊಟ್ಟಿಲು ಕಟ್ಟುವುದು ಎನ್ನುವಲ್ಲಿ ಕನ್ನಡ ನುಡಿಯ ಒಂದು ಹದಿರು ಕಾಣುತ್ತದೆ. ಮಾತಿನ ಅರ್ಥ ಅಗಾಧವಾಗಿ ಹೋಗುತ್ತದೆ. ಅರಮನೆಗೆ ಅಲ್ಲ ವನಕ್ಕೆ; ಮರಕ್ಕೆ ಅಲ್ಲ ವನಕ್ಕೆ; ಇಂದು ಒಂದು ಮರ, ನಾಳೆ ಒಂದು ಮರ. ಅಲ್ಲದೆ ಉದ್ಯಾನದಲ್ಲಿ ಗಾಳಿ ಬೀಸುವಂತೆ ವಿನೋದ ವಾಗಿರುವಂತೆ ಮರಕ್ಕೆ ಎಂದು ಎಣಿಸಬಾರದು. ವನಕ್ಕೆ; ಕಾಡಿಗೆ; ಕಾಡಿನಲ್ಲಿ ವಾಸಮಾಡುವ ಇರುಳಿಗ ಸೋಲಿಗರಂತೆ ಅಥವಾ ಮನೆ ಯಿಲ್ಲದೆ ಅಲೆಯುವ ಕೊರಮ ಕೊರಚ ಹಂದಿಜೋಗಿಗಳಂತೆ, ಈ ರಾಜ ಪುತ್ರಿ ಮಗುವನ್ನು ತೂಗುವ ತೊಟ್ಟಿಲನ್ನು ಕಾಡಿನ ಮರಕ್ಕೆ ಕಟ್ಟಿದಳು. ಅದರಲ್ಲಿ ಕುಶಲವರನ್ನಿಟ್ಟು ತೂಗಿದಳು ಎಂದರೆ ತನ್ನ ನೋವನ್ನು ಬಹಳ ನೆನೆದಿರಬೇಕಲ್ಲವೆ? ಇಲ್ಲ. ತನ್ನ ಮಕ್ಕಳೆರಡನ್ನೂ ಆ ತೊಟ್ಟಿಲಲ್ಲಿಟ್ಟು ತೂಗುತ್ತ—ತೂಗಲು ಚೀಟಿಯಿಲ್ಲ, ಇದ್ದರೂ ಆಕೆ ಬಿಡುತ್ತಾ ಇರಲಿಲ್ಲ, ಮಾತೆಯ ಮಮತೆ ಹಿರಿದು—ನಗುತ ವನವಾಸ ಕಳೆದಳು. ಮಕ್ಕಳನ್ನು ನೋಡುತ್ತಾ ನೋವನ್ನು ಮರೆಯಿಸಿಕೊಂಡಳು. ನಗು ಮಾತ್ರ ಕಾಣು ತ್ತಿತ್ತು. ಕವಿ ಮೊದಲಲ್ಲಿ ಕತ್ತಲ ತೆರೆಯನ್ನು ಬರೆದು ಅದರ ಮೇಲೆ ಲೋಕಮಾತೆಯ ಈ ಹಸನ್ಮುಖವನ್ನು ಹಚ್ಚಿದಾನೆ. ಆ ನಗೆಯ ಹಿಂದೆ ಹಿರಿದಾದ ಅಳಲು ಕಾಣುತ್ತಿದೆ. ಇಲ್ಲಿ ಕಾಣುವ ಭಾವನೆಯ ಸೊಗಸೂ ಮಾತಿನ ಚಾತುರ್ಯವೂ ಅಸಾಧಾರಣವಾದುವು. ಇಂಥ ಅಸಾಧಾರಣ ವಾದ ಕಾವ್ಯಶಕ್ತಿ ನಮ್ಮಲ್ಲಿ ಸಾಧಾರಣವಾಗಿತ್ತು ಎನ್ನುವುದು ನಾಡ ಪದಗಳನ್ನು ನೋಡಿದವರಿಗೆಲ್ಲ ಕಾಣುವುದು. ಗೆಳೆಯರ ಗುಂಪಿನಿಂದ ಪ್ರಕಟವಾಗಿರುವ ಪದ್ಯಗಳಲ್ಲಿ ನಮ್ಮ ನಾಡ ಹೆಣ್ಣುಮಕ್ಕಳ ಮನಸ್ಸು ಎಷ್ಟು ಅಚ್ಚ ಎಷ್ಟು ಎಳಸು ಎಷ್ಟು ಸರಸ ಎನ್ನುವುದು ತಿಳಿಯುತ್ತದೆ; ನಮ್ಮ ನಾಡ ತಾಯಂದಿರು ತಮ್ಮ ಮಕ್ಕಳನ್ನು ಎಷ್ಟು ಪ್ರೀತಿಯಿಂದ ಕಾಣುತ್ತಾರೆ, ಅವಕ್ಕಾಗಿ ಎಷ್ಟು ಕಷ್ಟವನ್ನು ಸಹಿಸುತ್ತಾರೆ, ಅವು ಗಳಲ್ಲಿ ಎಷ್ಟು ಸುಖಗಳನ್ನು ಕಾಣುತ್ತಾರೆ ಎನ್ನುವುದು ತಿಳಿಯುತ್ತದೆ; ಗಂಡನಿಗೆ ಹೆಂಡತಿಯಲ್ಲಿ ಹೆಂಡತಿಗೆ ಗಂಡನಲ್ಲಿ ಎಷ್ಟು ಹಿರಿದಾದ ಪ್ರೇಮ ವಿರುತ್ತದೆ ಎಂಬುದು ಕಾಣುತ್ತದೆ. ಇವೆಲ್ಲಾ ವರ್ಣಿಸಲ್ಪಟ್ಟಿರುವ ಮಾತು ದಿನದ ಬಳಕೆಯ ಮಾತು; ಅರ್ಥಯುಕ್ತವಾದದ್ದು; ತಿಳಿವಿನಿಂದ

ಉಪಯೋಗಿಸಲ್ಪಟ್ಟಿದೆ. ಈ ಪದ್ಯಗಳಲ್ಲಿ ಉದಾರವಾದ ಭಾವನೆಗಳು ಆಳವಾದ ರಾಗಗಳು ಇರುವಂತೆ ನಯವಾದ ಪರಿಹಾಸ್ಯವೂ ಸೇರಿದೆ. ನಮ್ಮ ನಾಡ ಸಾಂಗತ್ಯಗಳು ಅನೇಕ ವೇಳೆ ನೀತಿಬೋಧೆಗಾಗಿ ಕೆಲವು ವೇಳೆ ಸಂಪ್ರದಾಯದ ಕತೆಗಳನ್ನು ಹೇಳುವುದಕ್ಕಾಗಿ ಉಪಯೋಗಿಸಲ್ಪಟ್ಟವೆ. ಎಲ್ಲಮ್ಮನ ಕತೆಯೆಂದು ಮಲೆನಾಡಿನಲ್ಲಿ ವಾಡಿಕೆಯಾಗಿರುವ ಕತೆ ಜನರಿಗೆ ದಾನಶೀಲತೆಯನ್ನು ಕಲಿಸುವುದಕ್ಕೆ ಬರೆಯಲ್ಪಟ್ಟಿತು ಎಂದು ಅದರಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಮುದುಕಿ ಮಗನ ಕತೆ ಎನ್ನುವುದರಲ್ಲಿ ಒಬ್ಬ ಅಕ್ಕ ತಮ್ಮನ ಮೈಮೇಲಿದ್ದ ಚಿನ್ನದ ಕಾಪಿನ ಆಸೆಗಾಗಿ ಅವನನ್ನು ಕೊಂದು ಅಧಿಕಾರಿಗಳ ಕೈಗೆ ಸಿಕ್ಕಿಕೊಳ್ಳುವ ವಿಷಯವನ್ನು ಹೇಳಿದೆ. ಸರಕಾರ ಇದೇ ತಪ್ಪು ಮಾಡಿದವರನ್ನು ದಂಡಿಸುತ್ತದೆ, ಎಂದು ತಿಳಿಸುವುದೇ ಇದರ ಉದ್ದೇಶ. ಈಚೆಗೆ ನಾನು ನೋಡಿದ ದೊಂಬರ ಚೆನ್ನಿ ಎಂಬ ದೊಂದು ನಾಡಗೀತೆಯಲ್ಲಿ ರಾಜನ ಗುರು ದೊಂಬರ ಹುಡುಗಿ ಚೆನ್ನಿ ಯನ್ನು ಮೋಹಿಸಿ ಅವಳ ಜೊತೆಗೆ ಹೊರಟುಹೋಗಲು ದೊರೆಯೂ ಅವನ ಹಿಂದೆಯೇ ಹೋದನೆಂದು ಆ ಮೇಲೆ ಪ್ರಸಾದವನ್ನು ಕೇಳಿ ತೆಗೆದುಕೊಳ್ಳಲಾಗಿ ಗುರುವೂ ಗುರುಪ್ರೇಯಸಿ ಚೆನ್ನಿಯೂ ಈಶ್ವರ ಪಾರ್ವತಿಯರೆಂದು ತಿಳಿಯಿತೆಂದೂ ಹೇಳಿದೆ. ಇದರ ಉದ್ದೇಶ ಗುರುವಿ ನಲ್ಲಿ ಹೆಚ್ಚು ನಂಬಿಕೆಯಿರಬೇಕು ಎನ್ನುವುದನ್ನು ಕಲಿಸುವುದು. ಜನರು ಕಲಿತದ್ದು ಈ ಜನತೆಯ ಕೃತಿಯಲ್ಲಿ ರೂಪುಗೊಂಡು ಇತರ ಜನಕ್ಕೆ ಅದೇ ಕಲಿವು ಸುಲಭವಾಗಿರುವುದು ಇಲ್ಲಿ ನಮಗೆ ಕಾಣುವುದು.

ಊರುಗಳ ಹೆಸರುಗಳು

ಪ್ರವಾಹದಿಂದ ನೆಲದಮೇಲೆ ಬರುವ ಎಕ್ಕಲು ಮಣ್ಣಿಂತೆ ಇಂಥ ಕೃತಿ ಜನರ ಬದುಕಿನಲ್ಲಿ ಉತ್ತಮ ಫಲಕ್ಕೆ ಕಾರಣವಾಗುತ್ತದೆ. ಇದೇ ರೀತಿಯಲ್ಲಿ ಸದಾ ಜನರ ಮನಸ್ಸನ್ನು ಹಿರಿಯ ಸಹವಾಸದಲ್ಲಿಟ್ಟು ಅವರ ಅಂತಸ್ತನ್ನೇ ಹೆಚ್ಚಿಸತಕ್ಕ ಒಂದು ಸೊಗಸು ನಮ್ಮ ಸೀಮೆಯ ಊರ ಹೆಸರುಗಳಲ್ಲೂ ಕಾಣುತ್ತದೆ. ನಾನು ಬೇರೆ ಒಂದು ಸಂದರ್ಭದಲ್ಲಿ ನಮ್ಮ ಸೀಮೆಯ ಲೇಪಾಕ್ಷಿ, ಮದಲಿಂಗನ ಕಣಿವೆ, ಬಂದಳಿಕೆ, ಎಂಬ ಮೂರು

ಸ್ಥಳಗಳ ಹೆಸರುಗಳನ್ನು ಕುರಿತು ಕತೆಗಳನ್ನು ಹೇಳಿದೇನೆ. ಹೀಗೆಯೇ ತಿರುಗಣ ಎಂಬ ಹಳ್ಳಿಯನ್ನು ಕುರಿತು, ಅಂತರಗಂಗೆಯನ್ನು ಕುರಿತು, ಬಾಬಾಬುಡನ್‌ಗಿರಿ, ಮಾರ್ಕಂಡೇಯನ ಗುಡ್ಡ, ಖಾಂಡ್ಯ, ಬಸವನಗುಡಿ, ನಿಜಗಲ್‌ದುರ್ಗ, ಚಿತ್ರದುರ್ಗ ಮುಂತಾದ ಅನೇಕ ಊರುಗಳನ್ನು ಕುರಿತು ಧಾರ್ಮಿಕ ಐತಿಹಾಸಿಕ ಕತೆಗಳು ಹಲವು ಜನರಲ್ಲಿ ವಾಡಿಕೆ ಯಾಗಿವೆ. ಇವುಗಳಂತೆ ಬೇರೆ ಕಾರಣಗಳಿಂದ ಸೊಗಸಾದ ಇತರ ಹೆಸರು ಗಳು ಅನೇಕ ಇವೆ. ಅರಳಮಲ್ಲಿಗೆ, ಮಲ್ಲಿಗೆವಾಳು, ಕುಡುಮಲ್ಲಿಗೆ, ಮಲ್ಲಿಗೇನಹಳ್ಳಿ; ಈ ಹೆಸರುಗಳನ್ನು ಇಟ್ಟ ಜನರು ಮಲ್ಲಿಗೆ ಎನ್ನುವ ಮಾತನ್ನು ನುಡಿಯುವುದರಲ್ಲಿ ನಾಲಗೆಗೆ ಇರುವ ಸುಖವನ್ನೂ, ಮಲ್ಲಿಗೆ ಎಂಬ ಮಾತಿನಿಂದ ಮನಸ್ಸಿನ ಮುಂದೆ ಬರುವ ಚಿತ್ರದ ಸೊಗಸನ್ನೂ, ಮಲ್ಲಿಗೆಯ ಭಾವನೆಯಿಂದ ಆತ್ಮಕ್ಕೆ ಉಂಟಾಗುವ ಶುದ್ಧ ಪರಿತೃಪ್ತಿ ಯನ್ನೂ ಬಲ್ಲವರು. ಇದನ್ನು ಹೇಳುವ ಜನರು ತಿಳಿದೋ ತಿಳಿಯದೆಯೋ ಆ ಹೆಸರಿಂದ ಬರುವ ಸಂಸ್ಕೃತಿಯಲ್ಲಿ ಭಾಗಿಗಳಾಗುತ್ತಾರೆ. ಹೀಗೆಯೇ ಸೊಗಸಾಗಿರುವ ಹೆಸರುಗಳು: ಇಲ್ಲಿ ಸಿರಿವಾಸಿ, ಇಲ್ಲಿ ಸಿರಿಯಂಗಳ; ಇಲ್ಲಿ ಸಿರಿವಂತೆ, ಇಲ್ಲಿ ಸಿರಿಯೂರು; ಸೊಗದವಾಣಿ, ಮಾದಲ, ಹಿಪ್ಪಲ; ಪೂನಾಡು, ಬೆಳವಲ, ಸಂಪಿಗೆ; ಅಮೃತಾಪುರ, ಅಮೃತೂರು. ಈ ಹೆಸರು ಗಳಲ್ಲಿ ಬಹಳ ಸೊಗಸಡಗಿದೆ. ಇದರಿಂದೆಲ್ಲ ನಮ್ಮ ಜನರಲ್ಲಿ ಪೂರ್ವದ ಸಂಸ್ಕೃತಿಯ ನೆನವು ನಿಂತಿದೆ.

ಈ ಹೆಸರುಗಳಿಂದ ದೊಡ್ಡವರಲ್ಲೂ ತಿಳಿದವರಲ್ಲೂ ಹಿರಿಯ ಸಂಸ್ಕಾರವುಂಟಾಗುತ್ತದೆಯೇ, ರಾಮಾಯಣದ ಕತೆಯನ್ನು ಓದಿ ತಿಳಿಯ ಬಲ್ಲ ಜನಕ್ಕೆ ರಾಮಾಯಣದ ಕತೆಗೆ ಸಂಬಂಧಪಟ್ಟ ಹೆಸರುಗಳಿಂದ ಆಗಬೇಕಾದ ಪ್ರಯೋಜನವೇನು, ಎಂದು ಕೆಲವರಿಗೆ ತೋರಬಹುದು ರಾಮಾಯಣವನ್ನು ಸ್ವತಃ ಓದಬಲ್ಲವರಿಗೆ ಆ ಓದುವ ವಯಸ್ಸು ಬಂದಾಗ್ಗೆ ಇಂಥ ಹೆಸರಿನಿಂದ ಪ್ರಯೋಜನವಿರುತ್ತದೆಯೋ ಇಲ್ಲವೋ ಹೇಳಲಾಗುವುದಿಲ್ಲ. ಕೆಲವರಿಗೆ ಇರುತ್ತದೆ; ಕೆಲವರಿಗೆ ಇಲ್ಲ. ರಾಮಾ ಯಣದಲ್ಲಿ ಮಾತ್ರ ಓದಿದಾಗ ಸೀತಾದೇವಿ ಮನಸ್ಸಿಗೆ ದೈವೀ ಸ್ತ್ರೀಯಾಗಿ ಕಾಣಬಹುದು. ನಮ್ಮೂರ ಹೊಳೆಯ ಬಳಿ ಆಕೆ ಇಲ್ಲಿ ಸ್ನಾನಮಾಡಿದರು,

ಆಗಿನಿಂದ ನೀರು ಇಲ್ಲಿ ನೋಡಿ, ಅರಿಸಿನದ ಬಣ್ಣದಿಂದ ಹರಿಯುತ್ತದೆ ಎಂದರೆ ಸೀತಮ್ಮ ನಮ್ಮ ಮನಸ್ಸಿಗೆ ಇನ್ನು ಸ್ವಲ್ಪ ಹತ್ತಿರ ಬರುತ್ತಾರೆ. ಇದು ಹೇಗಾದರೂ, ತಿಳಿಯದ ಜನಕ್ಕೆ ಮಕ್ಕಳಿಗೆ ಇಂಥ ಕತೆಗಳಿಂದ ಮನಸ್ಸು ವಿಕಾಸವಾಗುವುದೆನ್ನುವುದರಲ್ಲಿ ಸಂದೇಹವಿಲ್ಲ. ಅರಿತವರಿಗೆ ಕಟ್ಟು ಕತೆಯಾಗಿ ಕಾಣತಕ್ಕದ್ದು ಇಂತಹ ಸರಳ ಮತಿಗಳಿಗೆ ನಿಜವಾದ ಚರಿತ್ರೆಗಿಂತಲೂ ಹೆಚ್ಚು ನಿಜವಾಗಿ ಕಾಣುತ್ತದೆ. ಬಾಲ್ಯದಲ್ಲಿ ಜನದ ಊಹೆ ಇಂಥ ಹಿರಿಯ ವ್ಯಕ್ತಿಗಳನ್ನು ಕುರಿತು ಚಿತ್ರಗಳನ್ನು ಮಾಡಿಕೊಳ್ಳುತ್ತಾ ಪರಿಶುದ್ಧವಾಗುತ್ತದೆ. ಇದರಿಂದ ಬದುಕು ಪರಿಷ್ಕಾರವಾಗುತ್ತದೆ. ನಾವು ಹುಟ್ಟಿ ಬೆಳೆದ, ನಾವು ಓಡಿಯಾಡಿದ, ದೇಶದ ವಿಷಯವಾಗಿ ನಮ್ಮಲ್ಲಿ ಮಮತೆ ಬೆಳೆಯುವುದಕ್ಕೆ ಇದೆಲ್ಲ ಕಾರಣ. ಈ ಸ್ಥಳಗಳನ್ನು ಕುರಿತ ಪ್ರೇಮವು ದೇಶಲತೆಯ ಕೊಡಿಗಳಂತೆ ನಮ್ಮ ಹೃದಯವನ್ನು ಸುತ್ತಿಕೊಂಡು ನಾಡೆಂದ ಮಾತ್ರಕ್ಕೆ ಅದನ್ನು ಹಿಡಿದು ಅಲುಗಿಸುತ್ತದೆ. ಇವುಗಳ ನೆನವು ನಮ್ಮ ನಾಡ ಗಾಳಿಯಲ್ಲಿ ಕಸ್ತೂರಿಯ ಗಂಧವಂತೆ ಹರಡಿ ಎಲ್ಲಾ ವೇಳೆಯಲ್ಲಿಯೂ ಸೌಖ್ಯವನ್ನುಂಟುಮಾಡುತ್ತದೆ.

ಜನಸಾಮಾನ್ಯದ ಕಾವ್ಯಗಳು

ಸಣ್ಣ ಪದ್ಯಗಳಲ್ಲಿ ಊರ ಹೆಸರುಗಳಲ್ಲಿ ಕಾಣುವ ಇದೇ ಸಂಸ್ಕೃತಿ ಸಾಮಾನ್ಯ ಜನರ ಕಾವ್ಯಗಳನ್ನೂ ರಚಿಸಿದೆ. ಇದಕ್ಕೆ ಎರಡು ಉದಾಹರಣೆಗಳನ್ನು ಹೇಳಬಹುದು. "ಧರಣಿಮಂಡಲ ಮಧ್ಯದೊಳಗೆ ಮೆರೆಯುತಿಹ ಕರ್ಣಾಟದೇಶದಿ ಇರುವ ಕಾಳಿಂಗನೆಂಬ ಗೊಲ್ಲನ ಪರಿ" ಯನ್ನು ನಾವೆಲ್ಲ ಕೇಳಿದ್ದೇವೆ. ಈ ಸಣ್ಣ ಕಾವ್ಯದಲ್ಲಿ ಉತ್ತಮ ಕಾವ್ಯದ ಎಲ್ಲಾ ಲಕ್ಷಣಗಳೂ ಕಾಣುತ್ತವೆ. ಈ ಕವಿ ಹಳ್ಳಿಯ ಮಾಳೆದ ಎಳೆಯ ಮಾವಿನ ಮರದ, ಇನ್ನೂ ಇದೇ ರೀತಿಯ ಇತರವಾದ, ಪ್ರಕೃತಿ ಸೌಂದರ್ಯವನ್ನು ಬಲ್ಲನು; ಹಿರಿಯ ನಡತೆಯನ್ನು ಬಲ್ಲನು. ಸತ್ಯವೆಂಬುದು ತಾಯಿತಂದೆ ಸತ್ಯವೆಂಬುದು ಬಂಧುಬಳಗ ಎನ್ನುತ್ತಾನೆ. ಈ ಕಾವ್ಯದ ಹಸು ಕೊಟ್ಟ ಭಾಷೆಯನ್ನು ತಪ್ಪಲಾರದು. ಇವನಿಗೆ ಹಸುಗಳೆಂದರೆ ಬಹಳ ಪ್ರೀತಿ. ಗಂಗೆ ಬಾರೇ ಗೌರಿ ಬಾರೇ ತುಂಗಭದ್ರೆ ನೀನು

ಬಾರೇ ಎಂದು ಇವನು ಹಸುಗಳನ್ನು ಅಚ್ಚುಮೆಚ್ಚಾಗಿ ಕರೆಯುತ್ತಾನೆ. ಕತೆಯನ್ನು ಹೇಳುತ್ತಾ ನಮ್ಮ ಮನಸ್ಸನ್ನು ಹಿಂಡುವುದು ಇವನಿಗೆ ಸುಲಭ ವಾಗಿದೆ. ತಾಯಿ ಕರುವಿಗೆ ಹೇಳುವ ಮಾತೂ, ಜೊತೆಯ ಹಸುವಿಗೆ ಹೇಳುವ ಮಾತೂ, ಕರು ತಾಯಿಗೆ ಹೇಳುವ ಮಾತೂ ಕರುಳನ್ನು ಸುಲಿಸು ತ್ತವೆ. ಕಾವ್ಯದಲ್ಲಿ ಒಂದು ಭಾವನೆಯಾದರೂ ಸಹಜವಲ್ಲದ್ದಿಲ್ಲ. ಕವಿ ನೀತಿಯನ್ನು ಮುಖ್ಯವಾಗಿಟ್ಟು ಕತೆ ಬರೆದಿದ್ದಾನೆ. ಆದರೆ ಈ ನೀತಿ ಬೇಸರವಾಗುವಂತೆ ಮುಂದೆ ಬಂದು ಕತೆಯನ್ನು ಕೆಡಿಸಿಲ್ಲ. ಹಸುಗಳನ್ನು ಸಾಕಿ ಜೀವಿಸುವ ಜನಾಂಗದ ಮನಸ್ಸಿನ ಹಿರಿಯ ಗುಣಗಳನ್ನೆಲ್ಲಾ ಕವಿ ಇಲ್ಲಿ ಚಿತ್ರಿಸಿದ್ದಾನೆ. ಈ ಕಾವ್ಯ ತುರುಗಾಹಿ ಜನದ ಸಂಸ್ಕೃತಿಯ ಸಂಕ್ಷೇಪ ಕೋಶ. ಇದು ನಮ್ಮ ಜನರಲ್ಲಿ ಆದರ ಪಡೆದಿರುವುದನ್ನು ನೋಡಿದರೆ ಅವರ ಸಾಹಿತ್ಯಾಭಿರುಚಿ ಎಷ್ಟು ಶ್ರೇಷ್ಠವಾದದ್ದೆಂಬುದು ತಿಳಿಯುವುದು. ಹಾಗೆಯೇ ಅವರ ಮನಸ್ಸನ್ನು ಇದು ಎಷ್ಟು ಚೆನ್ನಾಗಿ ಚಿತ್ರಿಸಿರುವುದೆಂಬುದೂ ಕಾಣುವುದು. ಈ ಕತೆಯನ್ನು ಕೇಳದವರೇ ಇಲ್ಲ. ಈ ರೀತಿಯ ಸಾಹಿತ್ಯದಲ್ಲಿ ಸ್ವಲ್ಪ ದೊಡ್ಡ ಕಾವ್ಯಗಳ ಉದಾಹರಣೆಗಾಗಿ ಯಕ್ಷಗಾನ ನಳಚರಿತ್ರೆ ಎಂಬ ಒಂದು ಕೃತಿಯನ್ನು ಕುರಿತು ನಾಲ್ಕು ಮಾತನ್ನು ಹೇಳಬಹುದು. ಇದರಲ್ಲಿ ನಳದಮಯಂತಿಯರ ಕತೆ ಜನದ ಮನಸ್ಸಿಗೆ ತೋರುವ ರೀತಿಯಲ್ಲಿ ವರ್ಣಿಸಲ್ಪಟ್ಟಿದೆ. ನಳನು ರಾಜನು. ಆದರೆ ಅವನ ಮಾತೆಲ್ಲಾ ಹಳ್ಳಿಯ ರೀತಿಯ ಮಾತು. ಅವನ ಮಂತ್ರಿಯೂ ಹಳ್ಳಿಯ ಒಬ್ಬ ದೊಡ್ಡ ಮನುಷ್ಯ. ಹಂಸಗಳೂ ಕತೆಯ ರೀತಿಯವು. ಪಂಡಿತರಾದ ಕವಿಗಳು ಕೂಡಾ ಹಂಸಗಳನ್ನು ನೋಡಿಲ್ಲವೆಂದ ಮೇಲೆ ಈತನು ನೋಡಿಲ್ಲವೆಂದರೆ ಆಶ್ಚರ್ಯವೇನು? ಪಕ್ಷಿಯೊಂದು ಮರದ ಮೇಲೆ ಕುಳಿತಿರಲು ಅದನ್ನು ಹಿಡಿಯುವುದಕ್ಕೆ ನಳನು ಮಂತ್ರಿಯನ್ನು ಮರ ಹತ್ತು ಎನ್ನುತ್ತಾನೆ. ಸದ್ಯ ನಮ್ಮಲ್ಲಿ ಮಂತ್ರಿ ಕೆಲಸಕ್ಕೆ ಹಾಗಿರಲಿ ಸಾಮಾನ್ಯವಾಗಿ ಒಂದು ತಾಲ್ಲೂಕಿನ ಯಜಮಾನಿಕೆಗೆ ಕೂಡ ಮರ ಹತ್ತುವು ದರಲ್ಲಿ ಪರೀಕ್ಷೆಯಿಲ್ಲ. ಹಾಗೆ ಇದ್ದಿದ್ದರೆ ನಮ್ಮಲ್ಲಿ ಅನೇಕರಿಗೆ ಕೆಲಸ ಸಿಕ್ಕು ತ್ತಿರಲಿಲ್ಲ. ಹೆಣ್ಣುಮಗಳು ಎಂತ ಅಲಕ್ಷ್ಯವೆಂತಲೋ ಸೊಸೆಯನ್ನು ಪ್ರೀತಿ ಯಿಂದ ಕಾಣುವುದಿಲ್ಲವೆಂತಲೋ ನಮ್ಮ ಸಂಸಾರಗಳ ರೀತಿಯ ಮಾತು

ಸಹಜವಾಗಿ ಅಲ್ಲಲ್ಲಿ ಬರುತ್ತದೆ. ಮಧ್ಯೆ ಒಂದು ಸ್ಥಳದಲ್ಲಿ ಕೊನೆಯಲ್ಲಿ ಒಂದು ಸ್ಥಳದಲ್ಲಿ ಕವಿ ತನ್ನ ಗುರುಗಳನ್ನು ಸ್ಮರಿಸಿ ತನ್ನ ಹೆಸರನ್ನು ಹೇಳುತ್ತಾನೆ. ಕೃತಿ, ಕಂದ, ವಚನ, ಯಾಲಪದ್ಯ, ಸೀಸಪದ್ಯ, ಸೊಬಗಿನ ಸೋನೆ ಮುಂತಾದ ಮಾದರಿ ಮಾದರಿಯ ಪದ್ಯಗಳು ಬರುತ್ತವೆ. ಮರಗಳು ದೊಡ್ಡ ಕಾವ್ಯದಲ್ಲಿರುವಂತೆ ಕಂಡದ್ದು ಕಾಣದ್ದು ಎಲ್ಲಾ ಬರುತ್ತವೆ. ವಿರಹವೂ ಶೃಂಗಾರವೂ ಕಾವ್ಯದ ರೀತಿಯವು. ಅಂತೂ ಕವಿ ಎಲ್ಲಿಯೂ ತಡೆಯದೆ ತನ್ನ ಕವಿತಾಶಕ್ತಿಯ ವಿಷಯದಲ್ಲಿ ಸಂದೇಹ ಸಂಕೋಚಗಳಿಲ್ಲದೆ ಧಾರಾಳವಾಗಿ ಬರೆಯುತ್ತಾನೆ. ಇಂಥ ಕತೆಗಳು ಅನೇಕ ಇವೆ. ಸಾಮಾನ್ಯ ಜನರು ಇವುಗಳನ್ನೇ ವಿಶೇಷವಾಗಿ ಓದುವುದು.

ಗಾದೆಗಳು

ಜನದ ಮನಸ್ಸು ಕಾವ್ಯದಲ್ಲಿ ಕಾಣುವಂತೆ ಅವರ ಗಾದೆಗಳಿಂದಲೂ ಕಾಣುತ್ತದೆ. ಜನಾಂಗದಲ್ಲಿ ಪ್ರಚಾರದಲ್ಲಿರುವ ತಿಳಿವು ತಕ್ಕ ಮನಸ್ಸಿನಲ್ಲಿ ಬಿದ್ದಾಗ ನಾಲ್ಕು ಮಾತಿನಲ್ಲಿ ಘನಿಸಿ ಮುತ್ತಿನಂತಾಗುತ್ತದೆ, ಹಲವರ ಭಾವ ಒಬ್ಬನ ಮಾತಿನಲ್ಲಿ ಕಂಡ ಆ ಮಾತು ಹಲವರ ಮಾತಾಗುತ್ತದೆ. ಗಾದೆಗಳನ್ನು ನೋಡಿದರೆ ಜನಾಂಗದ ಮನಸ್ಸು ಎಂಥದೆಂದು ಊಹಿಸುವುದಕ್ಕೆ ಸಾಧ್ಯವಾಗುವುದಕ್ಕೆ ಇದೇ ಕಾರಣ. ನಮ್ಮ ಸೀಮೆಯ ಗಾದೆಗಳಲ್ಲಿ ಕಾಣುವ ಬುದ್ಧಿ ವೈಶಾಲ್ಯವು ಅದ್ಭುತವಾದದ್ದು. ಇವುಗಳಲ್ಲಿ ಕೆಲವು ಜನರ ಮೂಢ ಭಾವನೆಗಳನ್ನು ತಿದ್ದುವುದಕ್ಕೆ ಹೊರಟಿವೆ; ಇನ್ನು ಕೆಲವು ಜಾತಿಗಳ ತಪ್ಪುಗಳನ್ನು ತಿದ್ದುವುದಕ್ಕೆ ಹೊರಟಿವೆ: ಇನ್ನು ಕೆಲವು ಎಲ್ಲರಿಗೂ ಬುದ್ಧಿ ಹೇಳುವುವು, ಇನ್ನು ಕೆಲವು ಜನರ ಸ್ವಭಾವವನ್ನು ವರ್ಣಿಸುವುವು. ಎಲ್ಲದರಲ್ಲಿಯೂ ವಿಶಾಲವಾದ ಪ್ರಪಂಚಜ್ಞಾನವಿದೆ. ಅನೇಕ ಗಾದೆಗಳಲ್ಲಿ ಸರಸವಾದ ಹಾಸ್ಯವಿದೆ. ಇದು ಕಾಣುವಂತೆ ಇಲ್ಲಿ ಕೆಲವು ಉದಾಹರಣೆಗಳನ್ನು ಕೊಡಬಹುದು. ಜನರಿಗೆ ಕೆಲಸ ಮುಖ್ಯವಲ್ಲ; ಅದನ್ನು ಯಾರು ಮಾಡುತ್ತಾರೆ ಎನ್ನುವುದು ಮುಖ್ಯ. ಶಂಖದಿಂದ ಬಿದ್ದರೆ ತೀರ್ಥ. ಅಕ್ಕಸಾಲೆ ಕಿವಿ ಚುಚ್ಚಿದರೆ ನೊಚ್ಚಗೆ. ಅವನು ಕೆಡಿಸಿದರೂ ಸರಿಯೆ; ಇನ್ನು ಯಾರಾದರೂ ಚುಚ್ಚಿದರೆ ಅದು ಸರಿಯಾ

ಗಿದ್ದರೂ ಒಪ್ಪುವುದಿಲ್ಲ. ಕಾಸಿನ ಆಸೆಗೆ ಕೈಯ್ಯಲ್ಲಿದ್ದ ಸುಖವನ್ನು ಬಿಟ್ಟು ಎಲ್ಲೋ ಅಲ್ಪ ಸ್ವಲ್ಪ ಉಳಿಸಿಕೊಳ್ಳುವುದಕ್ಕೆ ದುಡ್ಡಿನ ಆಸೆಗೆ ಬೆಲ್ಲ ಮಾರಿ ಗೋಣಿಚೀಲ ನೆಕ್ಕಿದ ಎಂಬ ಗಾದೆ. ಸಾಮಾನ್ಯವಾಗಿ ಎಲ್ಲರೂ ನೆನೆದಿರ ಬೇಕಾದ ವಿವೇಕ "ಅಡಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು", "ಕುಣಿಯೋಕೆ ನಿಂತಮೇಲೆ ಕೊನೆ ಮುಸುಕು ಯಾಕೆ", "ಕುಂತು ಕೊಂಡು ಉಂಬುವವನಿಗೆ ಕುಡಿಕೆಯ ಹಣ ಸಾಲದು", "ಗಂಡಸು ಕೂತು ಕೆಟ್ಟ, ಹೆಂಗಸು ತಿರುಗಿ ಕೆಟ್ಟಳು", "ತಾಯನ್ನು ನೋಡಿ ಮಗಳನ್ನ ತಕ್ಕೊ, ಹಾಲು ನೋಡಿ ಎಮ್ಮೆ ತಕ್ಕೊ", ಎಂಬ ಗಾದೆಗಳಲ್ಲಿ ಕಾಣುತ್ತದೆ. ಜಾತಿಗಳ ಬುದ್ಧಿಗಳು "ಅಕ್ಕನ ಚಿನ್ನ ಆದರೂ ಅಕ್ಕಸಾಲೆ ಟೊಣೆಯದೆ ಬಿಡ", "ಹಾರುವನ ಆಳಾಗಬೇಡ ಗಾಣಿಗನ ಎತ್ತಾಗ ಬೇಡ", "ಹೊಲೆಯನಿಗೆ ಒಲ್ಲಿ ಕೊಟ್ಟರೆ ಕಲ್ಲು ಕಟ್ಟಿ ಹರಿದ", "ಕಂಕುಳಲ್ಲಿ ಕುರು ಸಲ್ಲ ಕೋಮಟಿಗನ ನೆರೆ ಸಲ್ಲ", ಮುಂತಾದ ಗಾದೆಗಳಲ್ಲಿ ಕಾಣುತ್ತವೆ. "ಕತ್ತೆಯಂತೆ ಅತ್ತೆ ಬೇಕು ಮುತ್ತಿನಂತ ತಾಯಿ ಬೇಕು" ಎಂಬ ಸೊಸೆಯ ಮಾತಿನಲ್ಲಿ ಹೆಣ್ಣುಮಕ್ಕಳ ಹಾರೈಕೆಗೆ ರೂಪು ಬಂದಿದೆ. "ನುಚ್ಚು ಉಂಡ ಮಗ ಇಚ್ಚೇಲಿ ಇದ್ದ, ತುಪ್ಪ ಉಂಡಳಿಯ ತಿಪ್ಪೇಲಿ ನಿಂತು ಬಗುಳಿದ" ಎಂಬ ಮಾತಿನಲ್ಲಿ ಮಗ ಅಳಿಯಂದಿರ ವ್ಯತ್ಯಾಸವನ್ನು ಹೇಳಿದೆ. "ಪೋಲಿಗೆ ತಾಳಿ ಕಟ್ಟಿದರೆ ಪೋಲಿ ಪೋಲಿ ತಾಲಿ ತಾಲಿ" ಎಂಬ ಮಾತಿನಲ್ಲಿ ಜನರ ಹುಟ್ಟು ಸ್ವಭಾವ ತಿದ್ದಿ ಚೆನ್ನಾಗಿ ಆಗುವುದಿಲ್ಲ ಎಂದು ಹೇಳಿದೆ. "ಅರಸನ ಚಿತ್ತ ಮರದ ನೆರಳು", "ಆದರೊಂದು ಅಡಿಕೇ ಮರ, ಹೋದರೊಂದು ಗೋಟಡಿಕೆ", "ಅಲಕ್ಕೆ ಹೂವಿಲ್ಲ ಸಾಲಕ್ಕೆ ಕೊನೆಯಿಲ್ಲ", "ತಂಗಳ ಉಂಡ ಬಡ್ಡಿ ಗಂಡನ ಹಸಿವು ಬಲ್ಲಳೇ", "ತಾಯಿ ಇದ್ದರೆ ತವರುಮನೆ ನೀರಿದ್ದರೆ ಬಾವಿ", "ನೀರಿನಲ್ಲಿರುವ ಕಪ್ಪೆ ಕುಡಿದರೂ ಕುಡಿಯಿತು, ಕುಡಿಯದಿದ್ದರೂ ಕುಡಿಯಿತು" ಎಂಬ ಗಾದೆಗಳಲ್ಲಿ ವಿಶಾಲವಾದ ಪ್ರಪಂಚಜ್ಞಾನ ಕಾಣುತ್ತದೆ. ಹಾಸ್ಯರಸ ಕಾಣುವ ಗಾದೆಗಳು ಮೇಲೆಯೇ ಕೆಲವು ಬಂದಿವೆ. "ಅಭ್ಯಾಸವಿಲ್ಲದ ಹಾರುವ ಹೋಮ ಮಾಡಿ ಗಡ್ಡ ಮೀಸೆ ಸುಟ್ಟುಕೊಂಡ", "ಗಾಣಿಗನ ಸಂಗಡ ಹೊಡೆ

ದಾಡಿ ಒಣರೊಟ್ಟಿ ತಿಂದನಂತೆ", "ಹನುಮಂತರಾಯಃ ಹಗ್ಗ ತಿನ್ನುವಾಗ ಪೂಜಾರಯ್ಯ ಶಾವಿಗೆ ಬೇಡಿದ", "ಅಜ್ಜಾ ಮದುವೆ ಎಂದರೆ ಯಾರಿಗೆ ನಂಗಾ ಎಂದ", ಎಂಬ ಗಾದೆಗಳಲ್ಲಿ ಈ ಹಾಸ್ಯ ಎಷ್ಟು ಸರಸವಾಗಿದೆ ಎಂದು ಕಾಣುವುದು. ಕೆಲವು ಗಾದೆಗಳಂತೂ ನಾಲ್ಕು ಮಾತಿನಲ್ಲಿ ಹೇಳಿರುವ ಕತೆಗಳಂತಿವೆ. "ಓಡಿಹೋಗೋ ಬಡ್ಡಿ ಹಾಲಿಗೆ ಹೆಪ್ಪು ಹಾಕುತ್ತಾಳೆಯೇ", "ಬೆಟ್ಟ ಎತ್ತಿ ತಲೆಯ ಮೇಲಿಟ್ಟರೆ ಎಷ್ಟು ದೂರ ಹೊತ್ತೇನೋ" ಎಂಬ ಗಾದೆಗಳು ಎರಡೂ ಎರಡು ಕತೆಯಾಗಿವೆ.

ಈ ಸಂಸ್ಕೃತಿಯಲ್ಲಿ ಕಾಣುವ ಗುಣಗಳು

ಈ ಉಪನ್ಯಾಸದಲ್ಲಿ ಮೊದಲು ನಮ್ಮ ಜನದ ಸಂಸ್ಕೃತಿಯನ್ನು ಬೆಳೆಸಿದ ಹಲವು ಮತಗಳನ್ನು ಸೂಚಿಸಿ ಆಮೇಲೆ ಅವುಗಳಿಂದ ಸಂಸ್ಕೃತಿ ಬೆಳೆದ ರೀತಿಯನ್ನು ಸ್ವಲ್ಪಮಟ್ಟಿಗೆ ವಿವರಿಸಿ ಅನಂತರ ಆ ಸಂಸ್ಕೃತಿ ಜನದ ಪದ್ಯಗಳಲ್ಲಿ ಕತೆಗಳಲ್ಲಿ ಗಾದೆಗಳಲ್ಲಿ ಹೇಗೆ ಕಾಣುತ್ತದೆಂಬುದನ್ನು ಸಂಕ್ಷೇಪವಾಗಿ ತೋರಿಸಿದ್ದಾಯಿತು. ಈಗ ಈ ಸಂಸ್ಕೃತಿಯ ಏರ್ಪಾಡಿನಲ್ಲಿ ತತ್ತ್ವಗಳಲ್ಲಿ ಕಾಣುವ ಗುಣ ದೋಷಗಳನ್ನು ಸ್ವಲ್ಪಮಟ್ಟಿಗೆ ಚರ್ಚೆ ಮಾಡಬಹುದು.

ಈ ಸಂಸ್ಕೃತಿಯ ಗುಣಗಳಲ್ಲಿ ಮೊದಲನೆಯದೆಂದರೆ ಅದು ಪ್ರವೃತ್ತಿಯ ದಾರಿಯನ್ನು ತೋರಿಸುವುದೆನ್ನುವುದು. ನೇತಿ ನೇತಿ ಎಂದು ಪರತತ್ತ್ವವನ್ನು ಅರಸುತ್ತ ಉಳಿದದ್ದೆಲ್ಲವನ್ನು ನಿರಾಕರಿಸುವುದು ಜ್ಞಾನದ ಮೇಲಣ ಮೆಟ್ಟಲುಗಳಲ್ಲಿ ಕೆಲವರಿಗೆ ಮಟ್ಟಿಗೆ ಸಾಧ್ಯವಾಗುವ ನಿಲುವು. ಸಾಮಾನ್ಯರಿಗೆ ಕೆಲವು ಗೊತ್ತಾದ ನಂಬಿಕೆಗಳ ಮೇಲೆ ಜೀವನದ ಅಸ್ತಿವಾರ ಹಾಕಿಕೊಡಬೇಕು. ಈ ಸಂಸ್ಕೃತಿಯಲ್ಲಿ ಈ ಗುಣ ಇದೆ. ದೇವರು ಇದಾನೆ; ಎಲ್ಲರನ್ನೂ ನೋಡಿಕೊಳ್ಳುತ್ತಿದಾನೆ; ಅವನ ಆಳ್ವಿಕೆಯಲ್ಲಿ ಸದ್ಯಕ್ಕೆ ಅಲ್ಲದಿದ್ದರೂ ಕೊನೆಗೆ ಸತ್ಯಕ್ಕೇ ಜಯ; ಸುಳ್ಳಿಗಲ್ಲ. ನಾವು ಸದಾ ಅವನ ಸಾನ್ನಿಧ್ಯದಲ್ಲಿದೇವೆ ಎಂಬುದನ್ನು ನೆನೆದು ಸರಿಯಾಗಿ ನಡೆದುಕೊಳ್ಳಬೇಕು. ಇವೇ ಮೊದಲಾಗಿ ಜೀವನ ಪಥದಲ್ಲಿ ಸಹಾಯವಾಗುವ

ಹಲವು ತತ್ತ್ವಗಳು ಈ ಸಂಸ್ಕೃತಿಯಲ್ಲಿ ಮುಖ್ಯಾಂಶವಾಗಿ ಸೇರಿವೆ. ಈ ಸಂಸ್ಕೃತಿ ಬೇರೆ ಬೇರೆಯ ಮಟ್ಟದ ತಿಳಿವಳಿಕೆಯನ್ನು ಒಟ್ಟು ಗೂಡಿಸಿಕೊಂಡು ಬಹು ಮತದ ಜನರು ಸೌಹಾರ್ದದಿಂದ ನಡೆಯು ವುದು ಸಾಧ್ಯವಾಗುವಂತೆ ಮಾಡಿದೆ; ಅವರವರ ಮನೋಧರ್ಮಕ್ಕೆ ಅನು ಗುಣವಾದ ರೀತಿಯಲ್ಲಿ ಅವರವರು ನಡೆಯಬಹುದೆಂಬ ಸಮಾಧಾನ ಸ್ಥಿತಿ ಯನ್ನು ಜನರಲ್ಲಿ ವಾಡಿಕೆ ತಂದಿದೆ. ಕೇವಲ ವಿಚಾರ ಪದ್ಧತಿಯ ಬೌದ್ಧ ಮತದಿಂದ ತಾಮಸ ಪೂಜೆಯೆಂಬ ಶಿಲಾ ಪೂಜೆಗಳವರೆಗೆ ಎಲ್ಲ ರೀತಿಯ ಧರ್ಮಕ್ಕೂ ಇದು ಎಡೆಕೊಟ್ಟು ಎಲ್ಲದರ ಸಮುಚ್ಚಯವಾಗಿದೆ. ಇದು ಸಾಧ್ಯವಾಗುವಂತೆ ಇದು ಒಳಗಿಂದ ತನ್ನನ್ನು ತಾನು ತಿದ್ದಿಕೊಳ್ಳಬಲ್ಲ ಸಂಸ್ಕೃತಿಯಾಗಿದೆ, ಎಂದರೆ ಇದು ಸಜೀವವಾದ ಸಂಸ್ಕೃತಿ. ದೋಷ ಗಳು ತಲೆದೋರಿದಹಾಗೆಲ್ಲ ಅವನ್ನು ಸರಿಪಡಿಸುವ ಏರ್ಪಾಡುಗಳು ತಲೆಯೆತ್ತಿರುವುದು ಇದರ ಚರಿತ್ರೆಯಲ್ಲಿ ಕಾಣಬರುವುದು, ಈ ತಿದ್ದು ಪಡಿಯನ್ನಾಗಲಿ ಈ ಚರಿತ್ರೆ ಒಂದೇ ಏರ್ಪಾಡಿನಲ್ಲಿ ದೇಶಕ್ಕೆಲ್ಲ ಹರಡುತ್ತೇನೆ ಎಂಬ ಸಾಹಸವನ್ನು ಮಾಡಿಲ್ಲ. ಇದರ ಧ್ಯೇಯ ಉತ್ತಮ ರೀತಿಯ ಮನುಷ್ಯನನ್ನೂ ಸಣ್ಣ ಸಣ್ಣ ಸಮಾಜವನ್ನೂ ಮಾಡತಕ್ಕದ್ದು: ಉತ್ತಮ ಜನಾಂಗವನ್ನಲ್ಲ, ಈ ಧ್ಯೇಯ ಉತ್ತಮವಾದದ್ದು ಆದರೂ ಮಿತವರಿತದ್ದು. ಇದರಲ್ಲಿ ತಿಳಿವಿಗೆ ಬೆಲೆ ಕಟ್ಟುವ ಧಾಷ್ಟ್ರ್ಯವಿಲ್ಲ. ಪುರಾಣ ಹೇಳು ವವನು ಹೇಳುತ್ತಾನೆ; ಕೊಡುವವನು ಬೇಕಾದದ್ದನ್ನು ಕೊಡಬಹುದು. ನೀತಿ ಹೇಳುವವನು ಹಾಡಿಕೊಂಡು ಬರುತ್ತಾನೆ; ನಿಮಗೆ ಇಷ್ಟವಿದ್ದರೆ ಹಿಡಿ ಅಕ್ಕಿ ಹಾಕಬಹುದು, ಇಲ್ಲದಿದ್ದರೆ ಬಿಡಬಹುದು. ಪ್ರತಿಯೊಂದು ಶಾಖೆಯಲ್ಲಿ ಕಾರ್ಯ ಉತ್ತಮವಾಗಲೆಂದು ಇದು ಪಂಗಡ ಪಂಗಡಗಳಿಗೆ ಕೆಲಸವನ್ನು ಹಂಚಿದೆ, ತಿಳಿದವರು ತಿಳಿಯದವರಿಗಾಗಿ ಜ್ಞಾನವನ್ನು ಹರಡುವ ಪ್ರಯತ್ನಮಾಡುವುದಕ್ಕೆ ಇದರಲ್ಲಿ ಏರ್ಪಾಡಿದೆ. ಇದರಲ್ಲಿ ಎಲ್ಲ ಕಲೆಗಳೂ ಜನ ಜೀವನದ ಪರಿಷ್ಕರಣಕ್ಕೆ ನೆರವಾಗಿ ಕರೆಯಲ್ಪಟ್ಟಿವೆ. ಇದು ಜನಕ್ಕೆಲ್ಲ ತಿಳಿವು ಸುಲಭವಾಗುವಂತೆ ಕತೆಯಿಂದ ಪುರಾಣದಿಂದ ಇತಿಹಾಸದಿಂದ ನೀತಿಯನ್ನು ವಿವರಿಸಿದೆ. ಇದು ಸಾಹಿತ್ಯ, ಧರ್ಮ ಶಾಸ್ತ್ರ, ಮತ, ತತ್ತ್ವ ಎಲ್ಲವನ್ನೂ ಒಡಗೊಂಡಿದೆ. ಇವು ಪಾಠಕ್ಕಾಗಿ

ಅಭ್ಯಾಸಕ್ಕಾಗಿ ಬೇರೆ ಬೇರೆಯಾದರೂ ಬಾಳಿನ ಏಳಿಗೆಗೆ ಎಲ್ಲವೂ ಒಂದೇ ಎಂಬ ವಿವೇಚನೆ ಈ ಸಂಸ್ಕೃತಿಯಲ್ಲಿ ಮೇಲ್ಗಡೆಯೇ ಕಾಣುತ್ತದೆ.

ಇದರ ಕೆಲವು ಕೊರತೆಗಳು

ಇಷ್ಟು ಗುಣಗಳಿವೆಯೆಂದಮೇಲೆ ಕೆಲವು ದೋಷಗಳೂ ಕಾಣುವುದರಲ್ಲಿ ಏನೂ ಆಶ್ಚರ್ಯವಿಲ್ಲ. ಪ್ರಾಯಶಃ ಆ ದೋಷಗಳು ಈ ಗುಣಗಳ ಮೂಲಕವೇ ಬಂದುವೆಂದು ಹೇಳಬಹುದು. ಮುಖ್ಯ ತತ್ತ್ವವನ್ನು ಹಿಡಿದು ನಡೆಯುವುದು ಸಾಕು ಎಂದೂ ವಿಚಾರ ಎಲ್ಲರಿಗೂ ಸಾಧ್ಯವಲ್ಲ ಎಂದೂ ಹೇಳಿದ್ದರಿಂದ ಈ ಸಂಸ್ಕೃತಿಯಲ್ಲಿ ವಿಚಾರಕ್ಕೆ ಸ್ಥಳವೇ ಇಲ್ಲವೊ ಎನ್ನುವಂತಾಗಿದೆ. ದೇವರು ಇದಾನೆಯೇ, ಧರ್ಮವೇ ಜಯಿಸುವುದೆನ್ನುವುದು ನಿಜವೇ ಎಂಬ ಪ್ರಶ್ನೆಗಳೇ ತಪ್ಪು ಎಂಬ ಭಾವನೆ ಜನರಲ್ಲಿ ಊರಿ ಹೋಗಿದೆ. ಇದರಿಂದ ಜನರಿಗೆ, ಹೊರಗೆ ದೀಪವಿರುವಾಗ ಕಣ್ಣೇಕೆ ಬೇಕು ಮುಚ್ಚಿಕೊ, ಎಂದು ಹೇಳಿದಂತಾಗಿದೆ. ಈ ಸಂಸ್ಕೃತಿಯು ಮಾಯಾ, ಕರ್ಮ, ಸ್ವಾತಂತ್ರ್ಯ ಮುಂತಾದ ಮಾತುಗಳನ್ನು ಜನರಲ್ಲಿ ವಾಡಿಕೆಗೆ ತಂದು ಅವುಗಳ ಭಾವಕ್ಕೆ ಸಾಕಾದಷ್ಟು ಗಮನವನ್ನು ಸೆಳೆಯದೆ ಇದ್ದದ್ದರಿಂದ ಚಿನ್ನಕ್ಕೆ ಬದಲು ಕಾಗೆಯ ಬಂಗಾರದಂತೆ ಸರಿಯಾದ ಭಾವನೆಗಳಿಗೆ ಪ್ರತಿಯಾಗಿ ತಪ್ಪು ಭಾವನೆಗಳು ಹಲವು ಜನರಲ್ಲಿ ವಾಡಿಕೆಗೆ ಬರುವಂತಾಯಿತು. ಹಿಡಿ ಹಿಡಿ ಜನರನ್ನು ಸರಿಪಡಿಸುವುದರಲ್ಲಿ ತೊಡಗಿ ಇದು ಜನರಲ್ಲಿ ನಮ್ಮ ನಾಡು ನಮ್ಮ ರಾಜ್ಯ ಎಂಬ ಭಾವನೆಯನ್ನು ಉಂಟು ಮಾಡುವ ವಿಷಯಕ್ಕೆ ಸಾಕಾದಷ್ಟು ಗಮನ ಕೊಡಲಿಲ್ಲ; ರಾಜ್ಯದ ಒಳ್ಳೆಯದಕ್ಕಾಗಿ ಒಂದು ಪಂಗಡ ನಷ್ಟವನ್ನು ಅಂಗೀಕರಿಸುವ ಮನೋಧರ್ಮವನ್ನು ಜನರಲ್ಲಿ ಬಿತ್ತಲಿಲ್ಲ. ಜನಾಂಗದ ಒಂದೊಂದು ಪಂಗಡ ಒಂದೊಂದು ಕೆಲಸವನ್ನು ಕೈಗೊಳ್ಳಲಿ ಎಂದು ಹೇಳಿದ್ದರಿಂದ ಧರ್ಮ ಪ್ರಚಾರದ ಕೆಲಸದವರನ್ನು ಅತಿ ಸ್ವತಂತ್ರರನ್ನಾಗಿ ಮಾಡಿತು, ಇತರರಿಗೆ ಈ ಮಾತು ಬೇಡವೆಂದು ಹೇಳಿತು; ಇದರಿಂದ ಹಲವು ಅನರ್ಥಗಳು ಉಂಟಾದವು. ಧರ್ಮಪ್ರಚಾರದವರ ಕೆಲಸವನ್ನೂ ಕಟ್ಟುನಿಟ್ಟಿನಲ್ಲಿಟ್ಟು ಅನಂತವಾದ ಧರ್ಮತತ್ತ್ವಗಳಿಗೆ ಒಂದು ಅಂತ್ಯವನ್ನು ಕಲ್ಪಿಸಿತು.

ಜ್ಞಾನದ ಬಾವಿಯನ್ನು ತೋಡುತ್ತ ನೀರ ಕಣ್ಣು ಸಿಕ್ಕುವವರೆಗೂ ಆಳಪಡಿಸಿ ಎಷ್ಟು ಸೇದಿದರೂ ನೀರು ಇರುವಂತೆ ಮಾಡುವುದಕ್ಕೆ ಪ್ರತಿಯಾಗಿ, ಮೈಸೂರಿನ ಅಗ್ರಹಾರಗಳ ಆಚಾರವಂತರ ಬಾವಿಗಳಂತೆ ಸ್ವಲ್ಪ ತೋಡಿ ಮೇಲಿಂದ ಎಷ್ಟು ನೀರು ಬಿಟ್ಟರೆ ಅಷ್ಟು ನೀರು ಅದರಲ್ಲಿರುವಂತೆ ಮಾಡಿತು; ಮನುಷ್ಯನ ಅಂತರಾಳದಲ್ಲಿರುವ ಜ್ಞಾನದ ಮೂಲವನ್ನು ಎಚ್ಚರಗೊಳಿಸಲಿಲ್ಲ. "ದೊಡ್ಡವರು ಹೇಳಿದಂತೆ, ನಮಗೇನು?" ಎಂಬ ತಾಮಸ ವಿಧೇಯತೆಯನ್ನು ಜನರಲ್ಲಿ ವಾಡಿಕೆಗೆ ತಂದಿತು. ದೇವರು ಎಲ್ಲವನ್ನೂ ಸರಿಪಡಿಸುತ್ತಾನೆ ಎಂದು ಹೇಳುವಲ್ಲಿ ಅನ್ಯಾಯವನ್ನು ಕಂಡಾಗ ಸಾಕಾದಷ್ಟು ಪ್ರಯತ್ನದಿಂದ ಅದನ್ನು ಪರಿಹರಿಸುವ ಕೆಲಸವನ್ನು ದೇವರು ನಮ್ಮ ಮೇಲೆ ಹೊರಿಸಿದಾನೆ ಎನ್ನುವುದನ್ನು ಹೇಳಲಿಲ್ಲ. ದೇವರ ಸ್ವರೂಪವನ್ನು ವರ್ಣಿಸುವ ಪುರಾಣಗಳನ್ನು ಹರಡಿ ಎಲ್ಲಿ ಯಾರು ಯಾವ ಅದ್ಭುತ ನಡೆಯಿತೆಂದರೂ ಇರಬಹುದು ಎಂದು ಸುಮ್ಮನಾಗುವುದನ್ನು ಪದ್ಧತಿ ಮಾಡಿತು. ಸೀಮೆಯಲ್ಲಿ ಎಲ್ಲಿ ನೋಡಿದರೂ ಅದ್ಭುತಗಳೇ, ಎಲ್ಲೆಲ್ಲಿಯೂ ಆಶ್ಚರ್ಯಗಳೇ. ಹಲವು ರೀತಿಯ ಮನೋಧರ್ಮಕ್ಕೆ ಹಲವು ಸಾಧನಗಳು ಇವೆ ಎಂಬ ಪಾಠ ಹೇಳುವಲ್ಲಿ ಒಬ್ಬರನ್ನೊಬ್ಬರು ತಿದ್ದುವುದು, ಸಾಧ್ಯವಾದರೆ ಎಲ್ಲರೂ ಮೇಲಣ ದಾರಿಯನ್ನು ಹಿಡಿಯುವುದು, ಎನ್ನುವ ಪ್ರಯತ್ನವಿಲ್ಲದಂತೆ ಮಾಡಿತು. ಮನುಷ್ಯನು ಬೆಳೆಯುವುದಕ್ಕೆ ಹಲವು ಜನ್ಮಗಳಿವೆ ಎಂಬ ತತ್ತ್ವದ ಫಲವಾಗಿ ಈ ಜನ್ಮದಲ್ಲಿ ಸಾಧ್ಯವಾದಷ್ಟು ಮೇಲಕ್ಕೇಳಬೇಕು ಎಂಬ ಭಾವನೆಯನ್ನು ಕುಗ್ಗಿಸಿತು. ತಿಳಿದವರಿಗೆ ಹೆಚ್ಚಿನ ವಿಷಯ ಇರಲಿ, ಸಾಮಾನ್ಯ ಜನರಿಗೆ ಅವರ ಯೋಗ್ಯತೆಗೆ ತಕ್ಕಷ್ಟು ತತ್ತ್ವವನ್ನು ಹೇಳುವುದು, ಎನ್ನುತ್ತ ಹೀಗೆ ಹೇಳುವಾಗ ಹೆಚ್ಚಾದದ್ದು ಬೇರೆ ಇದೆ ಎಂದು ಸಾಮಾನ್ಯರಿಗೆ ಹೇಳುವುದನ್ನು ಮರೆತಿತು.

ಹೀಗೆಂದ ಮಾತ್ರಕ್ಕೆ ನಮ್ಮ ಜನಾಂಗ ತಾನು ಮಾಡಬೇಕಾಗಿದ್ದ ಕೆಲಸದಲ್ಲಿ ಸೋತುಹೋಯಿತು ಎಂದು ಅರ್ಥವಲ್ಲ. ಜನಜನಕ್ಕೇ ಉತ್ತಮ ಜ್ಞಾನ ಹರಡುವ ಮೊದಲು ಈ ಅವಸ್ಥೆಗಳೆಲ್ಲಾ ಮಧ್ಯೆ ಬರಲೇಬೇಕು. ಜನ ಬೆಳೆಯುವ ರೀತಿಯೇ ಇದು. ಅಲ್ಲದೆ ಸಂಸ್ಕೃ

ಯಾವುದೋ ಒಂದು ಸಮಯದಲ್ಲಿ ಬೆಳೆಯುವುದನ್ನು ಮುಗಿಸಿ ನಿಂತ ಹಾಗೆ ಭಾವಿಸುವುದು ಚರ್ಚೆಯ ಅನುಕೂಲಕ್ಕಾಗಿ ಹೊರತು ನಿಜವಾಗಿ ಅದು ನಿಂತಿರುವುದಿಲ್ಲ; ಸದಾ ಬೆಳೆಯುತ್ತಲೇ ಇರುತ್ತದೆ. ತಪ್ಪು ಮಾಡಿದಾಗಲೂ ಅದು ಸರಿಯ ಕಡೆಗೆ ಒಂದು ಹೆಜ್ಜೆಯನ್ನು ಇಡುತ್ತಿದೆ. ಅಲ್ಲದೆ ಈ ದೋಷಗಳು ಬೇಕೆಂದು ಸ್ವೀಕರಿಸಿದುವಲ್ಲ; ಒಳ್ಳೆಯದಕ್ಕೆಂದು ಮಾಡಿರುವ ಏರ್ಪಾಡಿನಿಂದ ತಾವಾಗಿ ಬಂದು ಸೇರಿದುವು. ಇವುಗಳಿಂದ ಬಿಡುಗಡೆ ಹೊಂದಲು ಈ ಮೊದಲೇ ಯತ್ನಗಳು ನಡೆದಿವೆ. ಈ ವಿಮರ್ಶೆಯ ಉದ್ದೇಶ ಮುಂದೆ ನಾವು ಏನು ಮಾಡಬೇಕು ಎಂದು ವಿಚಾರಿಸಿ ನಮ್ಮ ಜನಾಂಗ ಈ ಸಂಸ್ಕೃತಿಯನ್ನು ಇನ್ನೂ ಚೆನ್ನಾಗಿ ಮಾಡುವ ಪ್ರಯತ್ನಕ್ಕೆ ಕೈಹಾಕಲಿ ಎನ್ನುವುದು ಮಾತ್ರ. ಈ ವಿಷಯವನ್ನು ವಿಚಾರ ಮಾಡುವುದು ಜನರ ಮುಖಂಡರ ಕರ್ತವ್ಯ.

ಮುಂದಿನ ಮಾತು

ಮುಖ್ಯ ನಾವು ತಿಳಿಯಬೇಕಾದ ವಿಷಯ ಇದು. ಮಾನವ ವರ್ಗವೇ ಸತ್ಯದ ಅನ್ವೇಷಣದಲ್ಲಿ ತೊಡಗಿದೆ; ಕಂಡಷ್ಟು ಸತ್ಯಕ್ಕೆ ತನ್ನ ನಾಗರಿಕತೆಯಲ್ಲಿ ದೇಹವನ್ನು ಕೊಟ್ಟಿದೆ. ಆ ನಾಗರಿಕತೆಯ ತಿರುಳು ಸಂಸ್ಕೃತಿ. ಕಾಲ ಬಂದಹಾಗೆ ಆ ನಾಗರಿಕತೆ ಖಿಲವಾಗುತ್ತದೆ. ಆಗ ಸಂಸ್ಕೃತಿ ಆ ದೇಹವನ್ನು ಬಿಡಬೇಕು; ಬೇರೆ ದೇಹವನ್ನು ತೆಗೆದುಕೊಳ್ಳಬೇಕು. "ವಾಸಾಂಸಿ ಜೀರ್ಣಾನಿ ಯಥಾ ವಿಹಾಯ ನವಾನಿ ಗೃಹ್ಣಾತಿ ನರೋಽಪರಾಣಿ । ತಥಾ ಶರೀರಾಣಿ ವಿಹಾಯ ಜೀರ್ಣಾನ್ಯನ್ಯಾನಿ ಸಂಯಾತಿ ನವಾನಿ ದೇಹೀ" ಎಂದು ಒಂದೊಂದು ಜೀವಾತ್ಮವನ್ನು ಕುರಿತು ಹೇಳಿದ ಮಾತು ಜನಾಂಗದ ಜೀವಕ್ಕೂ ಅನ್ವಯಿಸುವುದು. ನಾಗರಿಕತೆಯ ಹಿಂದಿನ ಏರ್ಪಾಡುಗಳು ಖಿಲವಾಗಿ ಶುಷ್ಕವಾದಾಗ ಅವುಗಳನ್ನು ಹಿಡಿದುಕೊಂಡು ಕುಳಿತಿರುವುದೇ? ಜೀವವನ್ನು ಹಿಡಿಯಲು ನೋಡುವುದೆ? ಕಾಷ್ಠವಾದ ದೇಹವನ್ನು ಬಿಟ್ಟು ಜೀವವನ್ನು ಹಿಡಿಯುವುದೇ ಸರಿ. ಹೀಗೆ ಮಾಡದೆ ವಾಡಿಕೆಯ ಮಮತೆಯಿಂದ ಈ ದೇಹ ಇರಲಿ ಎಂದು ಅದನ್ನು ಹಿಡಿದು ಅದರಲ್ಲಿದ್ದ ಜೀವವನ್ನು

ಮರೆತರೆ ಭೀಮನ ಶವವನ್ನು ಹೊತ್ತುಕೊಂಡು ನಡೆದ ಧರ್ಮರಾಯ ನಂತೆ ನಾವು ಪ್ರಧಾನ ತತ್ತ್ವವನ್ನು ತೊರೆದು ಗೌಣವಾದದ್ದನ್ನು ಅವಲಂಬಿಸಿದಂತೆ ಆಗುತ್ತದೆ. ಇಂಥ ಮೋಹ ಸಹಜ; ಅದನ್ನು ಬಿಡು ವುದು ಸುಲಭವಲ್ಲ. ಆದರೆ ಅದನ್ನು ಬಿಟ್ಟರೆ ಮಾತ್ರ ನಾವು ಉದ್ಧಾರ ವಾಗಬಹುದು. ದೇಶ ದೇಶದ ಜನರು ಸೇರಿ ಸಾವಿರಾರು ಶತಮಾನ ಕಾಲದಿಂದ ಯತ್ನಮಾಡಿ ಮಾನವ ವರ್ಗದ ಧ್ಯೇಯಗಳನ್ನು ಉತ್ತಮ ವಾಗಿ ಮಾಡುತ್ತ ಬಂದಿದಾರೆ. ಇದಕ್ಕೆ ನಮ್ಮ ಜನರು ಸಹಾಯ ಮಾಡಿದಾರೆ; ಇದೇ ಕೆಲಸವನ್ನು ನಾವು ಮುಂದಕ್ಕೂ ಮಾಡಬೇಕು.

ಪ್ರಪಂಚದ ಪ್ರಕೃತ ಸ್ಥಿತಿಯನ್ನು ನೋಡಿದರೆ ನಾವು ನಮ್ಮ ಜನರಲ್ಲಿ ಹರಡಬೇಕಾದ ಭಾವನೆಗಳು ಯಾವುವೆಂದು ನಮಗೆ ತೋರು ವುದು. ದೇವರಿದಾನೆ ಎನ್ನುವುದು ನಮ್ಮಲ್ಲಿ ಎಲ್ಲ ತರಗತಿಯ ಮನಸ್ಸಿಗೂ ಪರಿಚಿತವಾದ ಭಾವನೆ. ಅವನು ಎಲ್ಲ ಲೋಕದ ದೇವರು ಎನ್ನುವುದು ನಮಗೆ ತಿಳಿದ ವಿಷಯ. ಆದರೆ ಅದು ಮನಸ್ಸಿಗೆ ಬಂದಿಲ್ಲ. ವಿಶ್ವವೆಲ್ಲ ಒಂದೇ ಕುಟುಂಬ. ಹಲವು ದೇಶದಲ್ಲಿ ಹಲವು ಹೆಸರಿನಿಂದ ಪೂಜಿಸುತ್ತಿರುವ ಪರವಸ್ತು ಒಂದೇ; ಶಿವ ದೊಡ್ಡವನೋ ಹರಿ ದೊಡ್ಡವನೋ ಎನ್ನುವುದು ಹಸ್ತಿ ದೊಡ್ಡದೋ ಆನೆ ದೊಡ್ಡದೋ ಎಂದು ಕೇಳಿದರೆ ಹೇಗೋ ಹಾಗೆ ಅವಿವೇಕ. ಭೇದವಿರುವುದು ದೇವರನ್ನು ಕುರಿತ ಭಾವಗಳಲ್ಲಿ; ಎಷ್ಟು ಜನ ಇದಾರೋ ಅಷ್ಟು ಭಾವಗಳು ಸಾಧ್ಯ, ಅಷ್ಟು ಮತಗಳು ಸಾಧ್ಯ. ಆದ್ದ ರಿಂದ ಒಬ್ಬೊಬ್ಬನೂ ಮತ್ತೊಬ್ಬನ ಮತದ ವಿಷಯದಲ್ಲಿ ಸಮಾಧಾನ ವಾಗಿ ನಡೆಯಬೇಕು; ಸಾಧ್ಯವಾದಲ್ಲಿ ತನ್ನ ಅವನ ಭಾವನೆಯನ್ನು ಸರಿ ಪಡಿಸಿಕೊಳ್ಳಲು ಯತ್ನಮಾಡಬೇಕು. ಪರತತ್ತ್ವದ ಮುಖವಾಗಿ ನಡೆಯು ವುದೇ ಮನುಷ್ಯನ ಸ್ವಭಾವಕ್ಕೆ ಸರಿಯಾದ ಬೆಳವಣಿಗೆ; ಎಲ್ಲ ನಡತೆಯೂ ಪರತತ್ತ್ವಕ್ಕೆ ಒಪ್ಪುವಂತೆ ಇರಬೇಕು; ಇದೇ ಧರ್ಮ; ಇದಕ್ಕೆ ವಿರೋಧ ವಾದದ್ದೆಲ್ಲ ಅಧರ್ಮ. ಮನುಷ್ಯನ ಪರಮ ಸುಖ ಧರ್ಮದಲ್ಲಿ ನಡೆಯುವುದ ರಲ್ಲಿಯೇ ಇದೆ; ಅದೇ ಸ್ವರ್ಗ; ಧರ್ಮವೆನ್ನುವುದು ಎಲ್ಲಿದ್ದರೂ ಧರ್ಮವೆ; ಅಧರ್ಮ ನಮ್ಮಲ್ಲಿದ್ದರೂ ಅಧರ್ಮವೆ. ಧರ್ಮಕ್ಕೆ ಸರಿಯಾಗಿ ನಡೆಯದೆ ಹೋದರೆ ಮನುಷ್ಯನು ತನ್ನ ನಿಜವಾದ ಸ್ವಭಾವಕ್ಕೆ ವಿರೋಧವಾಗಿ

ಆಚರಿಸಿ ತನ್ನ ಜನ್ಮವನ್ನು ತಾನೇ ವ್ಯರ್ಥಮಾಡಿಕೊಳ್ಳುತ್ತಾನೆ ; ಅದಕ್ಕೆ ಬೇರೆ ಶಿಕ್ಷೆ ಆವಶ್ಯಕವಿಲ್ಲ, ಇಲ್ಲಿ ಕರ್ಮದಲ್ಲಿಯೇ ಶಿಕ್ಷೆ ಅಡಗಿದೆ. ಒಬ್ಬೊಬ್ಬ ಮನುಷ್ಯನೂ ಉತ್ತಮ ಸ್ಥಿತಿಗೆ ಬರಬೇಕು, ಎಲ್ಲ ಜನವನ್ನೂ ಸಮವಾಗಿ ಕಾಣಬೇಕು; ಇದರಿಂದ ಒಬ್ಬೊಬ್ಬನ ಬಾಳು ಸಾರ್ಥಕವಾಗುವುದು. ಇದರಂತೆಯೇ ನಮ್ಮ ಜನಾಂಗದ ಬಾಳು ಸಾರ್ಥಕವಾಗಬೇಕಾದರೆ ನಾವು ಈ ತತ್ತ್ವಗಳನ್ನು ಅನುಸರಿಸಿ ಪ್ರಪಂಚದ ಬೆಳವಣಿಗೆಗೆ ಸಹಾಯ ರಾಗಬೇಕು. ದೇಶವೆಂಬ ಬುದ್ಧಿಯಿಂದ ಒಂದಾಗಿ ನಡೆದು ಜನಾಂಗ ಗಳಲ್ಲಿ ದಕ್ಷರೆನಿಸಿಕೊಳ್ಳಬೇಕು. ರಾಜ್ಯವೆನ್ನುವುದು ಜನವೆಲ್ಲ ಸೇರಿ ಮಾಡಿರುವ ಒಂದು ಸಂಸ್ಥೆ ; ಪ್ರಜೆಗಳೂ ಅಧಿಕಾರಿಗಳೂ ಎಲ್ಲ ಕೆಲಸ ದಲ್ಲಿಯೂ ಈ ಹಿರಿಯ ದೃಷ್ಟಿಯಿಂದ ತೊಡಗಬೇಕು. ಇದು ನಮ್ಮ ಜನರಲ್ಲಿ ಹರಡಬೇಕಾಗಿರುವ ತಿಳಿವು. ಒಟ್ಟಿನಲ್ಲಿ ಇದುವರೆಗೆ ಜನಾಂಗ ಮಾಡಿರುವ ಅನ್ವೇಷಣವೆಲ್ಲ ಸಾರ್ಥಕವಾಗುವಂತೆ ನಾವು ಹೊಸದೊಂದು ಕಾರ್ಯಕ್ರಮವನ್ನು ಏರ್ಪಡಿಸಿಕೊಂಡು ಮುಂದುವರಿಯಬೇಕು. ಹೀಗೆ ಮಾಡಿದರೆ ಕನ್ನಡ ನಾಡು ತನ್ನ ಶ್ರೇಯಸ್ಸನ್ನು ಸಾಧಿಸಿಕೊಳ್ಳುತ್ತದೆ ; ಭರತವರ್ಷಕ್ಕೆ ಹೆಸರನ್ನು ತರುತ್ತದೆ. ಹಾಗೆಯೇ ಅದು ಮಾನವ ವರ್ಗದ ಉಚ್ಚಧ್ಯೇಯಗಳ ಸಾಧನೆಯಲ್ಲಿ ತನ್ನ ಯೋಗ್ಯತೆಗೆ ತಕ್ಕಂತೆ ಸಹಾಯಮಾಡಿದಂತಾಗುತ್ತದೆ.

ಇದೆಲ್ಲ ಬರಿಯ ಕನಸಿನ ಮಾತೇನೂ ಅಲ್ಲ. ಸಾವಿರಾರು ವರ್ಷದ ನಾಗರಿಕತೆಯ ಫಲವಾಗಿ ಉತ್ತಮ ಸಂಸ್ಕೃತಿಯುಳ್ಳ ಸಂಸಾರಗಳಲ್ಲಿ ಹುಟ್ಟಿ ಉತ್ತಮ ರೀತಿಯ ವಿದ್ಯೆಯನ್ನು ಪಡೆದು ಪೂರ್ವದೇಶದ ಭಾವ ಪಶ್ಚಿಮ ದೇಶದ ಭಾವಗಳ ಉತ್ತಮ ಭಾಗವನ್ನು ಹೀರಿ ನಮ್ಮ ದೇಶದಲ್ಲಿ ಈಚೆಗೆ ಅನೇಕ ಮಹನೀಯರು ದೇಶದ ಸೇವೆಯನ್ನು ಮಾಡಿದಾರೆ. ಇಂಥ ಅನೇಕ ರತ್ನಗಳ ಮಧ್ಯೆ ಜೀವರತ್ನವಾಗಿ ಮಹಾತ್ಮಾ ಗಾಂಧಿ ಯವರು ಈಗ ನಮ್ಮೆಲ್ಲರ ಕಣ್ಣೆದುರಿಗೇ ದೇಶವನ್ನು ಉದ್ಧಾರಮಾಡು ತ್ತಿದಾರೆ (೧೯೩೧). ಅವರ ಮಹಿಮೆಯಿಂದ ಅನೇಕ ಉತ್ತಮ ಭಾವಗಳು ಜೀವನದಲ್ಲಿ ಈಗಾಗಲೇ ಹರಡಿವೆ. ಹಿರಿಯ ಧ್ಯೇಯದಲ್ಲಿ ನಂಬಿಕೆ ಯಿರುವ ಅನೇಕರು ಕೆಲಸಮಾಡಿ ಜನತೆಯ ಏಳ್ಗೆಯನ್ನು ಮುಂದಾಗಿಟ್ಟು